ಪ್ರಸ್ತಾವವು ಅಂಗೀಕರಿಸಲ್ಪಟ್ಟಿತು

(ಖಂಡ 2ರಿಂದ 8ರವರೆಗೆ ಎರಡೂ ಸೇರಿದಂತೆ ಈ ವಿಧೇಯಕಕ್ಕೆ ಸೇರಿಸಲ್ಪಟ್ಟಿತು)

ಖಂಡ 1 ಇತ್ಯಾದಿ:-

ಛೇರ್ಮನ್:- ಪ್ರಸ್ತಾವ ಏನೆಂದರೆ, ''ಮೊದಲನೇ ಖಂಡ, ದೀರ್ಘಶೀರ್ಷಿಕೆ, ಪ್ರಸ್ತಾವನೆ ಹಾಗೂ ಅಧಿನಿಯಮಗೊಳಿಸುವ ಸೂತ್ರ ಸಂಹಿತೆ ವಿಧೇಯಕದ ಭಾಗವಾಗಿರುತ್ತದೆ.''

ಪ್ರಸ್ತಾವವನ್ನು ಅಂಗೀಕರಿಸಲಾಯಿತು.

(ಮೊದಲನೇ ಖಂಡ, ದೀರ್ಘಶೀರ್ಷಿಕೆ, ಪ್ರಸ್ತಾವನೆ ಹಾಗೂ ಅಧಿನಿಯಮಗೊಳಿಸುವ ಸೂತ್ರ ಸಂಹಿತೆ ವಿಧೇಯಕಕ್ಕೆ ಸೇರಿಸಲಾಯಿತು)

ಪ್ರಸ್ತಾವದ ಅಂಗೀಕಾರ

ಶ್ರೀ ಹಾರ್ನಹಳ್ಳಿ ರಾಮಸ್ವಾಮಿ (ಕಾನೂನು ಹಾಗೂ ಸಂಸದೀಯ ವ್ಯವಹಾರಗಳ ಸಚಿವರು):- ಮಾನ್ಯ ಅಧ್ಯಕ್ಷರೆ, ''1993ರ ಬೆಂಗಳೂರು ಅಭಿವೃದ್ಧಿ ಪ್ರಾಧಿಕಾರ (ತಿದ್ದುಪಡಿ) ವಿಧೇಯಕವನ್ನು ಅಂಗೀಕರಿಸಬೇಕೆಂದು ಕೋರುತ್ತೇನೆ.''

ಛೇರ್ಮನ್:- ಪ್ರಸ್ತಾವ ಏನೆಂದರೆ, 1993ರ ಬೆಂಗಳೂರು ಅಭಿವೃದ್ಧಿ ಪ್ರಾಧಿಕಾರ (ತಿದ್ದುಪಡಿ) ವಿಧೇಯಕವನ್ನು ತಿದ್ದುಪಡಿ ಮಾಡಿರುವಂತೆ ಅಂಗೀಕರಿಸುವುದು.

ಪ್ರಸ್ತಾವ ಅಂಗೀಕರಿಸಲ್ಪಟ್ಟಿತು ಮತ್ತು ಮಸೂದೆಗೆ ಒಪ್ಪಿಗೆ ನೀಡಲಾಯಿತು

ಶ್ರೀ ಬಿ.ಎಸ್. ಯಡಿಯೂರಪ್ಪ:- ಸನ್ಮಾನ್ಯ ಅಧ್ಯಕ್ಷರೆ, ನೆರೆಹಾವಳಿ ಬಗ್ಗೆ ಸಂಬಂಧಪಟ್ಟ ಸಚಿವರು ಉತ್ತರ ಕೊಡಬೇಕಾಗಿದೆ. ಅದು ಅತ್ಯಂತ ಮಹತ್ತರವಾದ ವಿಷಯ. ಅದು ಚರ್ಚೆಯಾಗಬೇಕಾಗಿದೆ. ಬೇರೆ ಬಿಲ್ ಅಂಥ ಮಹತ್ವದ್ದು ಏನಲ್ಲ. ಮುಂದೆ ಅದನ್ನು ತೆಗೆದುಕೊಳ್ಳೋಣ. ದಯಮಾಡಿ ಮಾನ್ಯ ಕಂದಾಯ ಸಚಿವರು ನೆರೆಹಾವಳಿ ಬಗ್ಗೆ ಉತ್ತರ ಕೊಡುವುದನ್ನು ಪ್ರಾರಂಭ ಮಾಡಲಿ. ಬಹಳ ಮಹತ್ವವಾದಂಥ ಸಂಗತಿ ಬಗ್ಗೆ ಚರ್ಚೆ ಮಾಡಿದರೆ ಅನುಕೂಲವಾಗುತ್ತದೆ. ನಾಳೆ ಕೊನೆಯ ದಿವಸ. ಅದಕ್ಕೋಸ್ಕರ ನಾನು ವಿನಂತಿ ಮಾಡುತ್ತಿದ್ದೇನೆ.

ಛೇರ್ಮನ್:- ಇನ್ನೊಂದು ಬಿಲ್ ಇದೆ.

ಶ್ರೀ ವಾಟಾಳ್ ನಾಗರಾಜ್:- ಮೊದಲು ಸಚಿವರು ಉತ್ತರ ಕೊಡಲಿ. 2-3 ದಿವಸಗಳಿಂದ ಉತ್ತರ ಕೊಡುವುದಕ್ಕೆ ಆಗಿಲ್ಲ. ಇದು ಬಹಳ ಪ್ರಮುಖವಾದುದು.

ಶ್ರೀ ಬಿ.ಎಸ್. ಯಡಿಯೂರಪ್ಪ:- ಇಲ್ಲದಿದ್ದರೆ ನಾವೆಲ್ಲರೂ ಹೊರಗಡೆ ಹೋಗಬೇಕಾಗುತ್ತದೆ. ಯಾವುದಕ್ಕೆ ಮಹತ್ವ ಕೊಡಬೇಕೋ ಅದಕ್ಕೆ ಮಹತ್ವ ಕೊಡದಿದ್ದರೆ!

ಶ್ರೀ ವಾಟಾಳ್ ನಾಗರಾಜ್:- ನೆರೆಹಾವಳಿ ಬಗ್ಗೆ ಮಂತ್ರಿಗಳು ಉತ್ತರ ಕೊಡಲಿಲ್ಲವೆಂದು ನಾವು ಸಭಾತ್ಯಾಗ ಮಾಡುತ್ತೇವೆ.

(ಗೊಂದಲ)

ಶ್ರೀ ವಾಟಾಳ್ ನಾಗರಾಜ್:- ನೆರೆಹಾವಳಿ ಬಗ್ಗೆ ಇಲ್ಲಿ ಸಮಗ್ರವಾಗಿ ಚರ್ಚೆ ನಡೆದಿದೆ. ಮಾನ್ಯ ಮಂತ್ರಿಗಳು ಉತ್ತರ ಕೊಡುವುದಕ್ಕೆ ತಯಾರಿರುವಾಗ, ಬೆಳಿಗ್ಗೆಯೂ ಆಗಲಿಲ್ಲ, ಮಧ್ಯಾಹ್ನವೂ ಆಗಲಿಲ್ಲ. ಇದು ಬಹಳ ಪ್ರಮುಖವಾದುದು.

(ಗೊಂದಲ)

ಶ್ರೀ ವಾಟಾಳ್ ನಾಗರಾಜ್:- ಅಧ್ಯಕ್ಷರೆ, ಇದು ಸಮಗ್ರವಾಗಿ ಹೌದಪ್ಪಗಳ ಪರವಾಗಿದೆ. ತಮಗೆ ನಾವು ಅತ್ಯಂತ ಕಳಕಳಿಯಿಂದ ಮನವಿ ಮಾಡುತ್ತಿದ್ದೇವೆ, ದಯಮಾಡಿ ನೆರೆಹಾವಳಿ ಬಗ್ಗೆ, ಇಲ್ಲಿ ನಡೆದಿರತಕ್ಕಂಥ ಸಮಗ್ರ ಚರ್ಚೆ ಬಗ್ಗೆ ಮಾನ್ಯ ಸಚಿವರು ಉತ್ತರ ಕೊಡುವುದಕ್ಕೆ ಅವಕಾಶ ಕೊಡಿ. ನಾವು ಅದಕ್ಕಾಗಿ ಕುಳಿತಿದ್ದೇವೆ ನೀವು ಅದಕ್ಕೆ ಕೊಡದೆ ಬೇರೆ ವಿಷಯ ತೆಗೆದುಕೊಳ್ಳುವುದಾದರೆ ನಾವು ಹೊರಗಡೆ ಹೋಗುತ್ತೇನೆ.

ಶ್ರೀ ಆರ್.ವಿ. ದೇಶಪಾಂಡೆ:- ನಾನು ಒಪ್ಪಿಕೊಳ್ಳುತ್ತೇನೆ, ಅಜೆಂಡಾ ಪ್ರಕಾರ ಬಿಲ್ಸ್ ಇದೆ. ಆದರೆ ನೆರೆಹಾವಳಿ ಚರ್ಚೆಗೆ ನೀವು ಪ್ರಾದಾನ್ಯತೆ ಕೊಟ್ಟು -----

ಶ್ರೀ ವೈ.ಕೆ. ರಾಮಯ್ಯ:- ಸನ್ಮಾನ್ಯ ಅಧ್ಯಕ್ಷರೆ, ಯಾವುದೇ ಒಂದು ವಿಷಯದ ಬಗ್ಗೆ ಸದಸ್ಯರು ಚರ್ಚೆ ಮಾಡಲಿಕ್ಕೆ ಕರೆಯುವುದು ಅತ್ಯುತ್ತಮವಾದಂಥದ್ದು, ಆದರಂತೆ ತಾವು ಕರೆದಿದ್ದೀರಿ. ನಾವು ಕಂಠ ಶೋಷಣೆ ಮಾಡಿಕೊಂಡು ನಿರ್ಧಿಷ್ಟವಾದಂಥ ಪ್ರಶ್ನೆಗಳನ್ನು ಸರ್ಕಾರದ ಮುಂದಿಟ್ಟಿದ್ದೇವೆ. ಆ ಪ್ರಶ್ನೆಗಳಿಗೆ ಅವರು ಉತ್ತರ ಕೊಡಬೇಕು. ಇಲ್ಲಾ ನಮ್ಮಲ್ಲಿ ಮಾಹಿತಿ ಇಲ್ಲವೆಂದು ಹೇಳಬೇಕು. ಇದು ಯಾವುದೂ ಆಗದೇ ಇದ್ದಾಗ ನಿಮ್ಮ ಆಫೀಸರ್ ನಿಮಗೆ ಹೇಳುತ್ತಾರೆ, ನೀವು ಮುಂದಕ್ಕೆ ಓದುಕೊಂಡು ಹೋಗುತ್ತೀರಿ. ಇದರಿಂದ ನಾವು ಚರ್ಚೆ ಮಾಡುವ ಪ್ರಯೋಜನವಿಲ್ಲ. ನೀವು ವಿಷಯದ ಮೇಲೆ ಚರ್ಚೆಮಾಡಿ ಎಂದು ಕರೆಯುತ್ತೀರಿ. ನಾವು ಯಾವುದಾದರೂ ಕಾಗೆ, ಗೂಬೆ ಕಥೆಯನ್ನು ಇಲ್ಲಿ ಹೇಳಿದ್ದೇವೆಯೇ?

ಛೇರ್ಮನ್:- ಅವರು ಆನ್ಸರ್ ಕೊಟ್ಟಿದ್ದಾರೆ.

ಶ್ರೀ ವೈ.ಕೆ. ರಾಮಯ್ಯ:- ನೀವು ರೂಲಿಂಗ್ ಕೊಡಿ. ನಾನು ನಿರ್ಧಿಷ್ಟವಾಗಿ ರೈಸ್ ಮಾಡಿದಂಥ ಪ್ರಶ್ನೆಗೆ ಉತ್ತರ ಬಂದಿದೆಯೋ? ಬರದಿದ್ದರೆ ನೀವು ಏಕೆ ಓದಿಕೊಂಡು ಹೋಗುತ್ತೀರಿ?

ಛೇರ್ಮನ್:- ಮಂತ್ರಿಗಳು ಉತ್ತರ ಕೊಟ್ಟಿದ್ದಾರೆ. ಆ ಸಬ್ಜೆಕ್ಟ್ ಮುಗಿಯಿತು.

ಶ್ರೀ ವಾಟಾಳ್ ನಾಗರಾಜ್:- ನೆರೆಹಾವಳಿ ಬಗ್ಗೆ ನಿಮ್ಮ ಸರ್ಕಾರಕ್ಕೆ ಆಸಕ್ತಿ ಇಲ್ಲ. ನಾವು ಒತ್ತಾಯ ಮಾಡಿ ಉತ್ತರ ಕೊಡಿ ಎಂದರೂ ಕೊಡುವುದಕ್ಕಾಗುತ್ತಿಲ್ಲ. ಆದ್ದರಿಂದ ನಾವು ಸಭಾತ್ಯಾಗ ಮಾಡುತ್ತಿದ್ದೇವೆ.

(ಬಿಜೆಪಿ ಪಕ್ಷದ ಸದಸ್ಯರು, ಎಸ್.ಜೆ.ಪಿ. ಪಕ್ಷದ ಸದಸ್ಯರು ಹಾಗೂ ವಾಟಾಳ್ ನಾಗರಾಜ್‌ರವರು ಸಭಾತ್ಯಾಗ ಮಾಡಿದರು.)

ಶ್ರೀ ಆರ್.ವಿ. ದೇಶಪಾಂಡೆ:- ಮಾನ್ಯ ಅಧ್ಯಕ್ಷರೇ, ಮೊದಲು ನೆರೆಹಾವಳಿಯ ಬಗ್ಗೆ ಮಾನ್ಯ ಕಂದಾಯ ಸಚಿವರು ಉತ್ತರವನ್ನು ಕೊಡಲಿ. ಆಮೇಲೆ ಸಮಯ ಇದ್ದರೆ ಬೇಕಾದರೆ ಹಿಂದೂ ಸಕ್ಸೆಶನ್ ಆಕ್ಟ್ ಬಿಲ್ ಏನಿದೆ, ಅದು ಜಾಯಿಂಟ್‌ಸೆಲೆಕ್ಟ್ ಕಮಿಟಿಯ ಮುಂದೆ ಹೋದ ಬಿಲ್. ಅದರ ಬಗ್ಗೆ ಇಲ್ಲಿ ಚರ್ಚೆ ಹೆಚ್ಚು ಆಗುವ ಹಾಗೆ ಕಾಣುವುದಿಲ್ಲ, ಆದ್ದರಿಂದ ಮೊದಲು ನೆರೆಹಾವಳಿ ಬಗ್ಗೆ ಚರ್ಚೆಗೆ ಉತ್ತರವಾಗಲಿ.

ಶ್ರೀ ಹಾರ್ನಹಳ್ಳಿ ರಾಮಸ್ವಾಮಿ:- ಮಾನ್ಯ ವಿರೋಧ ಪಕ್ಷದ ನಾಯಕರು ಹೇಳಿದ ವಿಚಾರದಲ್ಲಿ ಹೇಳುವುದೇನೆಂದರೆ, ಇನ್ನೂ ಎರಡು ಬಿಲ್‌ಗಳು ಇವೆ. ಒಂದು ಬಿಲ್‌ನ್ನು ನಾಳೆಗೆ ತೆಗೆದುಕೊಳ್ಳೋಣ. ಇನ್ನೊಂದು ಜಾಯಿಂಟ್‌ಸೆಲೆಕ್ಟ್ ಕಮಿಟಿಗೆ ಹೋಗಿ ಬಂದಿರತಕ್ಕಂಥಾದ್ದು ಅದು 10-15 ನಿಮಿಷಗಳಲ್ಲಿ ಆಗುತ್ತದೆ.

ಶ್ರೀ ಆರ್.ವಿ. ದೇಶಪಾಂಡೆ:- ನೆರೆಹಾವಳಿಯ ಬಗ್ಗೆ ಉತ್ತರ ಆದ ಮೇಲೆ ಒಂದು ಬಿಲ್‌ನ್ನು ಇಂದೇ ಮಾಡಿಕೊಳ್ಳಿ. ಅದನ್ನು ಅನ್‌ನೆಸಸರೀಲಿ ಪ್ರೆಸ್ಟೀಜ್ ಇಷ್ಯೂ ಮಾಡುವುದು ಬೇಡ. ಕೆಲವು ಮಾನ್ಯ ಸ್ನೇಹಿತರು ವಾಕ್‌ಔಟ್ ಮಾಡಿದ್ದಾರೆ. ಸಚಿವರು ತಯಾರಾಗಿದ್ದಾರೆ, ಅವರು ಉತ್ತರವನ್ನು ಕೊಡಲಿ.

ನೆರೆಹಾವಳಿಯ ಬಗ್ಗೆ ಸಚಿವರಿಂದ ಉತ್ತರ

ಉಪಾಧ್ಯಕ್ಷರು:- ಈಗ ನೆರೆಹಾವಳಿಯ ಬಗ್ಗೆ ಮಾನ್ಯ ಕಂದಾಯ ಸಚಿವರಿಂದ ಉತ್ತರ.

(ಈ ಹಂತದಲ್ಲಿ ಸಭಾತ್ಯಾಗ ಮಾಡಿದ ಮಾನ್ಯ ಸದಸ್ಯರುಗಳು ಸದನಕ್ಕೆ ಬಂದು ಆಸೀನರಾದರು)

† ಶ್ರೀ ಎಂ. ರಾಜಶೇಖರಮೂರ್ತಿ:- ಮಾನ್ಯ ಅಧ್ಯಕ್ಷರೇ, ನೆರೆಹಾವಳಿಯ ಬಗ್ಗೆ ಅನೇಕ ಜನ ಮಾನ್ಯ ಸದಸ್ಯರು ಭಾಗವಹಿಸಿ, ಅದರಲ್ಲಿ ಕೆಲವರು ಕಠಿಣವಾಗಿ ಟೀಕೆ ಮಾಡಿದ್ದಾರೆ, ಮತ್ತೆ ಕೆಲವರು ಸರಕಾರದವರು ಮಾಡಿರತಕ್ಕಂಥ ಕೆಲಸವನ್ನು ಮೆಚ್ಚಿದ್ದಾರೆ, ಇನ್ನು ಕೆಲವರು ಬಹಳಷ್ಟು ಉಪಯುಕ್ತ ಸಲಹೆಗಳನ್ನು ಕೊಟ್ಟಿದ್ದಾರೆ, ಅವರೆಲ್ಲರಿಗೂ ಕೂಡ ನನ್ನ ಅಭಿನಂದನೆಗಳು. ಈ ಸಾರಿ ಮಳೆಯು ಬಹಳ ಆಗಿ, ನದಿಗಳೆಲ್ಲವೂ ತುಂಬಿ ಹರಿದು, ಸಾರ್ವಜನಿಕರ ಆಸ್ತಿಪಾಸ್ತಿಗಳಿಗೆ ಮತ್ತು ಖಾಸಗೀ ಜನರ ಆಸ್ತಿಪಾಸ್ತಿಗಳಿಗೆ ಬಹಳ ನಷ್ಟ ಸಂಭವಿಸಿದೆ. ಇಷ್ಟು ದೊಡ್ಡ ಪ್ರಮಾಣದಲ್ಲಿ ಹಿಂದೆ ಯಾವಾಗಲೂ ಕೂಡ ಆಗಿರಲಿಲ್ಲ. 1924ರಲ್ಲಿ ಒಂದು ಸಾರಿ ಅಧಿಕ ಪ್ರವಾಹ ಮತ್ತು ಮಳೆಯೂ ಬಂದಿತ್ತು. 1961ರಲ್ಲಿ ಹೆಚ್ಚು ಮಳೆಯೂ ಆಯಿತು ಮತ್ತು ಪ್ರವಾಹವೂ ಕೂಡ ಬಂತು. ಆದರೆ 1992ರಲ್ಲಿ ಬಂದದ್ದು ಈ ಎರಡು ಸಾರಿಯ ಅನಾಹುತಗಳನ್ನು ಕೂಡ ಮೀರಿಸಿ ಹೆಚ್ಚು ಪ್ರಮಾಣದ ಕಷ್ಟನಷ್ಟಗಳನ್ನು ಪ್ರಜಾಕೋಟಿಗೆ ಉಂಟು ಮಾಡಿದೆ. ಮಾನ್ಯ ದೇಶಪಾಂಡೆಯವರು ಹೇಳಿದರು, ಅನೇಕ ಕಾರಣಗಳಿಂದ, ನಷ್ಟ ಬಹಳ ಅಧಿಕವಾಯಿತು ಎಂದು. ನದಿಯಲ್ಲಿ ಪ್ರವಾಹ ಜಾಸ್ತಿಯಾಗಿ ಎರಡು ದಂಡೆಗಳ ಮೇಲಿಂದ ನೀರು ಉಕ್ಕಿ, ಅಕ್ಕಪಕ್ಕದಲ್ಲಿದ್ದ ಮನೆಗಳೆಲ್ಲವೂ ನಾಶವಾಗಿವೆ ಎಂದು ಹೇಳಿದ್ದಾರೆ. ಮತ್ತು ಹಳ್ಳಗಳು ಸಿಲ್ಟ್ ಅಪ್ ಆಗಿ ಅದರಿಂದ ನೀರು ಮರಳಿ ಎರಡೂ ದಂಡೆಗಳಿಗೆ ಕೂಡ ಹೋಗಿ ಜಮೀನುಗಳು ನಷ್ಟವಾಗಿವೆ, ಮತ್ತು ಮನೆಗಳು ಕೂಡ ನಷ್ಟವಾಗಿವೆ ಎಂದು ಹೇಳಿದರು. ಅದರ ಜೊತೆಗೆ ಇನ್ನೊಂದು ವಿಚಾರವನ್ನು ವಿಶೇಷವಾಗಿ ಹೇಳಿದರು. ತುಂಗಭದ್ರಾ ಡ್ಯಾಂನಿಂದ ಹೆಚ್ಚು ನೀರನ್ನು ಬಿಟ್ಟಿದ್ದರಿಂದ ತೊಂದರೆಯು ಬಹಳ ಆಯಿತು ತುಂಗಭದ್ರಾ ಬೋರ್ಡ್‌ನ ಅಧಿಕಾರಿಗಳು ಮುನ್ನೆಚ್ಚರಿಕೆಯನ್ನು ಸಕಾಲದಲ್ಲಿ ಕೊಡಲಿಲ್ಲ ಎಂಬ ಒಂದು ಆಕ್ಷೇಪಣೆಯನ್ನು ಕೂಡ ಅವರು ಎತ್ತಿದ್ದಾರೆ. ಈ ಆಕ್ಷೇಪಣೆಗೆ ಆಧಾರ ಇಲ್ಲ ಎಂದು ನಾನು ಹೇಳುತ್ತೇನೆ. ಏಕೆಂದರೆ ತುಂಗಭದ್ರಾ ಡ್ಯಾಂಗೆ ನೀರು 17ನೇ ತಾರೀಖು ಕೇವಲ 14,770 ಕ್ಯುಸೆಕ್ಸ್‌ನಷ್ಟು ಬರುತ್ತಾ ಇತ್ತು. ಸಾಯಂಕಾಲವಾಗುತ್ತಿದ್ದ ಹಾಗೆ ಒಳಗಡೆ ಬರುವ ನೀರಿನ ಕ್ವಾಂಟಿಟಿ ಬಹಳ ಜಾಸ್ತಿಯಾಯಿತು. 7 ಗಂಟೆಗೆ 29,550 ಕ್ಯೂಸೆಕ್ಸ್ 8 ಗಂಟೆಗೆ 89,560, 9 ಗಂಟೆಗೆ 1,56 ಲಕ್ಷ ಕ್ಯುಸೆಕ್ಸ್, ಹತ್ತೂವರೆ ಗಂಟೆಗೆ 2,04,928 ಕ್ಯೂಸೆಕ್ಸ್ 11 ಗಂಟೆಗೆ 2,37,978 ಕ್ಯೂಸೆಕ್ಸ್ ಮತ್ತು 3-30 ಮಾರ್ನಿಂಗ್ 18ನೇ ತಾರೀಖು 3,02,000 ಕ್ಯೂಸೆಕ್ಸ್ ಮತ್ತು 11 ಗಂಟೆಗೆ 3,69,000 ಕ್ಯೂಸೆಕ್ಸ್ ಒಳಗಡೆ ಬರ್ತಾ ಇದ್ದುದರಿಂದ ಈ ನೀರನ್ನು ಇಂಪೌಂಡ್ ಮಾಡುವ ಸನ್ನಿವೇಶ ಅಲ್ಲಿರಲಿಲ್ಲ ಏಕೆಂದರೆ ಡ್ಯಾಮ್‌ನಲ್ಲಿ ಕೂಡ ನೀರು ಸಾಕಷ್ಟು ಇತ್ತು ಅಕಸ್ಮಾತ್ ಎಲ್ಲಾ ನೀರನ್ನು ಇಂಪೌಂಡ್ ಮಾಡಿಕೊಂಡಿದ್ದರೆ ಡ್ಯಾಮಿಗೆ ಬಹಳ ಅಪಾಯವಾಗುತ್ತಿತ್ತು. ಆದ್ದರಿಂದ ನೀರನ್ನು ಬಿಡಬೇಕಾದ ಪರಿಸ್ಥಿತಿ ಒದಗಿತು. ನೀರನ್ನು ಬಿಟ್ಟದ್ದು 3,75,000 ಕ್ಯೂಸೆಕ್ಸ್, ಆಗ 18ನೇ ತಾರೀಖು ಆಗ ಇನ್‌ಫ್ಲೋ ಎಷ್ಟಿತ್ತು ಎಂದರೆ 3,75,000 ಕ್ಯೂಸೆಕ್ಸ್ ಬಿಡುವಾಗ 4,41,000 ಕ್ಯೂಸೆಕ್ಸ್ ಸ್ವಲ್ಪ ಭಾಗ ಇಂಪೌಂಡ್ ಮಾಡಿಕೊಳ್ತಿದ್ದರು. ಉಳಿದ ಭಾಗ ಬಿಡುತ್ತಾ ಇದ್ದರು. ಈ ಸಂದರ್ಭದಲ್ಲಿ ಅವರು ಸಾಕಷ್ಟು ಮುನ್ನೆಚ್ಚರಿಕೆ ಕ್ರಮ ತೆಗೆದುಕೊಳ್ಳಲಿಲ್ಲ ಎಂದು ಏನು ಹೇಳುತ್ತಿದ್ದಾರೆ, ಅದು ಸರಿಯಲ್ಲ. ನಮ್ಮ ತುಂಗಭದ್ರಾ ಬೋರ್ಡಿನವರು ಟೆಲಿಗ್ರಾಂ ಮೂಲಕ ವೈರ್‌ಲೆಸ್ ಮೆಸೇಜ್

ಮೂಲಕ ಮತ್ತು ನಾನಾ ರೀತಿಯಲ್ಲಿ ಎಲ್ಲಾ ಕಡೆಗೂ ಇನ್‌ಫರ್ಮೇಶನ್ ಕೊಟ್ಟಿದ್ದಾರೆ. ಪೋಲಿಸರ ಮುಖಾಂತರ ಮಾಹಿತಿಯನ್ನು ಕಳಿಸಿಕೊಟ್ಟಿದ್ದಾರೆ, ಜಿಲ್ಲಾಧಿಕಾರಿಗಳಿಗೆ ಕಳಿಸಿದ್ದಾರೆ, ಚೀಫ್ ಇಂಜನಿಯರ್, ಎಕ್ಸಿಕ್ಯುಟಿವ್ ಇಂಜನಿಯರ್, ಸೂಪರಿಂಟೆಂಡೆಂಟ್ ಇಂಜನಿಯರ್ ಎಲ್ಲರೂ ಕಳಿಸಿಕೊಟ್ಟಿದ್ದಾರೆ. ನಮ್ಮದೊಂದೇ ಕಡೆ ಅಲ್ಲ. ಆಂಧ್ರದಲ್ಲೂ ಕೂಡ ಕರ್ನೂಲಿನ ಡಿಸ್ಟ್ರಿಕ್ಟ್ ಕಲೆಕ್ಟರ್‌ರವರಿಗೆ ಇನ್‌ಫರ್ಮೇಶನ್ ಕೊಟ್ಟಿದ್ದಾರೆ. ಮೆಹಬೂಬ್‌ನಗರ ಡಿಸ್ಟ್ರಿಕ್ಟ್ ಕಲೆಕ್ಟರ್‌ಗೆ ಇನ್‌ಫರ್ಮೇಶನ್ ಕೊಟ್ಟಿದ್ದಾರೆ. ಕರ್ನೂಲಿನಲ್ಲಿ ತಹಸೀಲ್ದಾರ್‌ಗೆ ಇನ್‌ಫರ್ಮೇಶನ್ ಕೊಟ್ಟಿದ್ದಾರೆ, ಮೆಹಬೂಬ್ ನಗರದಲ್ಲಿ ತಹಸೀಲ್ದಾರ್‌ಗೆ ಕೊಟ್ಟಿದ್ದಾರೆ. ಇಂಜನಿಯರ್ ಇನ್‌ಚೀಫ್, ಹೈದರಾಬಾದ್ ಅವರಿಗೆ ಇನ್‌ಫರ್ಮೇಶನ್ ಕೊಟ್ಟಿದ್ದಾರೆ ಚೀಫ್ ಇಂಜನಿಯರ್ ನಾಗಾರ್ಜುನಸಾಗರ್ ಅವರಿಗೂ ಕೂಡ ಕೊಟ್ಟಿದ್ದಾರೆ, ಸೂಪರಿಂಟೆಂಡೆಂಟ್ ಇಂಜನಿಯರ್ ಶ್ರೀಶೈಲಂ ಪ್ರಾಜೆಕ್ಟ್ ಅವರಿಗೂ ಕೊಟ್ಟಿದ್ದಾರೆ. ಸೂಪರಿಂಟೆಂಡೆಂಟ್ ಇಂಜನಿಯರ್, ಇರಿಗೇಶನ್ ಸರ್ಕಲ್, ಕರ್ನೂರ್ ಇವರಿಗೂ ಸಹ ಕೊಟ್ಟಿದ್ದಾರೆ. ಅಂದರೆ ಎಲ್ಲೆಲ್ಲಿಗೂ ಮುನ್ನೆಚ್ಚರಿಕೆ ಕ್ರಮ ತೆಗೆದುಕೊಳ್ಳಬೇಕಾಗಿತ್ತೋ ಅವರಿಗೆ ಎಲ್ಲಾ ಇನ್‌ಫರ್ಮೇಶನ್ ಕೊಟ್ಟಿದ್ದಾರೆ ಅವರು ತಮ್ಮ ಕರ್ತವ್ಯದಲ್ಲಿ ಲೋಪಮಾಡಿಲ್ಲ ಎಂದು ನಾನು ಮಾನ್ಯ ವಿರೋಧಪಕ್ಷದ ನಾಯಕರಿಗೆ ಹೇಳುತ್ತಿದ್ದೇನೆ. ಡ್ಯಾಮೇಜಾದ ಸಂದರ್ಭದಲ್ಲಿ ಪ್ರೈವೇಟ್ ಪ್ರಾಪರ್ಟಿ 207 ಕೋಟಿಯಷ್ಟು ನಷ್ಟವಾಗಿದೆ, ಸಾರ್ವಜನಿಕರ ಆಸ್ತಿಪಾಸ್ತಿಗೆ ಸುಮಾರು 100 ಕೋಟಿ ನಷ್ಟವಾಗಿದ್ದು ಒಟ್ಟು 307 ಕೋಟಿಯಷ್ಟು ನಷ್ಟವಾಗಿದೆ. ಆ ಸಂದರ್ಭದಲ್ಲಿ ಜನರಿಗೆ ಬಹಳ ತೊಂದರೆಯಾಗಿತ್ತು ಕೆಲವರ ಮನೆಗಳ ಸುತ್ತಮುತ್ತ ನೀರಿತ್ತು, ಅವರನ್ನೆಲ್ಲಾ ದೋಣಿ ತೆಪ್ಪಗಳ ಮೂಲಕ ಮತ್ತು ಹೆಲಿಕಾಫ್ಟರ್ ಮೂಲಕ ಸಾಗಿಸಲಾಯಿತು, ಇಮ್ಮಿಡಿಯೇಟಾಗಿ ಅವರಿಗೆ ಗಂಜಿ ಕೇಂದ್ರಗಳನ್ನು ಓಪನ್ ಮಾಡಲಾಯಿತು, ಟೆಂಪರರಿ ಶೆಡ್ಸ್‌ಗಳನ್ನು ಕಟ್ಟಿದರು, ಅವರಿಗೆಲ್ಲಾ ಕಂಬಳಿ ಸೀರೆ ಧೋತಿ ಯುಟೆನ್‌ಸಿಲ್ಸ್ ಸಪ್ಲೈ ಮಾಡಲಾಯಿತು, ಕೆರೋಸಿನನ್ನು ಕೊಡಲಾಯಿತು. ಆರೋಗ್ಯ ಇಲಾಖೆಯವರು ನೀರನ್ನು ಕ್ಲೋರಿನೇಟ್ ಮಾಡುವುದು ಇನ್ನಾಕ್ಯುಲೇಟ್ ಮಾಡುವುದು ಇವೆಲ್ಲ ಶೀಘ್ರವಾಗಿ ಕ್ರಮ ತೆಗೆದುಕೊಳ್ಳಲಾಗಿದೆ, ಸರ್ಕಾರ ಕಣ್ಮುಚ್ಚಿ ಕುಳಿತಿರಲಿಲ್ಲ ಆ ಟೈಮ್‌ನಲ್ಲಿ, ನಮಗೆ ಕಷ್ಟ ಬಂದಾಗ ಸರ್ಕಾರ ನಮ್ಮ ಕಷ್ಟಗಳನ್ನು ನಿವಾರಣೆ ಮಾಡಲು ಬರುತ್ತದೆ ಎಂದು ಜನ ಏನು ಅಪೇಕ್ಷೆ ಪಟ್ಟರು ಆ ನಿರೀಕ್ಷೆಗೆ ತಕ್ಕಂತೆ ಸರ್ಕಾರ ನಡೆದುಕೊಂಡಿದೆ. ತಕ್ಷಣದಲ್ಲಿ ಅವರಿಗೇನೇನು ಸಹಾಯ ಸೌಲಭ್ಯಗಳನ್ನು ಕೂಡ ಸರ್ಕಾರ ಮಾಡಿದೆ ಅದರಲ್ಲಿ ಲೋಪವಾಗಿಲ್ಲ ಎಂದು ನಾನು ಮಾನ್ಯ ಸದಸ್ಯರಿಗೆ ತಿಳಿಸಿಕೊಡುತ್ತೇನೆ. ಈ ಸಂದರ್ಭದಲ್ಲಿ ಅನೇಕ ವಾಲಂಟರಿ ಸಂಸ್ಥೆಗಳು ಯಾವ್ಯಾವುದು ಅಂದರೆ ಮರ್ಚೆಂಟ್ಸ್ ಅಸೋಸಿಯೇಶನ್ ಟ್ರಸ್ಟ್, ಲಯನ್ಸ್ ಮತ್ತು ರೋಟರಿ ಕ್ಲಬ್‌ಗಳೂ ಕೂಡ ಬಹಳ ಮುಂದೆ ಬಂದು ನಾನಾ ರೀತಿಯೊಳಗೆ ನೆರೆಹಾವಳಿಗೆ ಸಿಕ್ಕಿ ತೊಂದರೆಯಲ್ಲಿದ್ದ ಜನರಿಗೆ ಸಹಾಯ ಮಾಡಿದ್ದಾರೆ. ಮತ್ತು ಪ್ರಧಾನಮಂತ್ರಿಗಳ ಬಗ್ಗೆ ಒಂದು ಆಕ್ಷೇಪಣೆ ಎತ್ತಿದರು. ಅವರು ತಮಿಳುನಾಡಿಗೆ ಹೋದರು, ಕೇರಳಕ್ಕೆ ಹೋದರು ಆದರೆ ಕರ್ನಾಟಕದಲ್ಲಿ ಅವರು ಟೂರ್ ಮಾಡಲಿಲ್ಲ, ಪ್ಲೈನ್‌ನಲ್ಲಿ ಹೋದರೂ ನೋಡಲಿಕ್ಕಾಗಲಿಲ್ಲ, ಮಲತಾಯಿ ಧೋರಣೆ ತೋರಿಸಿದ್ದಾರೆ ನಿರ್ಲಕ್ಷ್ಯ ಮನೋಭಾವನೆ ತೋರಿಸಿದ್ದಾರೆ ಎಂದು ಏನು ಹೇಳಿದರು ಅದು ಸರಿಯಲ್ಲ. ಅವರು ಟೂರ್ ಪ್ರೋಗ್ರಾಮ್ ಹಾಕಿದಾಗ ತಮಿಳುನಾಡು, ಕೇರಳ, ಪಾಂಡಿಚೆರಿ ಮತ್ತು ಕರ್ನಾಟಕವನ್ನು ಹಾಕಿಕೊಂಡರು. ನಾವೆಲ್ಲಾ ಟ್ರಿವೆಂಡ್ರಮ್‌ಗೆ ಹೋಗಿ ಅವರನ್ನು ಮೀಟ್ ಮಾಡಿದೆವು. ಟ್ರಿವೆಂಡ್ರಮ್‌ಗೆ ಬಂದಾಗ ಸ್ವಲ್ಪ ಲೇಟಾಗಿತ್ತು. ಏಕೆಂದರೆ ಅವರೇನು ಕಾರ್ಯಕ್ರಮವನ್ನು ಹಾಕಿಕೊಂಡಿದ್ದರೋ ಆ ಕಾರ್ಯಕ್ರಮದ ಪ್ರಕಾರ ಆಗಲಿಲ್ಲ. ಬಹಳ ಲೇಟಾಯಿತು. ಟ್ರಿವೆಂಡ್ರಮ್ ಏರ್‌ಪೋರ್ಟ್‌ನಲ್ಲಿ ಒಂದು ಮೀಟಿಂಗನ್ನು ಮಾಡಿದರು. ಮೀಟಿಂಗ್ ಮಾಡಿದಾಗ, ಕೇರಳದವರು ಅಲ್ಲಿ ಮೆಮೊರಾಂಡಂ ಕೊಟ್ಟರು. ನಾವು ಕೂಡ ಮೆಮೊರಾಂಡಂ ಕೊಟ್ಟೆವು. ಈ ಎರಡೂ ಮೆಮೊರಾಂಡಂನ್ನು ತೆಗೆದುಕೊಂಡು ನಂತರ ನಾವೆಲ್ಲ

ಪ್ಲೇನ್ ಹತ್ತಿದೆವು. ನಾನು ಇದ್ದೆ ಅಲ್ಲಿ. ಪ್ಲೇನ್ ಹತ್ತಿದಾಗ 5ಗಂಟೆ 25 ನಿಮಿಷ. ಕೇರಳದಲ್ಲಿ ಯಾವ ಯಾವ ಜಾಗದಲ್ಲಿ ಮರೂನ್ ಆಗಿದೆ, ಅದನ್ನು ನೋಡಲಿಲ್ಲ. ಫಸ್ಟ್ ಕೇರಳದಲ್ಲಿ 30-40 ಪರ್‌ಸೆಂಟ್ ನೋಡಿದೆವು. ಆಗ ಕತ್ತಲೆ ಇತ್ತು. ಅಲ್ಲಿಯೂ ಸರಿಯಾಗಿ ನೋಡುವುದಕ್ಕಾಗಲಿಲ್ಲ. ಆಗ ಅವರು ಒಂದು ಮಾತನ್ನು ಹೇಳಿದರು, ನಾನು ಕರ್ನಾಟಕದಲ್ಲಿ ನೋಡದಿದ್ದರೂ ಚಿಂತೆಯಿಲ್ಲ, ನಾನು ಏನು ಕೆಲಸ ಮಾಡಿಕೊಡಬೇಕು, ಅದನ್ನು ನಾನು ಮಾಡುತ್ತೇನೆ, ನೀವೆಲ್ಲಾ ಡೆಲ್ಲಿಗೆ ಬನ್ನಿ ಎಂದು ಹೇಳಿದರು. ಅವರ ಛೇಂಬರ್ಸ್‌ನಲ್ಲಿ ಪ್ರಿನ್ಸಿಪಾಲ್ ಸೆಕ್ರೆಟರಿಯವರೊಂದಿಗೆ ಕುಳಿತುಕೊಂಡು ಮಾತುಕತೆ ನಡೆಸಿ ಈ ಸಮಸ್ಯೆಗೆ ಯಾವ ರೀತಿ ಫೈನಾನ್ಸಿಯಲ್ ಅಸಿಸ್ಟೆನ್ಸ್ ತೆಗೆದುಕೊಳ್ಳಬೇಕೋ ಅದನ್ನು ಅಲ್ಲಿಯೇ ಚರ್ಚೆ ಮಾಡಿ ಒಂದು ತೀರ್ಮಾನಕ್ಕೆ ಬಂದೆವು. ಆದ್ದರಿಂದ ಪ್ರೈಮ್ ಮಿನಿಸ್ಟರ್ ಬಗ್ಗೆ ನಮಗೆ ಹೆಚ್ಚಿನ ಸಹಾಯವನ್ನು ಮಾಡಲಿಲ್ಲ ಎಂದಾಗಲೀ, ನಮ್ಮನ್ನು ನಿರ್ಲಕ್ಷ್ಯ ಮಾಡಿದರು ಎಂದು ಹೇಳುವುದನ್ನು ನಾನು ಒಪ್ಪತಕ್ಕಂಥವನಲ್ಲ. ಫೈನಾನ್ಸಿಯಲ್ ಅಸಿಸ್ಟೆನ್ಸ್ ಕೇಂದ್ರ ಸರ್ಕಾರದಿಂದ ಇದಕ್ಕಾಗಿ ಎಷ್ಟು ಬಂದಿದೆ ಎಂದರೆ 30ಕೋಟಿ ನಮಗೆ ಈ ವೇಸ್ ಅಂಡ್ ಮೀನ್ಸ್ ಪೊಸಿಷನ್ ಅಂಡರ್ ಅಡ್ವಾನ್ಸ್ ಅಮೌಂಟ್ ಕೊಟ್ಟಹಾಗೆ. ಮತ್ತು ಚಾಲ್ತಿಸಾಲಿನಲ್ಲಿ ನಮಗೆ ಬರಬೇಕಾಗಿದ್ದ ಈ ಕೆಲಾಮಿಟಿ ರಿಲೀಫ್‌ನಲ್ಲಿ 11 ಕೋಟಿ ಅದನ್ನೂ ಕೂಡ ಅಡ್ವಾನ್ಸ್ ರೂಪದಲ್ಲಿ ಕೊಟ್ಟಿದ್ದಾರೆ. ಮುಂದಿನ ವರ್ಷದ್ದು 93-94 ಎರಡು ಇನ್‌ಸ್ಟಾಲ್‌ಮೆಂಟ್ ಒಟ್ಟು 11 ಕೋಟಿ, ಒಟ್ಟು 52 ಕೋಟಿ ರೂಪಾಯಿಗಳನ್ನು ಕೊಟ್ಟಿದ್ದಾರೆ. ಇದರ ಜೊತೆಗೆ ನಮಗೆ ಬಹಳ ದಿವಸದಿಂದ ಬರಬೇಕಾಗಿರತಕ್ಕಂಥ ಅಮೌಂಟ್ ನಮ್ಮ ರೂರಲ್ ಡೆವಲಪ್‌ಮೆಂಟ್ ಡಿಪಾರ್ಟ್‌ಮೆಂಟ್‌ಗೆ 33 ಕೋಟಿ ಜವಹರ್ ರೋಜ್‌ಗಾರ್ ಯೋಜನೆ ಬಗ್ಗೆ 11ಕೋಟಿ ಇನ್ನೊಂದು National rural water ಸಪ್ಲೈ ಬಗ್ಗೆ ಆ 44 ಕೋಟಿಯನ್ನು ಕೂಡ ಬಿಡುಗಡೆ ಮಾಡಿಕೊಟ್ಟಿದ್ದಾರೆ. ಒಟ್ಟು ಅವರಿಂದ ಹೆಚ್ಚು ಕಡಿಮೆ 96 ಕೋಟಿ ರೂಪಾಯಿಯಷ್ಟು ಅಮೌಂಟ್ ನಮಗೆ ಬಂದ ಹಾಗೆ ಆಯಿತು. ಈಗ ನಾವು ಸೋಫಾರ್ ಎಷ್ಟು ಅಮೌಂಟ್ ರಿಲೀಸ್ ಮಾಡಿದ್ದೇವೆ ಎಂದರೆ, ಫ್ಲಡ್ ರಿಲೀಫ್‌ಗೋಸ್ಕರ ಬ್ಯಾಲೆನ್ಸ್ ಡೆಪ್ಯುಟಿ ಕಮೀಷನರ್ ಹತ್ತಿರ ಇದ್ದದ್ದು as on 1-4-92, 20 ಕೋಟಿ 62 ಲಕ್ಷ ಎಲ್ಲಾ ಜಿಲ್ಲಾಧಿಕಾರಿಗಳ ಹತ್ತಿರ ಕ್ಯಾಷ್ ಬ್ಯಾಲೆನ್ಸ್ ಹಾಗೆ ಉಳಿದಿತ್ತು. ಇದನ್ನೇ ಕೊಟ್ಟಿದ್ದೆವು. ಇದರ ಜೊತೆಗೆ 1-4-92ರಿಂದ 17-11-92 ಇದು ನೆರೆಹಾವಳಿ ಬರುವುದಕ್ಕೆ ಮುಂಚೆ ರಿಲೀಸ್ ಮಾಡಿರತಕ್ಕಂಥ ಹಣ 27 ಕೋಟಿ 77 ಲಕ್ಷ ಒಟ್ಟು 48.39 ಕೋಟಿ ರೂಪಾಯಿ ಅವರ ಹತ್ತಿರ ಉಳಿದಿದ್ದು. ಅದರಲ್ಲಿ ಈ ಸಾರಿ ನೆರೆಹಾವಳಿ ಶುರುವಾಗುವುದಕ್ಕಿಂತ ಮುಂಚೆ ಖರ್ಚು ಮಾಡಿದ್ದುದು 39 ಕೋಟಿ 37 ಲಕ್ಷ. ಅದರಲ್ಲಿ 9 ಕೋಟಿ ಉಳಿದಿತ್ತು. ಆ ಒಂಭತ್ತು ಕೋಟಿ ಜೊತೆಗೆ ನಾವು ಎಷ್ಟು ಕೊಟ್ಟಿದ್ದೇವೆ ಎಂದರೆ 40.78 ಲಕ್ಷ ಅಂದರೆ ಹೆಚ್ಚು ಕಡಿಮೆ 50 ಕೋಟಿ ನಾವು ಇದುವರೆಗೂ ರಿಲೀಸ್ ಮಾಡಿದಂತಾಯಿತು. ಇದರ ಜೊತೆಗೆ ಈಗ 15 ಕೋಟಿ ರಿಲೀಸ್ ಮಾಡುತ್ತಿದ್ದೇವೆ. ಮೊನ್ನೆ ತಾನೆ ಸಪ್ಲಿಮೆಂಟರಿ ಡಿಮ್ಯಾಂಡ್ಸ್ ಅಪ್ರೂವ್ ಮಾಡಿದ್ದಾರೆ. ಅದರಲ್ಲಿ 15ಕೋಟಿ ರೂಪಾಯಿ ಪ್ರೊವೈಡ್ ಮಾಡಿದ್ದಾರೆ. ಆ 15 ಕೋಟಿಯನ್ನೂ ರಿಲೀಸ್ ಮಾಡುತ್ತೇವೆ. ಆಗ 65 ಕೋಟಿ ರೂಪಾಯಿ ಆಯಿತು. ಈ ವರ್ಷವೇ ಎಷ್ಟು ಖರ್ಚಾಗಿದೆ ಎಂದರೆ ಇದು 50 ಕೋಟಿ ಖರ್ಚು ಮಾಡತಕ್ಕಂಥದ್ದು, 15ಕೋಟಿ ರಿಲೀಸ್ ಮಾಡತಕ್ಕಂಥದ್ದು ಈಗಾಗಲೇ 1-4-92 ರಿಂದ 17-11-92 ರವರೆಗೆ ಖರ್ಚಾಗಿರತಕ್ಕಂಥದ್ದು ಸುಮಾರು 40 ಕೋಟಿ ರೂಪಾಯಿಗಳು.

ಶ್ರೀ ಪಿ.ಜಿ.ಆರ್. ಸಿಂಧ್ಯ:- ಅದನ್ನು ಈ ಲೆಕ್ಕಕ್ಕೆ ಏತಕ್ಕೆ ಸೇರಿಸುತ್ತೀರಿ?

ಶ್ರೀ ಎಂ. ರಾಜಶೇಖರ ಮೂರ್ತಿ:- ಅದಕ್ಕೆ ನಾನು ಡೇಟ್ಸ್ ಹೇಳುತ್ತಿದ್ದೇನೆ. 1-4-72 ರಿಂದ 17.11 ರವರೆಗೆ ಖರ್ಚಾಗಿರತಕ್ಕಂಥದ್ದು ಸುಮಾರು 40 ಕೋಟಿ ರೂಪಾಯಿ, ಈಗ ಬಿಡುಗಡೆ ಮಾಡಿರತಕ್ಕಂಥದ್ದು 50 + ಈಗ ಮಾಡತಕ್ಕಂಥದ್ದು 15, 65 + 40 ಒಟ್ಟು 105 ಕೋಟಿ, ಈ ವರ್ಷ ಇದುವರೆಗೂ 1-4-92 ಈ ತಹಲ್‌ವರೆವಿಗೂ 105 ಕೋಟಿ ರೂಪಾಯಿ ಖರ್ಚು ಮಾಡಿದ್ದೇವೆ.

ಇದು ಸಾಮಾನ್ಯವಾದ ಅಮೌಂಟ್ ಅಲ್ಲ. ಇಷ್ಟು ದೊಡ್ಡ ಪ್ರಮಾಣದಲ್ಲಿ ಹಿಂದೆ ಯಾವಾಗಲೂ ಕೂಡ ಸರ್ಕಾರ ಖರ್ಚು ಮಾಡಿರಲಿಲ್ಲ.

Sri P.G.R. SINDIA:- Why do you credit for the money which has been spent from 1992?

ಶ್ರೀ ಎಂ. ರಾಜಶೇಖರ ಮೂರ್ತಿ:- ನಾನು ಅದನ್ನು ಕ್ರೆಡಿಟ್ ಎಂದು ತೆಗೆದುಕೊಳ್ಳುತ್ತಾ ಇಲ್ಲ. ಈ ವರ್ಷ ಖರ್ಚು ಮಾಡಿದ್ದೇವೆ, ಅದನ್ನು ಹೇಳಿದ್ದೇನೆ.

Sri P.G.R. SINDIA:- It is also not for flood relief works.

ಶ್ರೀ ಬಿ.ಹೆಚ್. ಲಕ್ಷ್ಮಣಯ್ಯ:- ಅದರಲ್ಲಿ ಯಾವ ಯಾವ ಜಿಲ್ಲೆಗೆ ಎಷ್ಟು ಕೊಟ್ಟಿದ್ದೀರಿ ಎಂದು ಅದನ್ನು ಹೇಳಿ ಸ್ವಾಮಿ.

ಶ್ರೀ ಎಂ. ರಾಜಶೇಖರ ಮೂರ್ತಿ:- ಪೂರ್ತಿ ಅದಕ್ಕೇ ಹೋಗಿದೆ ಎಂದು ಹೇಳಿದ್ದೇನೆ.

ಶ್ರೀ ಬಿ.ಎಸ್. ಯಡಿಯೂರಪ್ಪ:- ತಾವು ಏನು ಖರ್ಚು ಮಾಡಿದ್ದೀರಿ, 1.4.92 ರಿಂದ ಇಲ್ಲಿಯವರೆಗೆ ಆ ವಿವರವನ್ನು ಕೊಡಬೇಕು. ತಾವು ಸರ್ಕಾರದ ಜವಾಬ್ದಾರಿ ಸ್ಥಾನದಲ್ಲಿದ್ದೀರಿ ನಾನೇನು ಹೇಳುವುದಕ್ಕೆ ಇಚ್ಛೆಪಡುತ್ತೇನೆ ಎಂದರೆ, ಇಡೀ ರಾಜ್ಯದ ಜನ ಈ ಒಂದು ಅಂಕಿ ಅಂಶಗಳನ್ನು ಕೊಡುವುದರಿಂದ ಗೊಂದಲಕ್ಕೆ ಸಿಕ್ಕಿಕೊಳ್ಳುವುದು ಬೇಡ; ಪತ್ರಿಕೆಯಲ್ಲಿ ಬಂದು. ನಾವು ಇವತ್ತು ಚರ್ಚೆ ಮಾಡುತ್ತಿರುವುದು ಸೀಮಿತವಾಗಿರುವಂತಹದು. ನವೆಂಬರ್ ತಿಂಗಳಲ್ಲಿ ನೆರೆಹಾವಳಿ ಬಂದ ಮೇಲೆ ಕೇಂದ್ರದಿಂದ ಎಷ್ಟು ದುಡ್ಡು ಬಂತು? ನೀವು ಎಷ್ಟು ಖರ್ಚು ಮಾಡಿದ್ದೀರಿ? 300 ಕೋಟಿ ರೂಪಾಯಿ ನೀವು ಖರ್ಚು ಮಾಡಬೇಕಾದಂತಹ ಸ್ಥಳದಲ್ಲಿ. ಆ ಚೌಕಟ್ಟಿನಲ್ಲಿ ತಾವು ಉತ್ತರ ಕೊಟ್ಟರೆ ತುಂಬಾ ಒಳ್ಳೆಯದಾಗುತ್ತದೆ ಎಂದು ನಾನು ಪ್ರಾರ್ಥನೆ ಮಾಡುತ್ತೇನೆ.

ಶ್ರೀ ಕೆ. ಎಸ್. ಈಶ್ವರಪ್ಪ:- ತಾವು ಪಂಚಾಯತ್ ರಾಜ್ಯದಿಂದ ಬಂದಿದ್ದು ಎಲ್ಲಾ ಹೇಳುತ್ತಿದ್ದೀರಿ. ಪಂಚಾಯತ್ ರಾಜ್ಯದ ಹಳೆ ಬಾಕಿ ಏನು ಇತ್ತು ಅದೆಲ್ಲಾ ಸೇರಿಸಿ ಕೇಂದ್ರದಿಂದ ಬಂತು ಎಂದು ಹೇಳುತ್ತಿದ್ದೀರಿ. ನೆರೆಹಾವಳಿಗೋಸ್ಕರ ಎಷ್ಟು ಖರ್ಚು ಆಗಿದೆ? ನೆರೆಹಾವಳಿಗೋಸ್ಕರ ಕೇಂದ್ರ ಸರ್ಕಾರದಿಂದ ನಮಗೆ ಎಷ್ಟು ಬಂದಿದೆ ಇದು ಪ್ರಮುಖವಾದುದು.

ಶ್ರೀ ಬಿ.ಎಸ್. ಯಡಿಯೂರಪ್ಪ:- ಜವಾಹರ್ ಯೋಜನೆ ಬಗ್ಗೆ ತಾವು ಫಿಗರ್ ಕೊಡುತ್ತಿದ್ದೀರಿ. ಅದು ಆಗಲೇ ಬೇಕಾದಂತಹ ಖರ್ಚು, ನೆರೆಹಾವಳಿ ಏಕೆ ಮಿಕ್ಸ್ ಮಾಡುತ್ತೀರಿ?

ಶ್ರೀ ಎಂ. ರಾಜಶೇಖರ ಮೂರ್ತಿ:- ತಾವು ಸ್ವಲ್ಪ ಸಮಾಧಾನವಾಗಿ ಕುಳಿತುಕೊಂಡರೆ ಹೇಳುತ್ತೇನೆ. ನಾನು ಹೇಳಿದ್ದು ನೆರೆಹಾವಳಿಗೋಸ್ಕರ ಕೊಟ್ಟಿದ್ದೇನೆ, ಅದನ್ನು ಸಪರೇಟ್ ಆಗಿ ಕೊಡುತ್ತಾ ಇದ್ದೇನೆ. ನೆರೆಹಾವಳಿಗೋಸ್ಕರ ನಾವು ರಿಲೀಸ್ ಮಾಡಿದುದ್ದು 40 ಕೋಟಿ 78 ಲಕ್ಷ. ಮೊದಲು 9 ಕೋಟಿ ಡಿ.ಸಿ.ಗಳ ಹತ್ತಿರ ಇತ್ತು. ಅದೂ ಇದಕ್ಕೋಸ್ಕರವೇ ಖರ್ಚು ಮಾಡಿದೆ, ಸುಮಾರು 50 ಕೋಟಿ ರೂಪಾಯಿ ಈಗಾಗಲೇ ಖರ್ಚು ಮಾಡಿದ ಹಾಗೆ ಆಯಿತು. 15 ಕೋಟಿ ರೂಪಾಯಿ ಸಪ್ಲಿಮೆಂಟರಿ ಡಿಮ್ಯಾಂಡ್ಸ್‌ನಲ್ಲಿ ನೀವೇ ಕೊಟ್ಟಿದ್ದೀರಿ. 15 ಕೋಟಿ ರೂಪಾಯಿ ಇನ್ನು ಮೂರು ದಿವಸದಲ್ಲಿ ಬಿಡುಗಡೆ ಮಾಡುತ್ತೇವೆ. 65 ಕೋಟಿ ರೂಪಾಯಿ ಕೊಟ್ಟ ಹಾಗೆ ಆಯಿತು. ಇದು ಜಾಸ್ತಿ ಎಂದು ನಾನು ಹೇಳುವುದಿಲ್ಲ. ನೀವು ಹೇಳಿದಿರಿಲ್ಲ. 300 ಕೋಟಿ ರೂಪಾಯಿ ಖರ್ಚು ಮಾಡಿರುವುದರಲ್ಲಿ 65 ಕೋಟಿ ರೂಪಾಯಿ ಏನು ಎಂದು. ಇವತ್ತೇ 300 ಕೋಟಿ ರೂಪಾಯಿ ಖರ್ಚು ಮಾಡಬೇಕು ಎಂದರೆ ಯಾವ ಸರ್ಕಾರವೂ ಮಾಡುವುದಕ್ಕೆ ಆಗುವುದಿಲ್ಲ, ಅದಕ್ಕೆ ಸ್ವಲ್ಪ

ಕಾಲ ಬೇಕಾಗುತ್ತದೆ. ಎವೆರಿ ಮಂತ್ ಸ್ವಲ್ಪ ಸ್ವಲ್ಪ ಖರ್ಚು ಮಾಡಿಕೊಂಡು ಹೋಗಬೇಕಾಗುತ್ತದೆ. ಖರ್ಚು ಮಾಡುವಾಗ ಕೆಲವು ರೂಲ್ಸ್ ಮತ್ತು ರೆಗ್ಯುಲೇಷನ್ಸ್ ಕೂಡಾ ಫಾಲೋ ಮಾಡಬೇಕಾಗುತ್ತದೆ. ನಾಳೆ ನೀವೇ ಪಬ್ಲಿಕ್ ಅಕೌಂಟ್ಸ್ ಕಮಿಟಿಯಲ್ಲಿ, ಎಸ್ಟಿಮೇಟ್ಸ್ ಕಮಿಟಿಯಲ್ಲಿ ಹಿಡಿದುಕೊಳ್ಳುತ್ತೀರಿ, ಅದನ್ನು ಎಕ್ಸ್‌ಪ್ಲೇನ್ ಮಾಡಿ ಎಂದು. ಅವೆಲ್ಲಾ ಕಷ್ಟ ಇದೆ. ಆ ಕಾನೂನು ತೊಡಕನ್ನು ಬಿಡಿಸಿಕೊಂಡು ನಾವು ಅಮೌಂಟನ್ನು ಖರ್ಚು ಮಾಡಬೇಕಾಗುತ್ತದೆ. ಈ ಎಲ್ಲಾ ಅಮೌಂಟ್ ಕೊಡತಕ್ಕ ಕಾಲದಲ್ಲಿ ನಾವು ಯಾವ ರೀತಿ ಕೊಡುತ್ತಿದ್ದೇವೆ ಎಂದರೆ ಅವರಿಗೆ ಕ್ಯಾಶ್ ಕೊಡುತ್ತಾ ಇಲ್ಲ, ಚೆಕ್ ಮೂಲಕ ಕೊಡುತ್ತಿದ್ದೇವೆ. ಹಿಂದೆ ಯಾವಾಗಲೂ ಚೆಕ್ ಮುಖಾಂತರ ಇರಲಿಲ್ಲ. ಈಗ ನಾವು ಚೆಕ್ ಇಂಟ್ರೊಡ್ಯೂಸ್ ಮಾಡಿದ್ದೇವೆ. ಏಕೆಂದರೆ ಅಮೌಂಟ್ ಮಿಸ್ ಯೂಸ್ ಆಗಬಾರದು, ಜನರಿಗೆ ನೇರವಾಗಿ ಅನುಕೂಲ ಆಗಬೇಕು ಎಂಬ ದೃಷ್ಟಿಯಿಂದ ಈ ರೀತಿ ಮಾಡಿದ್ದೇವೆ.

ಶ್ರೀ ಬಿ.ಹೆಚ್. ಲಕ್ಷ್ಮಣಯ್ಯ:- ಅದರಲ್ಲಿ ಯಾವ್ಯಾವ ಜಿಲ್ಲೆಗೆ ಎಷ್ಟು ಕೊಟ್ಟಿದ್ದೀರಿ ಎಂಬುದನ್ನು ದಯಮಾಡಿ ಹೇಳಬೇಕು.

ಶ್ರೀ ಎಂ. ರಾಜಶೇಖರಮೂರ್ತಿ:- ಕೊನೆಯಲ್ಲಿ ಪ್ರಶ್ನೆ ಕೇಳಿಬಿಟ್ಟರೆ ಒಳ್ಳೆಯದು. 27 ಕೋಟಿ ರೂಪಾಯಿ ಕೆಲಾಮಿಟಿ ರಿಲೀಫ್ ಫಂಡ್ ಎಂದು ಕೊಟ್ಟಿದ್ದಾರೆ. 27 ಕೋಟಿ ರೂಪಾಯಿ ಕೆಲಾಮಿಟಿ ಫಂಡ್ ಅದು ಸಾಕಾಗತಕ್ಕ ಅಮೌಂಟ್ ಅಲ್ಲ. ನೈಂತ್ ಫೈನಾನ್ಸ್ ಕಮೀಷನ್‌ನಲ್ಲಿ 27 ಕೋಟಿ ರೂಪಾಯಿ ಎಂದು ಫಿಕ್ಸ್ ಆದದ್ದು; ಅದು ಹೊಸದಾಗಿ. ಅದಕ್ಕಿಂತ ಹಿಂದೆ ಬೇರೆ ಪ್ರೊಸೀಜರ್ ಇತ್ತು. ಏನು ಅಂದರೆ ಏನಾದರೂ ಪ್ರಕೃತಿ ವಿಕೋಪದಿಂದ ಹಾನಿ ಆಯಿತು ಎಂದರೆ ಒಂದು ಟೀಮ್ ಬರುತ್ತಿತ್ತು; ಟೀಮ್ ಬಂದಾಗ ಒಂದು ರಿಪೋರ್ಟ್ ತೆಗೆದುಕೊಂಡು ಹೋಗುತ್ತಿತ್ತು, ಅಲ್ಲಿಂದ ಹಣವನ್ನು ಬಿಡುಗಡೆ ಮಾಡುತ್ತಿದ್ದರು. ಈಗ ಹಾಗೆ ಮಾಡದೇ ನೈಂತ್ ಫೈನಾನ್ಸ್ ಕಮೀಷನ್‌ನಲ್ಲಿ ಕರ್ನಾಟಕಕ್ಕೆ 27 ಕೋಟಿ ರೂಪಾಯಿ ಎಂದು ಫಿಕ್ಸ್ ಮಾಡಿದ್ದಾರೆ. ಆ 27 ಕೋಟಿ ರೂಪಾಯಿಯೊಳಗೆ 20 ಕೋಟಿ 75 ಲಕ್ಷ ಸೆಂಟರ್‌ದು. 6 ಕೋಟಿ 25 ಲಕ್ಷ ಸ್ಟೇಟ್ ಗವರ್ನ್‌ಮೆಂಟ್‌ದು ಎಂದು, ಒಟ್ಟು 27 ಕೋಟಿ ರೂಪಾಯಿ ಆಗಿದೆ. ಈ 27 ಕೋಟಿ ರೂಪಾಯಿ ಏನು ಇದೆ, ಇದು ಸಾಲುತ್ತಾ ಇಲ್ಲ. ಇದು ಬದಲಾವಣೆ ಆಗಬೇಕಾಗುತ್ತದೆ. ಈಗ ಟೆಂತ್ ಫೈನಾನ್ಸ್ ಕಮೀಷನ್ ಬಂದಿದೆ. ಟೆಂತ್ ಫೈನಾನ್ಸ್ ಕಮೀಷನ್ ಬಂದಾಗ ನಾನು ಆ ಟೆಂತ್ ಫೈನಾನ್ಸ್ ಕಮೀಷನ್ ಛೇರ್‌ಮನ್ ಯಾರು ಇದ್ದಾರೆ, ಮಿ: ಪಂತ್ ಅವರನ್ನು ಒಂದೆರೆಡು ಸಲ ಆಗಲೇ ಭೇಟಿ ಮಾಡಿದ್ದೇನೆ. ಈ ಪ್ರಶ್ನೆಯನ್ನು ಇನ್ನೂ ಡಿಸ್ಕಸ್ ಮಾಡಿಲ್ಲ. ಅದಕ್ಕೇ ಸಪರೇಟ್ ಆಗಿ ಇಟ್ಟುಕೊಳ್ಳೋಣ ಎಂದು ಮಾತಾಡಿದ್ದಾರೆ. ಮಾಡಿದಾಗ ಟೆಂತ್ ಫೈನಾನ್ಸ್ ಕಮೀಷನ್‌ಗೆ we have to make out a case for allocating a higher amount. I am trying to build up the records as to how to urge the Finance Commission to enhance the amount.

Sri P.G.R. Sindia:- Our whole point is, ಈಗ ನೈಂತ್ ಫೈನಾನ್ಸ್ ಕಮೀಷನ್‌ನಲ್ಲಿ 27 ಕೋಟಿ ರೂಪಾಯಿ ಕೊಡಬೇಕೆಂದು ಫಿಕ್ಸ್ ಮಾಡಿದ್ದಾರೆ. ಟೆಂತ್ ಫೈನಾನ್ಸ್ ಕಮೀಷನ್ ರಿಪೋರ್ಟ್‌ನ ರೆಕ್ಮಂಡೇಷನ್ ಬರುವುದು ಇನ್ನೂ ಮೂರು ವರ್ಷ ಆಗುತ್ತದೆ. ಮೂರು ವರ್ಷದ ನಂತರ ಕೇಸ್ ಮೇಕ್ ಔಟ್ ಮಾಡತಕ್ಕದ್ದು, ಅದು ಬೇರೆ ವಿಚಾರ. ಆದರೆ ನೀವು ಗವರ್ನಮೆಂಟ್ ಆಫ್ ಇಂಡಿಯಾದಿಂದ ಕೇಳಬೇಕಾಗಿರತಕ್ಕದ್ದು, ಈ ಫ್ಲಡ್ ರಿಲೀಫ್‌ಗೆ ಸ್ಪೆಷಲ್ ಗ್ರಾಂಟ್ ಎಂದು ಕೇಳಬೇಕು. ಈಗ ಟೆಂತ್‌ಕಮೀಷನ್‌ಗೆ ನಾವು ಅರ್ಜಿ ಮಾಡುತ್ತೇವೆಂದರೆ ಅದರಿಂದ ಏನು ಉಪಯೋಗ ನಮಗೆ?

ಶ್ರೀ ಎಂ. ರಾಜಶೇಖರಮೂರ್ತಿ:- ಗವರ್ನಮೆಂಟ್ ಆಫ್ ಇಂಡಿಯಾದವರು ಅವರ ಹಣಕಾಸಿನ ಪರಿಸ್ಥಿತಿಯೊಳಗೆ ಯಾರಿಗೂ ಗ್ರಾಂಟ್ ಕೊಡತಕ್ಕಂಥ ಪರಿಶೀಲನೆಯಲಿಲ್ಲ. ಈಗ

ಯಾರಿಗೂ ಗ್ರಾಂಟ್ ಕೂಡ ಕೊಟ್ಟಿಲ್ಲ. ಕೊಟ್ಟಿರತಕ್ಕದ್ದು ಎಲ್ಲಾ ಅಡ್ವಾನ್ಸೇ ನಮಗೂ ಅಡ್ವಾನ್ಸ್ ಎಂದು ಕೊಟ್ಟಿದ್ದಾರೆ. ಬೇರೆ ಸ್ಟೇಟ್‌ಗಳಿಗೂ ಅಡ್ವಾನ್ಸ್ ಎಂದು ಕೊಟ್ಟಿದ್ದಾರೆ. ಆದ್ದರಿಂದ ಗ್ರಾಂಟ್ ಎಂದು ಕೊಡುವುದಿಲ್ಲ, ನಾವು ಅದನ್ನು ಎಕ್ಸ್‌ಪೆಕ್ಟ್ ಮಾಡುವ ಹಾಗೆ ಇಲ್ಲ.

5.15 ಪಿಎಂ

ಅತಿ ಮುಖ್ಯವಾದ ವಿಚಾರವೇನೆಂದರೆ ರೈತರಿಗೆ ಸಂಬಂಧಪಟ್ಟಂಥ ವಿಚಾರ. ಏಕೆಂದರೆ ರೈತರಿಗೆ ಇದರಿಂದ ಬಹಳ ತೊಂದರೆಯಾಗುತ್ತದೆ. ಹೆಚ್ಚಿಗೆ ಆಸ್ತಿಪಾಸ್ತಿಗಳು ನಷ್ಟವಾಗಿರತಕ್ಕಂಥದ್ದು ರೈತರದ್ದು. 300 ಕೋಟಿ ರೂಪಾಯಿಯೊಳಗೆ ನಾವು ಬ್ರೇಕ್ ಆಫ್ ನೋಡಿಕೊಂಡರೆ ಯಾರಿಗೆ ನಷ್ಟವಾಗಿದೆ ಅಂದರೆ ರೈತರಿಗೆ ಬಹಳ ನಷ್ಟವಾಗಿದೆ. ಇದು ನಿಮ್ಮ ಮನಸ್ಸಿನಲ್ಲೆಲ್ಲ ಬಹಳ ಮಟ್ಟಿಗೆ ತುಂಬಿರುವ ಹಾಗೆ ಕಾಣುತ್ತದೆ. ಎಲ್ಲರೂ ಕೂಡ ಅವರ ಬಗ್ಗೆ ಮಾತನಾಡಿದ್ದಾರೆ. ರೈತ ಬಹಳ ತೊಂದರೆಯಲ್ಲಿದ್ದಾನೆಂಬುದನ್ನು ನಾನು ಒಪ್ಪಿಕೊಳ್ಳುತ್ತೇನೆ. ಅವನು ಬಹಳ ಕಷ್ಟದಲ್ಲಿದ್ದಾನೆ. ಅನೇಕ ಜನ ಕೈಗಾರಿಕೆಯನ್ನು ಮಾಡಿ ಶ್ರೀಮಂತರಾಗಿರುವವರು ಇದ್ದಾರೆ, ಇನ್ನು ಬೇರೆಬೇರೆ ಅವ್ಯವಹಾರಗಳಿಗೆ ಕೈಹಾಕಿ ಶ್ರೀಮಂತರಾಗಿರುವವರು ಇದ್ದಾರೆ. ವ್ಯಾಪಾರ ಮಾಡಿ ಶ್ರೀಮಂತರಾಗಿರುವವರು ಇದ್ದಾರೆ. ಬ್ಲಾಕ್‌ಮಾರ್ಕೆಟ್ ಮಾಡಿ ಶ್ರೀಮಂತರಾಗಿರುವವರು ಇದ್ದಾರೆ. ಆದರೆ ವ್ಯವಸಾಯ ಮಾಡಿ ಶ್ರೀಮಂತರಾಗಿರುವವರನ್ನು ನಾನು ನೋಡಿಲ್ಲ. ರೈತರು ಬಹಳ ಕಷ್ಟದಲ್ಲಿದ್ದಾರೆ. ಇದನ್ನು ಎಲ್ಲರೂ ಒಪ್ಪಿಕೊಳ್ಳಬೇಕು. ನಾನು ಒಪ್ಪಿಕೊಳ್ಳುತ್ತೇನೆ. ಈ ವಿಚಾರದಲ್ಲಿ ನಾನು ನಿಮ್ಮ ಜೊತೆಯಲ್ಲಿ ಒಬ್ಬನಾಗಿದ್ದೇನೆ. 140 ಕೋಟಿ ಆಸ್ತಿ ಆತನಿಗೆ ಕ್ರಾಪ್ ಕಾಂಪನ್‌ಸೇಷನ್ ಬಗ್ಗೆ ಕೊಟ್ಟಿಲ್ಲ, ಅವನಿಗೆ ಬಹಳ ನಷ್ಟವಾಗಿದೆ ಎಂದು ತಾವು ಹೇಳುತ್ತಿದ್ದೀರಿ. ನಿಜ, ಕೇಂದ್ರ ಸರ್ಕಾರದ ಜೊತೆಯಲ್ಲಿ ಇದನ್ನು ಪ್ರಸ್ತಾಪ ಮಾಡಿಕೊಡಬೇಕೆಂದು ಕೇಳಿದಾಗ ಇದನ್ನು ಕೊಡಲಿಕ್ಕೆ ಆಗುವುದಿಲ್ಲ. ಇನ್‌ಪುಟ್ ಸಬ್ಸಿಡಿ ಅಂತ ನಾವು ಕೊಡುತ್ತೇವೆ. ನಮ್ಮ ಲೆಕ್ಕಚಾರದ ಪ್ರಕಾರ 150 ಇನ್‌ಪೂಟ್ ಸಬ್ಸಿಡಿ ಅಂತ ಹೇಳುತ್ತೇವೆ. ನೀವು 200 ರೂಪಾಯಿ ಒಂದು ಎಕರೆಗೆ ಅಂತ ಹೇಳಿಕೊಂಡು ಬಂದಿದ್ದೀರಿ. ನೀವು ಆ ರೀತಿ ಕೊಡಬಹುದು. ಇನ್‌ಪೂಟ್ ಸಬ್ಸಿಡಿ ಕೊಡ ಅಂತ ಹೇಳಿದ್ದಾರೆ. ಈಗ ಅದರ ಜೊತೆಗೆ ಏತಕ್ಕೆ ಎಂದು ನಾವು ಕೇಳಿದ್ದೆವು. ರೈತರು ಕ್ರಾಪ್ ಇನ್ಷೂರ್ ಮಾಡಬೇಕಾಗುತ್ತದೆ. ಕ್ರಾಪ್ ಇನ್ಷೂರ್ ಮಾಡಿ ಕ್ರಾಪ್ ಇನ್ಷೂರೆನ್ಸ್ ಕಂಪನಿಯಿಂದ ಆ ಅಮೌಂಟ್ ಅನ್ನು ಕ್ಲೈಮ್ ಮಾಡಬೇಕಾಗುತ್ತದೆಂದು ಅವರು ಹೇಳಿದರು. ಆದರೆ ಇನ್ಷೂರೆನ್ಸ್ ಮಾಡಬೇಕಾದರೆ ಏನು ಕಷ್ಟ ಇದೆ ಅಂದರೆ ಇದುವರೆಗೂ ಇನ್ಷೂರೆನ್ಸ್ ಮಾಡಿ ರೈತನಿಗೆ ಏನು ಸಿಕ್ಕಿದೆ? ಯಾವರೀತಿ ಅವನಿಗೆ ತೊಂದರೆಯಾಗಿದೆ ಎನ್ನುವುದನ್ನು ನಾನು ಸ್ವಲ್ಪ ತಮಗೆ ವಿವರಿಸಿ ಹೇಳುತ್ತೇನೆ. ಏಕೆಂದರೆ ಈ ಮಾಹಿತಿ ನಿಮ್ಮಲ್ಲಿ ಇಲ್ಲ. ಕ್ರಾಪ್ ಕಾಂಪನ್‌ಸೇಷನ್ ಯಾವಾಗ ಪ್ರಥಮವಾಗಿ ಇಂಟರ್‌ಡ್ಯೂಸ್ ಮಾಡಿದರು ಅಂದರೆ 1985–86ರಲ್ಲಿ ಮೊದಲನೆಯ ಸಾರಿ ಬಂತು. ಒಟ್ಟು 174 ತಾಲ್ಲೂಕಗಳನ್ನು ನೋಟಿಫೈ ಮಾಡಿದ್ದಾರೆ. ಯಾವ್ಯಾವ ಫಸಲಿಗೆ ಇದನ್ನು ಕವರ್ ಮಾಡುತ್ತಾರೆ ಅಂದರೆ ಗೋಧಿ, ಸನ್‌ಫ್ಲವರ್, ಬೆಂಗಾಲಗ್ರಾಂಮ್, ಜೋಳ, ಭತ್ತ, Maize, Bajra ಈ ಕ್ರಾಪ್ಸ್‌ಗೆ ಇದು ಅನ್ವಯಿಸುತ್ತದೆ. ಉಳಿದ ಕ್ರಾಪ್‌ಗಳಿಗೆ ಇದು ಅನ್ವಯಿಸುವುದಿಲ್ಲ. ರಾಗಿ ಇದರಲ್ಲಿ ಇನ್‌ಕ್ಲೂಡ್ ಆಗಿಲ್ಲ. farmers who have availed loan from the co-operative societies and Banks they are entitled for the compensation ಬೇರೆಯವರಿಗೆ ಇಲ್ಲ. ಯಾರು ಲೋನ್ ತೆಗೆದುಕೊಂಡಿಲ್ಲವೋ ಅವರಿಗೆ ಇಲ್ಲ. It is linked with the loan ಅಮೌಂಟ್ ಎಷ್ಟು ಅಂದರೆ 10 ಸಾವಿರಕ್ಕಿಂತ ಜಾಸ್ತಿ ಅವರು ಇನ್ಷೂರ್ ಮಾಡುವ ಹಾಗೆ ಇಲ್ಲ. ಅದು ಲಿಮಿಟ್ ಆಗಿದೆ. ತಾಲ್ಲೂಕನ್ನು ಯೂನಿಟ್ ಆಗಿ ತೆಗೆದುಕೊಳ್ಳುತ್ತಾರೆ. ತಾಲ್ಲೂಕ್ ಯೂನಿಟ್ ಆಗಿ ತೆಗೆದುಕೊಂಡು ಅದರಲ್ಲಿ ಎಷ್ಟು ಪರ್ಸೆಂಟ್ ಅಂದರೆ 60, 70 ಪರ್ಸೆಂಟ್ ಅಂತ ಹೇಳುತ್ತಾರೆ. ಆ ಮೆಥೆಡ್‌ನಲ್ಲಿ ಭರಬೇಕೆಂದು ಹೇಳುತ್ತಾರೆ. ಅಣೆವಾರಿ ಬರಬೇಕೆಂದು ಹೇಳುತ್ತಾರೆ. ಆದ್ದರಿಂದ ಏನಾಗುತ್ತದೆ ಅಂದರೆ ಆವರೇಜ್ ತೆಗೆದುಕೊಂಡರೆ

ಆದರೊಳಗೆ ಬರುವುದೇ ಇಲ್ಲ. ಇನ್ಷ್ಯೂರ್ ಮಾಡಿದರೂ ಅವನಿಗೆ ಆದರ ಪ್ರಯೋಜನ ಬರುವುದಿಲ್ಲ. ಆ ಇನ್ಸೂರೇನ್ಸ್ ಪ್ರಿಮಿಯಮ್, 2 ಭಾಗ ಕೇಂದ್ರ ಸರ್ಕಾರದವರು ವಹಿಸಿಕೊಳ್ಳುತ್ತಾರೆ. ಒಂದು ಭಾಗ ರಾಜ್ಯ ಸರ್ಕಾರದವರು ವಹಿಸಿಕೊಳ್ಳುತ್ತಾರೆ. ಮ್ಯಾಕ್ಸಿಮಂ 10 ಸಾವಿರ, ಪ್ರೋಗ್ರೆಸ್ 1985 ರಿಂದ 1991–92ರವರೆಗೆ ಎಷ್ಟು ಕವರ್ ಆಗಿದೆ ಅಂದರೆ 14 ಲಕ್ಷ 97 ಸಾವಿರ ಹೆಕ್ಟೇರ್ ಕವರ್ ಆಗಿದೆ, ಇಷ್ಟು ವರ್ಷಕ್ಕೆ ಫಾರ್ಮರ್ಸ್ ಕವರ್ಡ್ 8 ಲಕ್ಷ 73 ಸಾವಿರ ಜನ. 1985–86 ರಿಂದ ಈ ತಹಲ್‌ವರೆಗೆ ನಾನು ಹೇಳುತ್ತಿರುವುದು. ಅಂದರೆ, ಬಹಳಷ್ಟು ವರ್ಷಗಳಿಂದ 227 ಕೋಟಿ 7 ಲಕ್ಷ ರೂಪಾಯಿಗಳಿಗೆ ಇನ್ಷೂರ್ ಮಾಡಿದ ಆತನಿಗೆ ಬಂದಿರತಕ್ಕ ಹಣ ಕೇವಲ 15 ಕೋಟಿ ರೂಪಾಯಿಗಳು. ಈ ಇನ್ಷೂರೆನ್ಸ್ ಸಿಸ್ಟಮ್ ಏನಿದೆ, ಇದರಿಂದ ರೈತನಿಗೆ ಅನುಕೂಲವಾಗಿಲ್ಲ. ಇದರ ಬಗ್ಗೆ ಸರ್ಕಾರ ಯೋಚನೆ ಮಾಡಬೇಕಾಗುತ್ತದೆ. ಅಖಿಲ ಭಾರತದ ಮಟ್ಟದಲ್ಲಿಯೂ ಯೋಚನೆ ಮಾಡಬೇಕಾಗುತ್ತದೆ.

ಶ್ರೀ ಬಿ.ಎಚ್. ಬನ್ನಿಕೋಡ್:– ರೈತರು ಎಷ್ಟು ಹಣವನ್ನು ಇನ್ಷೂರೆನ್ಸ್‌ನಲ್ಲಿ ತುಂಬಿದ್ದರು ಎನ್ನುವ ಬಗ್ಗೆ ನಿಮ್ಮ ಹತ್ತಿರ ಮಾಹಿತಿ ಇದೆಯೇ?

ಶ್ರೀ ಎಂ. ರಾಜಶೇಖರಮೂರ್ತಿ:– ನಿಮಗೆ ಇದರ ಬಗ್ಗೆ ಮಾಹಿತಿ ಬೇಕಾದರೆ, ಇದನ್ನು ಸೈಕ್ಲೋಸ್ಟೈಲ್ ಮಾಡಿಸಿ ಕೊಡುತ್ತೇನೆ. ನಿಮಗೆ ಈ ಮಾಹಿತಿ ಬೇಕಾಗುತ್ತದೆ. ರಾಗಿ, Jawar, Maize, Sunflower,- - - - ಇವೆಲ್ಲವೂ ಸೇರಿದೆ. ಖರೀಫ್ ಕ್ರಾಪ್‌ನಲ್ಲಿ ತೆಗೆದುಕೊಂಡಾಗ ಈ ಮೇಲಿನವು ಬರುತ್ತವೆ. ಮತ್ತು ಇನ್‌ಪುಟ್ ಸಬ್ಸಿಡಿಗೆ ಎಲ್ಲಾ ಕಡೆ ಹಣ ಕೊಟ್ಟಿಲ್ಲ. ಹಣ ಕೊಟ್ಟಿರತಕ್ಕಂಥಾದ್ದು ಚಿತ್ರದುರ್ಗಕ್ಕೆ ಮಾತ್ರ. ಇದು ಮಾನ್ಯ ಸದಸ್ಯರಿಗೂ ಗೊತ್ತಿದೆ. ಸುಮಾರು 41 ಲಕ್ಷ ರೂಪಾಯಿಗಳಷ್ಟು ಇನ್‌ಪುಟ್ ಅಲ್ಲಿಗೆ ಕೊಡಲಾಗಿದೆ. ಈಗ ಮತ್ತೆ 5 ಕೋಟಿ ರೂಪಾಯಿಗಳನ್ನು ಬಿಡುಗಡೆ ಮಾಡುತ್ತಿದ್ದೇವೆ. ಇರಿಗೇಷನ್ ಪಂಪುಸೆಟ್ಟುಗಳ ಬಗ್ಗೆ ಈಗಾಗಲೇ ತೀರ್ಮಾನ ತೆಗೆದುಕೊಂಡಿದ್ದೇವೆ. ಕೆಲವು ಕಡೆ ಐ.ಪಿ.ಸೆಟ್‌ಗಳಿಗೆ 3 ಸಾವಿರ ರೂಪಾಯಿಗಳನ್ನು ಕೊಡಬೇಕೆಂದು ಮಾಡಿದ್ದೇವೆ. ಈಗ ಇದನ್ನು ಇರುವ 15 ಕೋಟಿ ರೂಪಾಯಿಯೊಳಗೆ ಬಿಡುಗಡೆ ಮಾಡುತ್ತೇವೆ. ಈಗ ಸರ್ಕಾರಕ್ಕೆ ವರದಿಯಾಗಿರುವಂತೆ ಒಟ್ಟು 5,676 ಐ.ಪಿ.ಸೆಟ್‌ಗಳು ಮುಳುಗಡೆಯಾಗಿವೆ. ಇದಕ್ಕೆ ದುಡ್ಡು ಬೇಕಾಗಿರತಕ್ಕಂಥಾದ್ದು 2,43,900 ರೂಪಾಯಿಗಳು ಇದನ್ನು ಪೂರ್ತಿಯಾಗಿ ಸ್ವಲ್ಪ ದಿವಸದಲ್ಲಿಯೇ ಎಲ್ಲಾ ಕಡೆ ಚೆಕ್ ಕೊಟ್ಟು ಮುಗಿಸಿಬಿಡುತ್ತೇವೆ. ಇದಕ್ಕೆ ಆದಾಯದ ಮಿತಿ ಇಲ್ಲ. ಎಲ್ಲರಿಗೂ ಕೊಡಲಾಗುವುದು. ಶಿವಮೊಗ್ಗ ಮತ್ತು ಚಿತ್ರದುರ್ಗ ಜಿಲ್ಲೆಗಳಿಗೆ ಕ್ರಾಪ್ ಕಾಂಪನ್‌ಸೇಷನ್ ಕೊಡಲಾಗಿದೆ. ಮತ್ತು ಈ ಸಲ ಪರಿಹಾರ ಹಣ ಕೊಡುವಾಗ ಹಿಂದೆ ಏನು ರಿಲೀಫ್ ಇತ್ತು, ಅದಕ್ಕಿಂತ ಸ್ವಲ್ಪ ಜಾಸ್ತಿ ಮಾಡಿದ್ದೇವೆ. ಯಾವುವು ಎಂದರೆ, raising of income ಇದೆಯೆಲ್ಲಾ 6,400 ರೂಪಾಯಿಗಳಿದ್ದುದು 11,000 ರೂಪಾಯಿಗಳಿಗೆ ಮಾಡಿದ್ದೇವೆ. Enhancing inputs subsidy 300 ರೂಪಾಯಿಗಳಿದ್ದುದು 500 ರೂಪಾಯಿಗಳೆಂದು ಮಾಡಿದ್ದೇವೆ. Enhancing exgratia payable to the next kin of the deceased, Rs.8000 to Rs.40,000/- ಈಗ ಒಟ್ಟು 115 ಜನರು ಪ್ರಾಣ ಕಳೆದುಕೊಂಡಿದ್ದಾರೆ. Gastro Entitis - - - - - ಸುಮಾರು 113 ಜನರು ಹೋಗಿದ್ದಾರೆ. 115+113 ಒಟ್ಟು 228ಜನರು. 115 ಜನರಲ್ಲಿ ಇಬ್ಬರು ಮಕ್ಕಳಿರುವುದರಿಂದ, ಉಳಿದ 113 ಜನರಿಗೆ ಪೂರ್ತಿಯಾಗಿ 40,000 ರೂಪಾಯಿಗಳಂತೆ ಕೊಡಲಾಗಿದೆ. Gastro Entitis ಬಗ್ಗೆ ಹಿಂದೆ ಒಂದು ಆರ್ಡರ್ ಇಶ್ಯೂ ಆಗಿತ್ತು. ನವೆಂಬರ್ 30ರೊಳಗೆ ಎಷ್ಟು ಜನ ಈ ರೀತಿ ಸತ್ತಿದ್ದಾರೆ. ಅಷ್ಟು ಜನರಿಗೆ ಮಾತ್ರ ಕೊಡಬೇಕೆಂದು ಮಾಡಿದ್ದೇವೆ. ಈಗ ಆ ಆರ್ಡರ್ ಮತ್ತೆ ರಿವೈಸ್ ಮಾಡಿದ್ದೇವೆ. ಇದುವರೆಗೆ 27 ಜನರಿಗೆ ಮಾತ್ರ ಕೊಡಲಾಗಿದ್ದು, ಒಟ್ಟು 113 ಜನರಿದ್ದಾರೆ. ಅವರಲ್ಲಿ 27 ಜನರನ್ನು ಕಳೆದು ಎಷ್ಟು ಜನ ಉಳಿಯುತ್ತಾರೋ, ಅಷ್ಟು ಜನರಿಗೆ 40,000 ರೂಪಾಯಿಯಂತೆ ದುಡ್ಡು ಕೊಡಬೇಕೆಂದು ತೀರ್ಮಾನಿಸಲಾಗಿದೆ. ಈ ಹಣ 15 ಕೋಟಿ ರೂಪಾಯಿಗಳಿಗೆ ಕವರ್ ಆಗುವುದರಿಂದ, ಇದನ್ನು ಕೊಡುತ್ತೇವೆ.

ಶ್ರೀ ಬಿ.ಎಸ್. ಯಡಿಯೂರಪ್ಪ:- ಇದುವರೆವಿಗೆ ನಿಮ್ಮ ಲಿಮಿಟ್ ಪ್ರಕಾರ ಆದಾಯ 11,000 ಒಳಗಡೆ ಇರತಕ್ಕಂಥ ಎಷ್ಟು ಜನ ರೈತರಿಗೆ ಪರಿಹಾರ ಕೊಡಲಾಗಿದೆ ಎಂಬ ಅಂಕಿ-ಅಂಶ ಹೇಳಲಿಲ್ಲ. ಬೆಳೆ ನಾಶವಾಗಿರುವಂಥ ಎಷ್ಟು ಜನ ರೈತರುಗಳಿಗೆ ಪರಿಹಾರ ಕೊಟ್ಟಿದ್ದೀರಿ? ತಾವು ಆದಾಯದ ಮಿತಿಯನ್ನು 6400ರಿಂದ 11,000ವರೆಗೆ ಏರಿಸಲಾಗಿದೆಯೆಂದು ಹೇಳಿದ್ದೀರಿ. ಅದರಂತೆ, ಎಷ್ಟು ಜನ ರೈತರಿಗೆ ಪರಿಹಾರ ಸಿಕ್ಕಿದೆ? ಹಾಗೂ ಎಷ್ಟು ಲಕ್ಷ ಎಕರೆಗೆ ಪರಿಹಾರ ಕೊಟ್ಟಿದ್ದೀರಿ?

ಶ್ರೀ ಎಂ. ರಾಜಶೇಖರಮೂರ್ತಿ:- ಕ್ರಾಪ್ ಕಾಂಪೆನ್‌ಸೇಷನ್ ಅಥವಾ ಇನ್‌ಪುಟ್ ಸಬ್ಸಿಡಿ ಎಂದು ನಾನು ಏನು ಹೇಳಿದ್ದೇನೆ, ಆ ಹಣವನ್ನು ಇನ್ನೂ ರಿಲೀಸ್ ಮಾಡಿಲ್ಲ. ಶಿವಮೊಗ್ಗ ಜಿಲ್ಲೆಗೆ ಮಾತ್ರ ಹಣವನ್ನು ಬಿಡುಗಡೆ ಮಾಡಲಾಗಿದೆ. ಅಲ್ಲಿ ನಿಮ್ಮವರೇ ಫಲಾನುಭವಿಗಳು ಇರುವುದು. ಶಿಕಾರಿಪುರದಲ್ಲಿ ಇನ್ನೂ ಹೆಚ್ಚು ಇದ್ದಾರೆ. ಬೇರೆ ಕಡೆಗಳಿಗೆ ಹಣವನ್ನು ಬಿಡುಗಡೆ ಮಾಡಿಲ್ಲ. ಇನ್‌ಪುಟ್ ಸಬ್ಸಿಡಿಗೋಸ್ಕರ 15 ಕೋಟಿ ರೂಪಾಯಿಯಲ್ಲಿ ಈಗ ತಕ್ಷಣಕ್ಕಾಗಿ 5 ಕೋಟಿ ರೂಪಾಯಿಗಳನ್ನು ಬಿಡುಗಡೆ ಮಾಡುತ್ತಿದ್ದೇವೆ.

ಶ್ರೀ ಬಿ.ಎಸ್. ಯಡಿಯೂರಪ್ಪ:- ತಮ್ಮ ಅಂಕಿ-ಅಂಶಗಳ ಪ್ರಕಾರ ಯಾರು ಅರ್ಹರಿದ್ದಾರೆಂದು ಹೇಳುತ್ತಿದ್ದೀರಿ? 11,000 ರೂಪಾಯಿಗಳ ಆದಾಯ ಇದ್ದು, ಬೆಳೆ ನಾಶವಾಗಿರುವಂಥ ಎಷ್ಟು ಜನ ರೈತರಿಗೆ ಪರಿಹಾರ ಕೊಟ್ಟಿದ್ದೀರಿ?

ಶ್ರೀ ಎಂ. ರಾಜಶೇಖರಮೂರ್ತಿ:- ಬೆಳೆಯ ಪರಿಹಾರ ಯಾರಿಗೂ ಇಲ್ಲ. ಅದನ್ನು ಕೊಡತಕ್ಕ ಪದ್ಧತಿಯೂ ಇಲ್ಲ. ಆ ಸ್ಕೀಮ್‌ಗೆ ಭಾರತ ಸರ್ಕಾರದಿಂದ ಒಪ್ಪಿಗೆಯೂ ಇಲ್ಲ. ಇನ್‌ಪುಟ್ ಸಬ್ಸಿಡಿ ಎಂದು ಕೊಟ್ಟಿರತಕ್ಕದ್ದು. ಅದರಲ್ಲಿ ನಿಮ್ಮ ಭಾಗಕ್ಕೆ 40 ಲಕ್ಷವನ್ನು ಕೊಟ್ಟಿದ್ದೇವೆ.

ಶ್ರೀ ಬಿ.ಎಸ್. ಯಡಿಯೂರಪ್ಪ:- ಎಕರೆವಾರು ಇಡೀ ರಾಜ್ಯಕ್ಕೆ ಎಷ್ಟು ಕೊಟ್ಟಿದ್ದೀರಿ?

ಶ್ರೀ ಎಂ. ರಾಜಶೇಖರಮೂರ್ತಿ:- ಎಕರೇವಾರು ಬೇಸಿಸ್ ಮೇಲೆ ತೆಗೆದುಕೊಂಡರೆ ಇಡೀ ರಾಜ್ಯದಲ್ಲಿ 3,13,200 ಎಕರೆ ಆಗುತ್ತದೆ. ಅದರಲ್ಲಿ 5 ಕೋಟಿಗಳನ್ನು ರಿಲೀಸ್ ಮಾಡಿದರೆ ಇನ್ನೂ ಕವರ್ ಆಗುತ್ತದೆ. ಈಗ ಪ್ರತಿ ತಿಂಗಳು ಹಣವನ್ನು ಬಿಡುಗಡೆ ಮಾಡುತ್ತಾ ಹೋಗುತ್ತೇವೆ. ಒಂದೇ ಸಲ ಎಲ್ಲಾ ಹಣವನ್ನು ಕೊಡಲು ಸಾಧ್ಯವಾಗುವುದಿಲ್ಲ.

ಶ್ರೀ ಬಿ.ಎಸ್. ಯಡಿಯೂರಪ್ಪ:- ನೀವು ಹಿರಿಯ ಮಂತ್ರಿಗಳಾಗಿದ್ದೀರಿ, ಹೊಸದಾಗಿ ಮಾನ್ಯ ವೀರಪ್ಪಮೊಯಿಲಿಯವರು ಮುಖ್ಯಮಂತ್ರಿಗಳಾಗಿ ಕುಳಿತಿದ್ದಾರೆ. ಇನ್ನು ನಾವು ಯಾವ ಭಾಷೆಯಲ್ಲಿ ನಿಮಗೆ ಹೇಳಬೇಕೋ ಗೊತ್ತಾಗುವುದಿಲ್ಲ. ನೀವು ಪರಿಹಾರವನ್ನು ಕೊಡುವ ಹೊತ್ತಿಗೆ ರೈತನು ಸತ್ತು ಹೋಗಿರುತ್ತಾನೆ. ಹಣಬರಲಿ ಎಂದರೆ ಅವನು ಬದುಕಿದ್ದರೆ ತಾನೇ ನೀವು ಕೊಡಲು ಹೋದವನು ಈಗಾಗಲೆ 50ದಿನಗಳು ಕಳೆದುಹೋಗಿದೆ, ಇನ್ನು ಹೇಗೆ ಹೇಳುವುದೋ ಗೊತ್ತಿಲ್ಲ.

ಛೇರ್ಮನ್:- ಅವರು ಪೂರ್ಣವಾಗಿ ಉತ್ತರವನ್ನು ಕೊಟ್ಟ ಮೇಲೆ ನೀವು ಪ್ರಶ್ನೆಯನ್ನು ಕೇಳಿ.

ಶ್ರೀ ಸಿ. ಬೈರೇಗೌಡ:- ಸನ್ಮಾನ್ಯ ಅಧ್ಯಕ್ಷರೆ, ಅವರು ಉತ್ತರ ಕೊಡುವುದರಲ್ಲಿ ರೈತರು ಸತ್ತು ಹೋಗುತ್ತಾರೋ ಅಥವಾ ಹಣವನ್ನು ಕೊಡುವುದರಲ್ಲಿ ಸತ್ತು ಹೋಗುತ್ತಾರೋ?

ಶ್ರೀ ಬಿ.ಎಸ್. ಯಡಿಯೂರಪ್ಪ:- ಅವನಿಗೆ ಪರಿಹಾರ ಹೋಗಿ ತಲುಪುವುದರೊಳಗೆ ಸತ್ತು ಹೋಗುತ್ತಾನೆ.

ಶ್ರೀ ಎಂ. ರಾಜಶೇಖರಮೂರ್ತಿ:- ಮಾನ್ಯ ವಿರೋಧಪಕ್ಷದ ನಾಯಕರು ಆಂಧ್ರಪ್ರದೇಶದಲ್ಲಿ ನೆರೆಹಾವಳಿ ಬಂದಾಗ ಯಾವ ರೀತಿಯಲ್ಲಿ ವಿಶ್ವಬ್ಯಾಂಕಿನಿಂದ ಹಣವನ್ನು ಪಡೆದರೋ ಅದೇ ರೀತಿಯಲ್ಲಿ ನೀವು ಪಡೆಯಬೇಕೆಂದು ಉತ್ತಮವಾದ ಸಲಹೆಯನ್ನು

ಕೊಟ್ಟಿದ್ದಾರೆ. ಆಂಧ್ರಪ್ರದೇಶದಿಂದ ಅದರ ಬಗ್ಗೆ ಮಾಹಿತಿಯನ್ನು ತರಿಸಿದ್ದೇನೆ, ಅದು ನನ್ನ ಹತ್ತಿರ ಇದೆ. ಆಂಧ್ರಪ್ರದೇಶಕ್ಕೆ ವಿಶ್ವಬ್ಯಾಂಕಿನಿಂದ 380 ಮಿಲಿಯನ್ ಡಾಲರ್ ಸಾಲವನ್ನು ಕೊಟ್ಟಿದ್ದಾರೆ. ಅಂದರೆ ಆಗಿನ ಫಾರಿನ್ ಎಕ್ಸ್‌ಚೇಂಜ್‌ನ ಪ್ರಕಾರ ಒಂದು ಡಾಲರ್‌ಗೆ 20.90 ಪೈಸೆ ಇತ್ತು. ಆದರಿಂದ 380 ಡಾಲರ್ ಎಂದರೆ ಸುಮಾರು 760 ಕೋಟಿ ರೂಪಾಯಿಯನ್ನು ಕೊಟ್ಟಿದ್ದಾರೆ. ಅದರಲ್ಲಿ ಇರಿಗೇಷನ್ ಮತ್ತು ಡ್ರೈನೇಜ್‌ಗೆ 126 ಮಿಲಿಯನ್ ಡಾಲರ್ for Roads and Bridges-111 Million Dollars, for Electricity 45 Million Dollars, for Agriculture 11 Million Dollars, Fisheries 16 Million Dollars, Rural Water Supply 10 Million Dollars, Muncipal Services 10 Million Dollars, for Technical Assistance- 15 Million Dollars, House building etc., 11 + 7 = 18 Million Dollars Coastal belts - 6 Million Dollars ಒಟ್ಟು 380 ಮಿಲಿಯನ್ ಡಾಲರ್‌ನ್ನು ಅವರಿಗೆ ಸಾಲವಾಗಿ ಕೊಟ್ಟಿದ್ದಾರೆ. ಈಗ ನಾವು ಏನು ಮಾಡಿದ್ದೇನೆಂದರೆ ಇದಕ್ಕೆ ಬದಲಾಗಿ ಸುಮಾರು 55,600 ಮನೆಗಳನ್ನು ಕಟ್ಟಲು ಕೇಂದ್ರ ಸರ್ಕಾರದವರು ನಮಗೆ ಹೇಳಿ, ಆ ಪ್ರಕಾರವಾಗಿ ನಾವು ಸ್ಕೀಮ್‌ನ್ನು ಮಾಡಿ ಅವರಿಗೆ ಕೊಟ್ಟಿದ್ದೇವೆ. ಮನೆಕಟ್ಟಲು 15 ಸಾವಿರ ಮತ್ತೆ ಇತರೆ ವೆಚ್ಚಗಳಾದ, ಸೈಟನ್ನು ಕೊಂಡುಕೊಳ್ಳಲು, ಸಿವಿಲ್ ಸೌಕರ್ಯಗಳನ್ನು ಕೊಡತಕ್ಕದಕ್ಕೆ 7 ಸಾವಿರ, ಒಟ್ಟು 22 ಸಾವಿರ ರೂಪಾಯಿಗಳು ಒಂದು ಮನೆಗೆ ವೆಚ್ಚವಾಗುತ್ತದೆ. ಆ ರೀತಿಯಲ್ಲಿ 55,600 ಮನೆಗಳಿಗೆ ಒಂದು ಸ್ಕೀಮ್‌ನ್ನು ಮಾಡಿ ಪ್ರಪೋಸಲ್‌ನ್ನು ಕೇಂದ್ರ ಸರ್ಕಾರಕ್ಕೆ ಕೊಟ್ಟಿದ್ದೇವೆ. ಅದರ ಬಗ್ಗೆ ಒಂದು ಸಭೆಯು ಕೂಡ ಆಯಿತು. ನಮ್ಮ ಹೌಸಿಂಗ್ ಕಮೀಷನರ್ ಸಹ ಆ ಸಭೆಗೆ ಹೋಗಿದ್ದರು. ಇದರ ಜೊತೆಗೆ ಸಾರ್ವಜನಿಕರ ಆಸ್ತಿ ನಾಶವಾಗಿದೆ, ಅದಕ್ಕೆ ಈಗಾಗಲೆ ರಾಜ್ಯಸರ್ಕಾರವು ಒಂದು ಸಮಿತಿಯನ್ನು ರಚನೆ ಮಾಡಿದೆ. ಅದರಲ್ಲಿ ರೆವಿನ್ಯೂ ಕಮೀಷನರ್, ನೀರಾವರಿ ಕಾರ್ಯದರ್ಶಿಗಳು, ಪಿ.ಡಬ್ಲ್ಯೂ.ಡಿ. ಕಾರ್ಯದರ್ಶಿಗಳು, ಮತ್ತು ಹೆಚ್.ಯು.ಡಿ. ಹಾಗೂ ಕಾರ್ಮಿಕ ಕಾರ್ಯದರ್ಶಿಗಳಿದ್ದಾರೆ. ಆ ಪ್ರಾಜೆಕ್ಟನ್ನು ಪ್ರಿಪೇರ್ ಮಾಡುತ್ತಿದ್ದಾರೆ. ಅದು ವಿಶ್ವಬ್ಯಾಂಕಿಗೆ ಹೋಗುತ್ತದೆ. Roads, Bridges, culverts, ಏನು ನಾಶವಾಗಿದೆ ಅದರ ಡೀಟೈಲ್ಸ್ ಬೇಕಾದರೆ ಕೊಡುತ್ತೇನೆ. ಆದರೆ ಫಿಗರ್ಸ್ ಸಿಗುತ್ತದೆ ಎಂದು ಹೇಳುವುದಕ್ಕಾಗುವುದಿಲ್ಲ. ಅದರ ಬಗ್ಗೆ ವಿವರವಾಗಿ ಮೆಮೊರಾಂಡಂನಲ್ಲಿ ಕೊಟ್ಟಿದೆ. ಅದಕ್ಕೋಸ್ಕರ ಒಂದು ಪ್ರಾಜೆಕ್ಟನ್ನು ತಯಾರು ಮಾಡಿದ್ದೇವೆ ಅದನ್ನು ವಿಶ್ವಬ್ಯಾಂಕಿಗೆ ಕಳಿಸುತ್ತಿದ್ದೇವೆ. ಅದಕ್ಕೆ ಸ್ವಲ್ಪ ಕಾಲಾವಕಾಶ ಬೇಕಾಗುತ್ತದೆ. ಆ ಹಣ ಬಂದರೆ ಈ ಕೆಲಸಗಳನ್ನು ತೆಗೆದುಕೊಳ್ಳುತ್ತೇವೆ. ಅಂದರೆ ನಾವು ಅದುವರೆವಿಗೂ ಕೆಲಸವನ್ನು ನಿಲ್ಲಿಸುತ್ತೇವೆಂದು ಅಲ್ಲ. ಸಣ್ಣಪುಟ್ಟ ಹಣದಲ್ಲಿ ಆಗುವಂಥ ಕೆಲಸಗಳಿಗೆ ಪ್ರತಿ ತಿಂಗಳೂ ಸ್ವಲ್ಪ ಸ್ವಲ್ಪ ಹಣವನ್ನು ಬಿಡುಗಡೆ ಮಾಡುತ್ತಾ ಹೋಗುತ್ತೇವೆ. ರೋಡ್‌ಗಳಿಗೆ ಸುಮಾರು 45.74 ಕೋಟಿ ರೂಪಾಯಿಗಳು ಬೇಕಾಗುತ್ತದೆ. ಬಿಲ್ಡಿಂಗ್, ಬ್ರಿಡ್ಜಸ್, ಕಲ್ವರ್ಟ್ಸ್, ಇವುಗಳಿಗೆ 18.54 ಕೋಟಿ ರೂಪಾಯಿ ಬೇಕಾಗುತ್ತದೆ. ಮೈನರ್ ಇರಿಗೇಷನ್ ಟ್ಯಾಂಕ್ಸ್‌ಗೆ 10.78 ಕೋಟಿ ರೂಪಾಯಿ ಬೇಕಾಗುತ್ತದೆ. ಇರಿಗೇಷನ್ ಕೆನಾಲ್ಸ್‌ಗೆ 15.38 ಕೋಟಿ ರೂಪಾಯಿ ಬೇಕಾಗುತ್ತದೆ. ಅದರ ಪಬ್ಲಿಕ್ ಪ್ರಾಪರ್ಟೀಸ್‌ಗೆ 10.24 ಕೋಟಿ ರೂಪಾಯಿ ಬೇಕಾಗುತ್ತದೆ; ಹೀಗೆ ಒಟ್ಟು 100.72 ಕೋಟಿ ರೂಪಾಯಿ ಬೇಕಾಗುತ್ತದೆ. ಇದರ ಬಗ್ಗೆ ಪ್ರತ್ಯೇಕವಾದ ಒಂದು ಪ್ಲಾನನ್ನು ವಿಶ್ವಬ್ಯಾಂಕ್‌ಗೆ ನಾವು ಕಳುಹಿಸಿಕೊಡುತ್ತಿದ್ದೇವೆ. ಇದೂ ಅಲ್ಲದೆ ರೈತರಿಗೆ ಇನ್ನೂ ಕೆಲವು ತೊಂದರೆಯಾಗಿದೆ. ಸಾಯಿಲ್ ಎರೋಷನ್ ಆಗಿದೆ. ಜಮೀನಿನ ಮೇಲ್ಪದರೆಲ್ಲಾ ಕೊಚ್ಚಿ ಹೋಗಿದೆ. ಅದನ್ನು ಮೊದಲಿನ ರೂಪಕ್ಕೆ ತರಬೇಕಾದರೆ ಬಹಳಷ್ಟು ಕಾಲ ಬೇಕಾಗುತ್ತದೆ. ಇದಕ್ಕೆ ಒಂದು ಪ್ರತ್ಯೇಕವಾದ ಎಸ್ಟಿಮೇಟನ್ನು ಮಾಡಬೇಕಾಗುತ್ತದೆ. ಇದು ಇನ್ನೂ ಪೂರ್ತಿ ಆಗಿಲ್ಲ. ಕೆಲವು ಕಡೆ ಎಸ್ಟಿಮೇಟ್ಸ್ ಬಂದಿದೆ. ಕೆಲವು ಕಡೆ ಜಮೀನಿನ ಗುರುತೇ ಸಿಕ್ಕುವುದಿಲ್ಲ. ಚರಂಡಿ ರೀತಿಯಲ್ಲಿ ಜಮೀನು ಕೊರೆದುಕೊಂಡು ಹೋಗಿದೆ. ಈ ಕೆಲಸಕ್ಕೆ ಖರ್ಚು ಮಾಡುವುದರ

ಜೊತೆಗೆ ಕೋಸ್ಟಲ್ ಬೆಲ್ಟ್‌ನಲ್ಲಿ ಪರ್ಮನೆಂಟ್ ಕೆಲಸವನ್ನು ತೆಗೆದುಕೊಳ್ಳಬೇಕಾಗುತ್ತದೆ. ಇದರ ಬಗ್ಗೆ ಕೇಂದ್ರ ಸರ್ಕಾರದವರು ಕನ್‌ಸ್ಟ್ರಕ್ಷನ್ಸ್ ಆಫ್ ಸೀಎರೋಷನ್ ವಾಲ್ ಕಟ್ಟಲು ಯೋಚನೆ ಮಾಡುತ್ತಿದ್ದಾರೆ. ಇದಕ್ಕೆ ಒಂದು ಅಥಾರಿಟಿಯನ್ನು ರಚನೆ ಮಾಡಬೇಕೆಂದು ಕೇಂದ್ರ ಸರ್ಕಾರದ ಯೋಚನೆ ಇದೆ. ಇದರ ಬಗ್ಗೆ ಇನ್ನೂ ಆಖೈರಾಗಿ ತೀರ್ಮಾನವನ್ನು ತೆಗೆದುಕೊಂಡಿಲ್ಲ. ಆ ತೀರ್ಮಾನವನ್ನು ಸಧ್ಯದಲ್ಲೇ ತೆಗೆದುಕೊಳ್ಳುತ್ತಾರೆಂಬ ನಂಬಿಕೆ ನಮಗಿದೆ. ಆದ್ದರಿಂದ ಇದರ ಬಗ್ಗೆ ನಾನು ಈಗ ಏನೂ ಹೇಳುವುದಕ್ಕೆ ಇಷ್ಟಪಡುವುದಿಲ್ಲ. ಏಕೆಂದರೆ, ಕೇಂದ್ರ ಸರ್ಕಾರ ಇದರ ಬಗ್ಗೆ ಆಲೋಚನೆ ಮಾಡುತ್ತಿದೆ.

ಇನ್ನು ಹೌಸಿಂಗ್ ಬಗ್ಗೆ ಹೇಳುವುದಾದರೆ ರಾಜ್ಯದಲ್ಲಿ ಮನೆಗಳು ಬಿದ್ದಿರುವುದರಿಂದ ಒಟ್ಟು 19,352 ಕುಟುಂಬಗಳಿಗೆ ತೊಂದರೆಯಾಗಿದೆ. ಅವರಿಗೆ ಬೇಕಾಗಿರತಕ್ಕ ಜಾಗದ ವಿಸ್ತೀರ್ಣ 943.15 ಎಕರೆ. ಇದರ ಅಕ್ವಿಸಿಷನ್‌ಗೆ 2.42ಕೋಟಿ ರೂಪಾಯಿ ಬೇಕಾಗುತ್ತದೆ. ಇದನ್ನು ನಾವು ಒಪ್ಪಿಕೊಂಡು ಈಗಾಗಲೇ ಬಿಡುಗಡೆ ಮಾಡಿಕೊಟ್ಟಿದ್ದೇವೆ. ಏಕೆಂದರೆ ಹುಡ್ಕೋ ಸ್ಕೀಂನಲ್ಲಿ ಮನೆಗಳನ್ನು ಕಟ್ಟಿಸುವ ಹೊತ್ತಿಗೆ ಜನರಿಗೆ ಅನೇಕ ತೊಂದರೆಯಾಗುತ್ತದೆಂದು ನಾವು ಯೋಚನೆ ಮಾಡಿ ಸರ್ಕಾರದ ವಶದಲ್ಲಿರುವ ಜಮೀನಿನ ಜೊತೆಗೆ ಇನ್ನೂ ಸ್ವಲ್ಪ ಜಮೀನನ್ನು ಕೊಂಡುಕೊಂಡು ಸೈಟುಗಳನ್ನು ವಿಂಗಡಿಸಿ ಅವರಿಗೆ ಕೊಟ್ಟು ಈಗಿನಿಂದಲೇ ಅವರಿಗೆ ಬೇಕಾದ ಸಿವಿಕ್ ಅಮಿನಿಟೀಸ್‌ನ್ನು ಒದಗಿಸಿಕೊಡಬೇಕೆಂದು ಮಾಡುತ್ತಿದ್ದೇನೆ. ಒಂದು ಕಡೆಯಿಂದ ಇನ್ನೊಂದು ಕಡೆಗೆ ಅಂದರೆ ಲೋಲೈಯಿಂಗ್ ಏರಿಯಾದಿಂದ ಅಪ್ಪರ್ ರೀಜನ್‌ಗೆ ಜನರನ್ನು ಹೋಗಿ ಎಂದರೆ, ಯಾರು ಹೋಗುವುದಿಲ್ಲ. ನಾವು ಕೇವಲ ಸೈಟುಗಳನ್ನು ಕೊಟ್ಟರೆ ಅವರು ಹೋಗುವುದಿಲ್ಲ. ಇರುವ ಜಾಗದಲ್ಲೇ ಇರುವುದಕ್ಕೆ ಇಷ್ಟಪಡುತ್ತಾರೆ. ಅಲ್ಲಿ ಲೇಔಟ್ ಮಾಡಿ ಕುಡಿಯುವ ನೀರಿನ ಸೌಲಭ್ಯ, ಶಾಲಾ ಕಟ್ಟಡಗಳು, ದೇವಸ್ಥಾನ, ಕಮ್ಯುನಿಟಿಹಾಲ್, ಇನ್ನೂ ಮುಂತಾದ ಅನುಕೂಲಗಳನ್ನು ಒದಗಿಸಿಕೊಟ್ಟರೆ ಆಗ ಮಾತ್ರ ಅಲ್ಲಿಗೆ ಈ ಜನರು ಹೋಗುತ್ತಾರೆಂದು ನಂಬಿಕೊಳ್ಳಬಹುದು. ಈ ಕೆಲಸವನ್ನು ನಾವು ಸ್ವಲ್ಪ ದಿವಸದಲ್ಲೇ ಮಾಡುತ್ತೇವೆ. ಇನ್ನೂ ಕೆಲವು ಕಡೆ ಅಕ್ವಿಸಿಷನ್ ಕೆಲಸ ಪೂರ್ತಿ ಆಗಿಲ್ಲ. 15 ಕೋಟಿ ರೂ.ನಲ್ಲಿ ಇದಕ್ಕೂ ಸ್ವಲ್ಪ ಭಾಗ ಹಣವನ್ನು ಬಿಡುಗಡೆ ಮಾಡುತ್ತೇವೆ. ರೈತರಿಗೆ ಕಷ್ಟ ಬಂದಾಗ ಸರ್ಕಾರ ಕಣ್ಣುಮುಚ್ಚಿಕೊಂಡು ಕುಳಿತಿರುವುದಿಲ್ಲ. ಸರ್ಕಾರ ತನ್ನ ಕೈಲಾದಷ್ಟು ಹಣವನ್ನು ಬಿಡುಗಡೆ ಮಾಡಿ ರಿಲೀಫ್ ಕೊಡುವುದಕ್ಕೆ ಪ್ರಯತ್ನ ಮಾಡುತ್ತದೆ. ನಾನು ಟೂರ್ ಹೋದಾಗ ಜನರು ಹೇಳಿದರು. ನಮ್ಮ ಕಷ್ಟಗಳನ್ನು ಆದಷ್ಟೂ ನಿವಾರಣೆ ಮಾಡಬೇಕು ಎಂದು. ನಮಗೆ ತೊಂದರೆಯಾದ ಮರುಕ್ಷಣದಲ್ಲೇ ನಮ್ಮನ್ನು ಚೆನ್ನಾಗಿ ನೋಡಿಕೊಂಡಿದ್ದಾರೆಂದು ನಮಗೆ ಏನೂ ತೊಂದರೆ ಆಗಿಲ್ಲ ಎಂದು ಈಗಾಗಲೇ ಹೇಳಿದ್ದಾರೆ. ಆದರೆ ಉಳಿದ ಖಾಯಂ ಕೆಲಸಗಳನ್ನು ನಾವು ಏನು ಮಾಡಿ ಕೊಡಬೇಕೋ ಅದನ್ನು ಆದಷ್ಟು ಬೇಗ ಮಾಡಿಕೊಡತಕ್ಕದ್ದು ಒಳ್ಳೆಯದು. ಇದಕ್ಕಾಗಿ ಕೆಲವು ಇಲಾಖೆಗಳಿಗೆ ಈಗಾಗಲೇ ಹಣವನ್ನು ಬಿಡುಗಡೆ ಮಾಡಿದ್ದೇವೆ. ಲೋಕೋಪಯೋಗಿ ಇಲಾಖೆಗೆ ಹಣ ಕೊಟ್ಟಿದ್ದೇವೆ. ಲೋಕೋಪಯೋಗಿ, ಇರಿಗೇಷನ್, ಜಿಲ್ಲಾಪರಿಷತ್ ಈ 3 ರಿಂದ 7 ಕೋಟಿ ಬಿಡುಗಡೆ ಮಾಡಿದ್ದೇವೆ. ಅದನ್ನು ಅವರು ಉಪಯೋಗಿಸಿಕೊಂಡು ಕೆಲವು ಕಡೆ ರಸ್ತೆ ಮಾಡುತ್ತಿದ್ದಾರೆ, ಚಾನಲ್ ರಿಪೇರಿ ಮಾಡುತ್ತಿದ್ದಾರೆ. ಈ ಹಣ ಸಾಲುವುದಿಲ್ಲವೆಂದು ನನಗೆ ಗೊತ್ತಿದೆ ಮುಂದಿನ ತಿಂಗಳು ಇನ್ನೂ ಸ್ವಲ್ಪ ಹಣವನ್ನು ಯಾವ್ಯಾವ ಕೆಲಸಗಳು ಅರ್ಧಂಬರ್ಧ ಆಗಿವೆ ಅವನ್ನು ಪೂರ್ತಿ ಮಾಡಿ ಹೊಸ ಕೆಲಸವನ್ನು ತೆಗೆದುಕೊಳ್ಳಬೇಕೆಂದು ಸೂಚನೆ ಕೊಟ್ಟಿದ್ದೇವೆ.

ಶ್ರೀ ಡಿ.ಬಿ. ಚಂದ್ರೇಗೌಡ:- ಮುಖ್ಯವಾದ ವಿಚಾರವನ್ನು ಪ್ರಸ್ತಾಪ ಮಾಡಿದ್ದಾರೆ. ಅವರು ಹಣಕಾಸು ಮಂತ್ರಿಯಾಗಿದ್ದವರು ಹೆಚ್ಚು ಮಾಹಿತಿ ಅವರಿಗೆ ಇದೆಯೆಂದು ನಾನು ಭಾವನೆ ಮಾಡಿದ್ದೇನೆ. 9ನೇ ಫೈನಾನ್ಸ್ ಕಮೀಷನ್‌ನವರು ಕರ್ನಾಟಕ ರಾಜ್ಯಕ್ಕೆ ಸಂಬಂಧಪಟ್ಟ ಹಾಗೆ ಕೆಲಾಮಿಟಿ ರಿಲೀಫ್ ಫಂಡ್ ಅನ್ನು ನಿಗದಿ ಮಾಡಿದಾಗ ಹಿಂದಿನ ವರ್ಷಗಳ ಅನುಭವದ

ಆಧಾರದ ಮೇಲೆ ಆವ್‌ರೇಜ್ ಫಿಕ್ಸ್ ಮಾಡಿ 75-25 ಪರ್ಸೆಂಟ್ ಎಂದು ಮಾಡಿದರು. 75 ಪರ್ಸೆಂಟ್ ಕೇಂದ್ರ ಸರಕಾರ ಇನ್ನು 25 ಪರ್ಸೆಂಟ್ ರಾಜ್ಯ ಸರಕಾರ ಎಂದು. ಅದಕ್ಕೆ ಹಿಂದೆ ಇದ್ದಂಥ ವ್ಯವಸ್ಥೆ ಏನು? ತಾವು ಹೇಳುವಾಗ ಅದನ್ನು ಪೂರ್ಣವಾಗಿ ಹೇಳಲಿಲ್ಲ. ಕೇಂದ್ರ ಸರಕಾರ ಒಂದು ಟೀಮ್ ಕಳುಹಿಸುತ್ತಿದ್ದು ಅವರು ಅಸೆಸ್ ಮಾಡಿ ಆ ಬೇಸಿಸ್ ಮೇಲೆ ಪ್ಲಾನ್ಸ್ ಅಸಿಸ್ಟೆನ್ಸ್ ಎಂದು ಸಾಲ ಕೊಡುತ್ತಿದ್ದರೇ ಹೊರತು ನೇರವಾಗಿ ಸಹಾಯಧನ ಕೇಂದ್ರ ಸರಕಾರದಿಂದ ಬರುತ್ತಿರಲಿಲ್ಲ. ಇದನ್ನು 9ನೇ ಕಮೀಷನ್‌ನಲ್ಲಿ ಸರಿಪಡಿಸುವುದಕ್ಕಾಗಿ ಒಂದು ಶಾಶ್ವತ ನಿಧಿಯನ್ನು ಮಾಡಿದರು. ತಾವು ಹೇಳಿದಿರಿ 10 ನೇ ಫೈನಾನ್ಸ್ ಕಮೀಷನ್‌ನಲ್ಲಿ ಇದರ ಹೆಚ್ಚು ವಿಸ್ತಾರಕ್ಕೆ ಪ್ರಯತ್ನ ಮಾಡುತ್ತೇವೆಂದು. ಆದರೆ ಈಗ ತಾವು ಇದನ್ನು ಹೇಳುವಾಗ ಮುಖ್ಯವಾಗಿ ಗಮನಿಸಬೇಕಾದ ಅಂಶ ಇದೆ. ನಾರ್ಮಲ್ ಕೋರ್ಸ್‌ನಲ್ಲಿ ಆಗತಕ್ಕಂತಹ ವಿಚಾರ ಬೇರೆ ಇಂತಹ ಅಬ್‌ನಾರ್ಮಲ್ ಸಿಚುಯೇಷನ್‌ನಲ್ಲಿ, ಅಕಾಲಿಕವಾಗಿ ಬರತಕ್ಕಂಥಾದ್ದಕ್ಕೆ ಕೇಂದ್ರ ಸರಕಾರ ವಿಶೇಷ ಹಣ ಬಿಡುಗಡೆ ಮಾಡಬೇಕಾಗುತ್ತದೆ. 61 ಏನೋ ಆ ಹೆಡ್‌ನಲ್ಲಿ ಕೇಂದ್ರ ಸರಕಾರದವರು ಹಣ ಕೊಡುತ್ತಾರೆ. ಕೆಲಾಮಿಟಿ ರಿಲೀಫ್ ಫಂಡಿಗೆ ಕೇಂದ್ರ ರಾಜ್ಯ ಸರಕಾರಗಳ ಸಂಯೋಗದಿಂದ ಏನು ಬಿಡುಗಡೆ ಮಾಡುತ್ತಾರೆ ಅದರ ಜೊತೆಗೆ ಇದನ್ನು ಸೇರಿಸುವುದಕ್ಕೆ ದಯಮಾಡಿ ಹೋಗಬೇಡಿ. ವಿಶೇಷವಾದಂತಹ, ನಮ್ಮ ಊಹೆಗೆ ನಿಲುಕದೇ ಇದ್ದಂತಹ ಪ್ರಕೃತಿ ವಿಕೋಪಕ್ಕೆ ಸಿಕ್ಕಿದ್ದೇವೆ, ಅದಕ್ಕೆ ಸ್ಪೆಷಲ್ ರಿಲೀಫ್ ಏನು ಎಂದು ನಾನು ನಿಮ್ಮಿಂದ ನಿರೀಕ್ಷೆ ಮಾಡುತ್ತೇನೆ. ಇದಲ್ಲದೆ ಲಾಂಗ್ ರೇಂಜ್, ಷಾರ್ಟ್ ರೇಂಜ್ ಎಂದು ಎರಡು ಪಾಲಿಸಿಗಳನ್ನು ತಾವು ನಿಗದಿ ಮಾಡಿದ್ದೀರಿ. ನೀವು ಕೊಟ್ಟಿರತಕ್ಕಂಥಾದ್ದು ತುಟಿಗೆ ತುಪ್ಪ ಹಚ್ಚಿದಂತೆ ಆಗಿದೆ, ತಾವು ಕೊಟ್ಟಿರುವ ಸ್ಕೀಮ್. 100 ಕೋಟಿ, ವಿಶ್ವಬ್ಯಾಂಕ್ ಸಾಲ ಕೇಳತಕ್ಕಂಥಾದ್ದು 55 ಸಾವಿರ ಮನೆಕಟ್ಟುವುದಕ್ಕೆ ಮಾಡತಕ್ಕಂಥಾದ್ದು ಇವೆಲ್ಲಾ ಕಳಿಸಿ ಮುಂದೆ ಆ ಹಣ ಬಂದು ಜನರ ನಿರೀಕ್ಷೆಗೆ ತಲುಪುವುದು ಯಾವಾಗ? ಷಾರ್ಟ್ ರೇಂಜ್ ಈಗ ತಕ್ಷಣ ಮಾಡತಕ್ಕಂತಹ ಕೆಲಸ ಏನು? ಈ ಫಂಡಮೆಂಟಲ್ ಕ್ವೆಶ್ಚನ್ ಇಲ್ಲಿ ಇದೆ. That is the fundamental question. ರೈತರು ಜಮೀನು, ಭೂಮಿ ಆಸ್ತಿ ಮನೆ ಕಳೆದುಕೊಂಡಿದ್ದಾರೆ; ಅವರಿಗೆ ತಕ್ಷಣದ ಪರಿಹಾರ ಏನೇನು ಮಾಡಬೇಕು? ಒಂದು ಕಡೆ ನಿಮ್ಮ ಹಿಂದಿನ ಹೇಳಿಕೆ ಬಂತು ಸುಮಾರು 307 ಕೋಟಿ ಲುಕ್ಸಾನಾಗಿದೆ ಎಂದು. ಇನ್ನೊಂದು ಕಡೆ 400 ಕೋಟಿಗೂ ಹೆಚ್ಚು ಲುಕ್ಸಾನಾಗಿದೆ ಎಂದು ಹೇಳುತ್ತೀರಿ. ನೀವು ವಿಶ್ವಬ್ಯಾಂಕಿಗೆ ಕಳುಹಿಸತಕ್ಕಂತಹ ಅಥವಾ ಕೇಂದ್ರಕ್ಕೆ ಕೊಡತಕ್ಕಂತಹ ಅಧಿಕೃತ ಮಾಹಿತಿ ಬೇರೆಯಾಗುತ್ತದೆ. ನಮಗೆ ಇರತಕ್ಕಂತಹ ಮಾಹಿತಿಗಳು ಬೇರೆಯಾಗುತ್ತದೆ. I am not questioning the honesty of the Government. I would like to know, immediately ಷಾರ್ಟ್ ರೇಂಜ್‌ನಲ್ಲಿ, ಸರಕಾರ ಏನೇನು ಮಾಡುತ್ತದೆ ಎಂದು ಹೇಳಬೇಕು. ಸೂಕ್ಷ್ಮವಾಗಿ ಹೇಳುವುದಾದರೆ ಏಜೆನ್ಸಿಯೇ ನಿಗಧಿಯಾಗಿರುವುದಿಲ್ಲ. ದಯಮಾಡಿ ಇದನ್ನು ಅರ್ಥ ಮಾಡಿಕೊಳ್ಳಿ. ಒಂದು ಕಡೆ ಭೂಮಿ, ಕಾಣಿ, ಮನೆ ಮಠ ಜನ ಜಾನುವಾರುಗಳು ಸತ್ತಿರುವುದು ಇನ್ನೊಂದು ಕಡೆ ಕಮ್ಯುನಿಕೇಷನ್. ಇಂಪ್ಲಿಮೆಂಟೇಷನ್ಸ್ ಏಜೆನ್ಸಿ ಯಾರೆಂದು ಇನ್ನೂ ನಿಗಧಿಯಾಗಿರುವುದಿಲ್ಲ. ಜಿಲ್ಲಾ ಪರಿಷತ್ ಮಾಡಬೇಕೋ ಲೋಕೋಪಯೋಗಿ ಇಲಾಖೆಯವರು ಮಾಡಬೇಕೋ ಕಂದಾಯ ಇಲಾಖೆಯವರು ಮಾಡುತ್ತಾರೋ ಎಂಬುದನ್ನು ಮೊದಲು ನಿರ್ಣಯ ಮಾಡಿ. First you try to fix up the agency. Through whom? ನೇರವಾಗಿ ಲೋಕೋಪಯೋಗಿ ಇಲಾಖೆಗೆ ಬಿಟ್ಟು ಕೊಡುತ್ತೀರೋ ಅಥವಾ ಜಿಲ್ಲಾ ಪರಿಷತ್ತಿಗೆ ಕೊಡುತ್ತೀರೋ, ಡಿ.ಸಿ; ತಹಸೀಲ್ದಾರರಿಗೆ ಕೊಡುತ್ತೀರೋ; ಅಸೆಸ್‌ಮೆಂಟ್ ಮಾಡುವವರು ನಿಮ್ಮ ಕಂದಾಯ ಇಲಾಖೆಯವರೇ, ಕಾಮಗಾರಿ ಮಾಡತಕ್ಕಂತಹವರು ಬೇರೆ. Please let me know what is the agency? ಬಹಳ ಮುಖ್ಯವಾಗಿ ನಾವು ಮಲೆನಾಡಿನ ಪ್ರದೇಶದಿಂದ ಬರತಕ್ಕಂಥ ಜನರಿಗೆ ನಿಮ್ಮ ಮನಸ್ಸಿನಲ್ಲಿ ಒಂದು ಭಾವನೆ ಇದೆ. ದಿನಾ ಸಾಯುವವರಿಗೆ, ಅಳುವವರು ಯಾರು ಎಂದು. ನಾವು ದಿನವೂ ಸಾಯುವವರೇ. ಪ್ರತಿ

ವರ್ಷ ನಿಮ್ಮದು ಇದ್ದದ್ದೇ, ಯಾರಿಗೂ ಇದರ ಕಡೆಗೆ ಗಮನ ಇಲ್ಲ. ಈ ವರ್ಷ ಅದರ ಜೊತೆಯಲ್ಲಿ ಇದು. ಹೀಗಾಗಿ The total communication has come to a standstill. ಅದನ್ನು ಯಾವ ರೀತಿ ವಿವರಿಸಬೇಕೋ ನನಗೆ ಗೊತ್ತಿಲ್ಲ. ಹಿಂದಿನ ಸರಕಾರ ಮಲೆನಾಡು ಡೆವಲಪ್‌ಮೆಂಟ್ ಅಥಾರಿಟಿ ಎಂದು ಮಾಡಿದರು. ಅದಕ್ಕೆ ಈಗ ಯಾರೋ ಅಧ್ಯಕ್ಷರನ್ನಾಗಿ ಮಾಡಿದ್ದಾರೆ. ಅದರಲ್ಲಿ 45 ಕೋಟಿ ಇದೆ. ತಮಗೇನಾದರೂ ಬಂದಿದೆಯೋ ಯಡಿಯೂರಪ್ಪನವರೇ, ನಮಗಂತೂ ಒಂದು ಬಿಡಿಗಾಸೂ ಬರಲಿಲ್ಲ. ಲೋಕೋಪಯೋಗಿ ಇಲಾಖೆಯವರನ್ನು ಕೇಳಿದರೆ ಮಲೆನಾಡು ಡೆವಲಪ್‌ಮೆಂಟ್ ಅಥಾರಿಟಿಯಿಂದ ಹಣ ಬರುತ್ತದೆಂದು ಹೇಳುತ್ತಾರೆ. ಜಿಲ್ಲಾ ಪರಿಷತ್ ಅನ್ನು ಕೇಳಿದರೆ ಅದನ್ನು ನೋಡಿಕೊಂಡು ನಾವು ನಿಗಧಿ ಮಾಡುತ್ತೇವೆಂದು ಹೇಳುತ್ತಾರೆ. ಹೀಗೆ ಮೂರು ಏಜೆನ್ಸಿ ಮಧ್ಯೆ ನಾವು ಸಿಕ್ಕಿಕೊಂಡು ಮಿಲ್‌ಮಿಲಿ ಒದ್ದಾಡುತ್ತಿದ್ದೇವೆ. ನೀವು ಹೇಳಿಬಿಡಿ ಸ್ಪಷ್ಟವಾಗಿ, ನಿರ್ದಿಷ್ಟವಾಗಿ ಹೇಳಿಬಿಡಿ. ಮಲೆನಾಡು ಡೆವಲಪ್‌ಮೆಂಟ್ ಅಥಾರಿಟಿಯವರು ಇಷ್ಟು ಕಾಮಗಾರಿಗಳನ್ನು ತೆಗೆದುಕೊಳ್ಳುತ್ತಾರೆಂದು ಈ ಒಂದು ಆಶ್ವಾಸನೆಯನ್ನು ಕೊಡಿ. ಅದರಲ್ಲಿ ಸ್ವಲ್ಪ ಭಾಗವನ್ನು ಫ್ಲಡ್ಸ್‌ಗೆ ಹಾಕಿಕೊಳ್ಳಬಹುದು. ಕಮ್ಯುನಿಕೇಷನ್ಸ್, ಇರಿಗೇಷನ್ ರೋಡ್ಸ್, ಬ್ರಿಡ್ಜಿಸ್ ಮಾಡಬೇಕಾಗಿದೆ ಎಂದು, ಹೊಸ ಕಾಮಗಾರಿಗಳನ್ನು ಯಾವುದೂ ತೆಗೆದುಕೊಳ್ಳುತ್ತಿಲ್ಲ, ಹಳೆಯ ಕಾಮಗಾರಿಗಳಿಗೆ ಏಜೆನ್ಸಿಯನ್ನು ನಿಗಧಿ ಮಾಡಿಲ್ಲ. ಆದ್ದರಿಂದ ಸರ್ಕಾರದಿಂದ ನಿಮ್ಮಿಂದ ನಿರೀಕ್ಷೆ ಮಾಡುತ್ತಿದ್ದೇವೆ, ಏತಕ್ಕೆಂದರೆ ನೀವು ರೆವಿನ್ಯೂ ಮಂತ್ರಿಗಳು ಮಾತ್ರವಲ್ಲ, ನೀವು ಫೈನಾನ್ಸ್ ಮಂತ್ರಿಗಳಾಗಿಯೂ ಇದ್ದಿರಿ...... Please fix up the agency first. ಪಿ.ಡಬ್ಲ್ಯೂ.ಡಿ ಇಲಾಖೆಗೆ ಎಷ್ಟು ಹಣವನ್ನು ಸರ್ಕಾರ ಬಿಡುಗಡೆ ಮಾಡಿದೆ, ಜಿಲ್ಲಾಪರಿಷತ್ತಿಗೆ ಎಷ್ಟು ಹಣವನ್ನು ಬಿಡುಗಡೆ ಮಾಡಿದೆ, ಇನ್ನು ಬೇರೆಬೇರೆ ಏಜೆನ್ಸಿ ಅಂದರೆ ಹೈದರಾಬಾದ್ ಡೆವಲಪ್‌ಮೆಂಟ್ ಅಥಾರಿಟಿ ಎಂತಲೋ, ಮಲೆನಾಡು ಡೆವಲಪ್‌ಮೆಂಟ್ ಅಥಾರಿಟಿ ಎಂತಲೋ ಈ ಅಥಾರಿಟಿಗಳ ಮೂಲಕ ಎಷ್ಟು ಹಣ ಹೋಗಿದೆ ನಿಖರವಾಗಿ ದಯವಿಟ್ಟು ಸದನಕ್ಕೆ ತಾವು ಕೊಡಬೇಕೆಂದು ನಾನು ಪ್ರಾರ್ಥನೆ ಮಾಡುತ್ತೇನೆ. ಏಳು ಕೋಟಿ ರೂಪಾಯಿಗಳು ಪಿ.ಡಬ್ಲ್ಯೂಡಿ ಗೆ, ಜಿಲ್ಲಾ ಪರಿಷತ್ತಿಗೆ ಅಂದರೆ ಯಾವ ಯಾವ ವಿಭಾಗಕ್ಕೆ ಎಷ್ಟೆಷ್ಟು ಹಣವನ್ನು ಕೊಟ್ಟಿದ್ದೀರಿ. ನಾವು ನಿಮಗೆ 7 ಕೋಟಿ ಹಣ ಬಂದಿದೆ ಎಂದರೆ ಜಿಲ್ಲಾ ಪರಿಷತ್‌ನವರು ಹೇಳುತ್ತಾರೆ ನಮಗೆ ಬಂದಿಲ್ಲವೆಂದು. ಪಿ.ಡಬ್ಲ್ಯೂಡಿಯವರು ಕೂಡ ನಮಗೆ ಯಾವುದೂ ಬಂದಿಲ್ಲವೆಂದು ಹೇಳುತ್ತಾರೆ. ಏತಕ್ಕೆ ಈ ಮಾತನ್ನು ಹೇಳುತ್ತೇನೆಂದರೆ ತಮಗೆ ಜಿಲ್ಲಾಪರಿಷತ್ತಿನಿಂದ ಪಿ.ಡಬ್ಲ್ಯೂ.ಡಿ.ಗೆ ಕೆಲವು ರಸ್ತೆಗಳನ್ನು ತೆಗೆದುಕೊಂಡಿದ್ದೇವೆ ಎಂದು ಹೇಳಿ ಈ ಹೌಸ್‌ನಲ್ಲಿಯೇ ಅನೌನ್ಸ್ ಮಾಡಿದಿರಿ. ರಸ್ತೆಗಳನ್ನು ವರ್ಗ ಮಾಡಿದರು, ಆದರೆ ದುಡ್ಡು ಮಾತ್ರ ವರ್ಗವಾಗಿಲ್ಲ. ಇಂಥ ಡಿಫಿಕಲ್ಟ್ ಇರುವುದರಿಂದ please apply your mind and let us know which are the agencies; and how much money is released to different agencies. ಇಂಪ್ಲಿಮೆಂಟ್ ಏಜೆನ್ಸಿ ಯಾವುದೆನ್ನತಕ್ಕಂಥದ್ದು ನಮಗೆ ಬೇಕು. And who is the final authority, who will co-ordinate all these things. Ofcourse, finally, by way of appeal to you, while taking Karnataka's case to the Tenth Finance Commission, please don't mix up the issue and let us not play any bungling into the arrangement already made.

ಶ್ರೀ ಎಂ. ರಾಜಶೇಖರಮೂರ್ತಿ:- ಮಾನ್ಯ ಅಧ್ಯಕ್ಷರೆ, ಫೈನಾನ್ಸ್ ಕಮೀಷನ್‌ರವರು 27 ಕೋಟಿ ರೂಪಾಯಿಗಳನ್ನು ಈಗ ಕೊಡುತ್ತಾರೆ. ಮತ್ತೆ ಮುಂದೆ ನಾವು ಅರ್ಜ್ ಮಾಡುತ್ತೇವೆ. ಈ ವಿಶೇಷ ಸಂದರ್ಭದಲ್ಲಿ ಖರ್ಚು ಮಾಡಬೇಕಾದರೆ, ಆ ಅಮೌಂಟ್‌ಗೂ ಯಾವ ಸಂಬಂಧವೂ ಇಲ್ಲ. ಅದಕ್ಕೆ ನಾವು ಸ್ಪೆಷಲ್ ಆಗಿ ಮಾಡಬೇಕಾಗುತ್ತದೆಂದು ಹೇಳಿದರೆ ಅದನ್ನು ಒಪ್ಪಿಕೊಳ್ಳುತ್ತೀರಿ. ಅದಕ್ಕೋಸ್ಕರವೇ ವಿಶೇಷ ಸಂದರ್ಭ ಈ ಸರಿ ಆಗಿರುವುದು.

ವರ್ಷ ನಿಮ್ಮದು ಇದ್ದದ್ದೇ, ಯಾರಿಗೂ ಇದರ ಕಡೆಗೆ ಗಮನ ಇಲ್ಲ. ಈ ವರ್ಷ ಅದರ ಜೊತೆಯಲ್ಲಿ ಇದು. ಹೀಗಾಗಿ The total communication has come to a standstill. ಅದನ್ನು ಯಾವ ರೀತಿ ವಿವರಿಸಬೇಕೋ ನನಗೆ ಗೊತ್ತಿಲ್ಲ. ಹಿಂದಿನ ಸರಕಾರ ಮಲೆನಾಡು ಡೆವಲಪ್‌ಮೆಂಟ್ ಅಥಾರಿಟಿ ಎಂದು ಮಾಡಿದರು. ಅದಕ್ಕೆ ಈಗ ಯಾರೋ ಅಧ್ಯಕ್ಷರನ್ನಾಗಿ ಮಾಡಿದ್ದಾರೆ. ಅದರಲ್ಲಿ 45 ಕೋಟಿ ಇದೆ. ತಮಗೇನಾದರೂ ಬಂದಿದೆಯೋ ಯಡಿಯೂರಪ್ಪನವರೇ, ನಮಗಂತೂ ಒಂದು ಬಿಡಿಗಾಸೂ ಬರಲಿಲ್ಲ. ಲೋಕೋಪಯೋಗಿ ಇಲಾಖೆಯವರನ್ನು ಕೇಳಿದರೆ ಮಲೆನಾಡು ಡೆವಲಪ್‌ಮೆಂಟ್ ಅಥಾರಿಟಿಯಿಂದ ಹಣ ಬರುತ್ತದೆಂದು ಹೇಳುತ್ತಾರೆ. ಜಿಲ್ಲಾಪರಿಷತ್ ಅನ್ನು ಕೇಳಿದರೆ ಅದನ್ನು ನೋಡಿಕೊಂಡು ನಾವು ನಿಗಧಿ ಮಾಡುತ್ತೇವೆಂದು ಹೇಳುತ್ತಾರೆ. ಹೀಗೆ ಮೂರು ಏಜೆನ್ಸಿ ಮಧ್ಯೆ ನಾವು ಸಿಕ್ಕಿಕೊಂಡು ಮಿಲ್‌ಮಿಲಿ ಒದ್ದಾಡುತ್ತಿದ್ದೇವೆ. ನೀವು ಹೇಳಿಬಿಡಿ ಸ್ಪಷ್ಟವಾಗಿ, ನಿರ್ದಿಷ್ಟವಾಗಿ ಹೇಳಿಬಿಡಿ. ಮಲೆನಾಡು ಡೆವಲಪ್‌ಮೆಂಟ್ ಅಥಾರಿಟಿಯವರು ಇಷ್ಟು ಕಾಮಗಾರಿಗಳನ್ನು ತೆಗೆದುಕೊಳ್ಳುತ್ತಾರೆಂದು ಈ ಒಂದು ಆಶ್ವಾಸನೆಯನ್ನು ಕೊಡಿ. ಅದರಲ್ಲಿ ಸ್ವಲ್ಪ ಭಾಗವನ್ನು ಫ್ಲಡ್ಸ್‌ಗೆ ಹಾಕಿಕೊಳ್ಳಬಹುದು. ಕಮ್ಯುನಿಕೇಷನ್ಸ್, ಇರಿಗೇಷನ್ ರೋಡ್ಸ್, ಬ್ರಿಡ್ಜಿಸ್ ಮಾಡಬೇಕಾಗಿದೆ ಎಂದು, ಹೊಸ ಕಾಮಗಾರಿಗಳನ್ನು ಯಾವುದೂ ತೆಗೆದುಕೊಳ್ಳುತ್ತಿಲ್ಲ, ಹಳೆಯ ಕಾಮಗಾರಿಗಳಿಗೆ ಏಜೆನ್ಸಿಯನ್ನು ನಿಗಧಿ ಮಾಡಿಲ್ಲ. ಆದ್ದರಿಂದ ಸರ್ಕಾರದಿಂದ ನಿಮ್ಮಿಂದ ನಿರೀಕ್ಷೆ ಮಾಡುತ್ತಿದ್ದೇವೆ, ಏತಕ್ಕೆಂದರೆ ನೀವು ರೆವಿನ್ಯೂ ಮಂತ್ರಿಗಳು ಮಾತ್ರವಲ್ಲ, ನೀವು ಫೈನಾನ್ಸ್ ಮಂತ್ರಿಗಳಾಗಿಯೂ ಇದ್ದಿರಿ...... Please fix up the agency first. ಪಿ.ಡಬ್ಲ್ಯೂ.ಡಿ ಇಲಾಖೆಗೆ ಎಷ್ಟು ಹಣವನ್ನು ಸರ್ಕಾರ ಬಿಡುಗಡೆ ಮಾಡಿದೆ, ಜಿಲ್ಲಾಪರಿಷತ್ತಿಗೆ ಎಷ್ಟು ಹಣವನ್ನು ಬಿಡುಗಡೆ ಮಾಡಿದೆ, ಇನ್ನು ಬೇರೆಬೇರೆ ಏಜೆನ್ಸಿ ಅಂದರೆ ಹೈದರಾಬಾದ್ ಡೆವಲಪ್‌ಮೆಂಟ್ ಅಥಾರಿಟಿ ಎಂತಲೋ, ಮಲೆನಾಡು ಡೆವಲಪ್‌ಮೆಂಟ್ ಅಥಾರಿಟಿ ಎಂತಲೋ ಈ ಅಥಾರಿಟಿಗಳ ಮೂಲಕ ಎಷ್ಟು ಹಣ ಹೋಗಿದೆ ನಿಖರವಾಗಿ ದಯವಿಟ್ಟು ಸದನಕ್ಕೆ ತಾವು ಕೊಡಬೇಕೆಂದು ನಾನು ಪ್ರಾರ್ಥನೆ ಮಾಡುತ್ತೇನೆ. ಏಳು ಕೋಟಿ ರೂಪಾಯಿಗಳು ಪಿ.ಡಬ್ಲ್ಯೂಡಿ ಗೆ, ಜಿಲ್ಲಾಪರಿಷತ್ತಿಗೆ ಅಂದರೆ ಯಾವ ಯಾವ ವಿಭಾಗಕ್ಕೆ ಎಷ್ಟೆಷ್ಟು ಹಣವನ್ನು ಕೊಟ್ಟಿದ್ದೀರಿ. ನಾವು ನಿಮಗೆ 7 ಕೋಟಿ ಹಣ ಬಂದಿದೆ ಎಂದರೆ ಜಿಲ್ಲಾಪರಿಷತ್‌ನವರು ಹೇಳುತ್ತಾರೆ ನಮಗೆ ಬಂದಿಲ್ಲವೆಂದು. ಪಿ.ಡಬ್ಲ್ಯೂಡಿಯವರು ಕೂಡ ನಮಗೆ ಯಾವುದೂ ಬಂದಿಲ್ಲವೆಂದು ಹೇಳುತ್ತಾರೆ. ಏತಕ್ಕೆ ಈ ಮಾತನ್ನು ಹೇಳುತ್ತೇನೆಂದರೆ ತಮಗೆ ಜಿಲ್ಲಾಪರಿಷತ್ತಿನಿಂದ ಪಿ.ಡಬ್ಲ್ಯೂ.ಡಿ.ಗೆ ಕೆಲವು ರಸ್ತೆಗಳನ್ನು ತೆಗೆದುಕೊಂಡಿದ್ದೇವೆ ಎಂದು ಹೇಳಿ ಈ ಹೌಸ್‌ನಲ್ಲಿಯೇ ಅನೌನ್ಸ್ ಮಾಡಿದಿರಿ. ರಸ್ತೆಗಳನ್ನು ವರ್ಗ ಮಾಡಿದರು, ಆದರೆ ದುಡ್ಡು ಮಾತ್ರ ವರ್ಗವಾಗಿಲ್ಲ. ಇಂಥ ಡಿಫಿಕಲ್ಟ್ ಇರುವುದರಿಂದ please apply your mind and let us know which are the agencies; and how much money is released to different agencies. ಇಂಪ್ಲಿಮೆಂಟ್ ಏಜೆನ್ಸಿ ಯಾವುದೆನ್ನತಕ್ಕಂಥದ್ದು ನಮಗೆ ಬೇಕು. And who is the final authority, who will co-ordinate all these things. Ofcourse, finally, by way of appeal to you, while taking Karnataka's case to the Tenth Finance Commission, please don't mix up the issue and let us not play any bungling into the arrangement already made.

ಶ್ರೀ ಎಂ. ರಾಜಶೇಖರಮೂರ್ತಿ:- ಮಾನ್ಯ ಅಧ್ಯಕ್ಷರೆ, ಫೈನಾನ್ಸ್ ಕಮೀಷನ್‌ರವರು 27 ಕೋಟಿ ರೂಪಾಯಿಗಳನ್ನು ಈಗ ಕೊಡುತ್ತಾರೆ. ಮತ್ತೆ ಮುಂದೆ ನಾವು ಅರ್ಜ್ ಮಾಡುತ್ತೇವೆ. ಈ ವಿಶೇಷ ಸಂದರ್ಭದಲ್ಲಿ ಖರ್ಚು ಮಾಡಬೇಕಾದರೆ, ಆ ಅಮೌಂಟ್‌ಗೂ ಯಾವ ಸಂಬಂಧವೂ ಇಲ್ಲ. ಅದಕ್ಕೆ ನಾವು ಸ್ಪೆಷಲ್ ಆಗಿ ಮಾಡಬೇಕಾಗುತ್ತದೆಂದು ಹೇಳಿದರೆ ಅದನ್ನು ಒಪ್ಪಿಕೊಳ್ಳುತ್ತೀರಿ. ಅದಕ್ಕೋಸ್ಕರವೇ ವಿಶೇಷ ಸಂದರ್ಭ ಈ ಸರಿ ಆಗಿರುವುದು.

ಬರುವುದಿಲ್ಲ ಅಲ್ಲಿಯವರೆಗೆ ಯಾವ ಕೆಲಸವೂ ನಡೆಯುವುದಿಲ್ಲ. ಅದಕ್ಕೋಸ್ಕರ ನಾನು ತಮಗೆ ಸಲಹೆ ಮಾಡಿದ್ದೆ, ಒಂದು ಫಂಡ್ – ಅದು ನ್ಯಾಚುರಲ್ ಕೆಲಾಮಿಟಿ ಫಂಡ್ ಅನ್ನಿ ಮತ್ತೊಂದು ಅನ್ನಿ ಅದು ಕ್ರಿಯೇಟ್ ಆಗಬೇಕಾಗುತ್ತದೆ. 90 ಪರ್ಸೆಂಟ್ ಕಾಂಟ್ರಿಬ್ಯೂಷನ್ ಕೇಂದ್ರ ಸರ್ಕಾರದಿಂದ ಬಂದರೆ ಟೋಕನ್ ಕಾಂಟ್ರಿಬ್ಯೂಷನ್ ರಾಜ್ಯ ಸರ್ಕಾರ ಹಾಕಬೇಕು. ಇದು ಸರ್ಕಾರದಲ್ಲಿ ನಡೆಯುತ್ತಿದೆಯೆ? ಇದರ ಬಗ್ಗೆ ನಮ್ಮ ಸರ್ಕಾರದ ನಿಲುವು ಏನು? ಎರಡನೆಯದಾಗಿ ಕ್ರಾಪ್ ಇನ್‌ಶ್ಯೂರೆನ್ಸ್ ಬಗ್ಗೆ ಹೇಳಿದ್ದೆ. ಕ್ರಾಪ್ ಇನ್‌ಶ್ಯೂರೆನ್ಸ್ 1985–86 ರಿಂದ ಇಲ್ಲಿಯವರೆಗೆ ರೈತರಿಗೆ ಅನುಕೂಲ ಆಗಿಲ್ಲವೆಂದು ಹೇಳಿದಿರಿ; ಏತಕ್ಕೆ ಆಗಲಿಲ್ಲ? ಈಗ ತಾಲ್ಲೂಕು ಯೂನಿಟ್ ಎಂದು ಏನು ಇದೆ ಅದನ್ನು ಮಂಡಲ್ ಯೂನಿಟ್ ಮಾಡಬೇಕೆಂದು ಕೇಂದ್ರ ಸರ್ಕಾರಕ್ಕೆ ಒತ್ತಾಯ ಮಾಡಿದರೆ ರೈತರಿಗೆ ಅನುಕೂಲವಾಗುತ್ತದೆ. ಅದರ ಬಗ್ಗೆ ತಮ್ಮ ಸರ್ಕಾರದ ನಿಲುವು ಏನು? ಮೂರನೆಯದಾಗಿ, ತುಂಗಭದ್ರ ಮತ್ತು ಭದ್ರ ಅಥಾರಿಟೀಸ್ ಏನು ಆ ದಿನ ನೀರನ್ನು ರಿಲೀಸ್ ಮಾಡಿದರು, ಅದರ ಬಗ್ಗೆ ವಾರ್ನಿಂಗ್ ಕೊಟ್ಟಿದ್ದರು ಎಂದು ಹೇಳಿದಿರಿ. ನಾನು ಈಗಾಗಲೇ ತಮ್ಮ ಗಮನಕ್ಕೆ ತಂದಿದ್ದೇನೆ. ನನಗೆ ರಾಯಚೂರು ಜಿಲ್ಲಾಧಿಕಾರಿಗಳು ಹೇಳಿದ್ದಾರೆ. 17ನೇ ತಾರೀಖು ಮುಂಜಾನೆ ಏನು ನೀರು ಬಿಡುಗಡೆಯಾಗಿದೆ ಅದನ್ನು 17ರ ಮಧ್ಯಾಹ್ನ ತಿಳಿಸಿದ್ದಾರೆ. ಹಾಗಾಗಿ ಅದರ ಬಗ್ಗೆ ಜುಡಿಶಿಯಲ್ ಎನ್‌ಕ್ವೈರಿಗೆ ಕೇಳಿದ್ದೇನೆ. ಯಾರು ತುಂಗಭದ್ರ ಮತ್ತು ಭದ್ರ ಅಥಾರಿಟಿ ಆಫೀಸರ್ಸ್ ರೆಸ್ಪಾನ್ಸಿಬಲ್ ಇದ್ದಾರೆ ಅವರ ಬಗ್ಗೆ ಕ್ರಮ ಕೈಗೊಳ್ಳಬೇಕೆಂದು ಹೇಳಿದ್ದೇನೆ. ಅದರ ಬಗ್ಗೆ ನನಗೆ ಸಮರ್ಪಕವಾದ ಉತ್ತರ ಸಿಕ್ಕಿಲ್ಲ. ಮತ್ತೊಂದು ಹಣ 50 ಕೋಟಿ ರೂಪಾಯಿ ಏನು 17–11–92ರಂದು ರಿಲೀಸ್ ಮಾಡಿದ್ದೀರಿ ಮತ್ತು ಇನ್ನೂ 15 ಕೋಟಿ ರೂಪಾಯಿಗಳನ್ನು ಇವತ್ತು ನಾಳೆ ಬಿಡುಗಡೆ ಮಾಡುತ್ತೇವೆಂದು ಹೇಳಿದಿರಿ; ಒಪ್ಪಿಕೊಳ್ಳುತ್ತೇನೆ. ರಾಜ್ಯ ಸರ್ಕಾರಕ್ಕೆ 300 ಕೋಟಿ ರೂಪಾಯಿಗಳ ಹಾನಿ ಆದಾಗ ಅಷ್ಟನ್ನು ಒಂದೇ ಸಾರಿ ರಿಲೀಸ್ ಮಾಡುವುದು ಕಷ್ಟವಾಗುತ್ತದೆ. ಹಾಗಾಗಿ ನಾನು ಸಲಹೆ ಕೊಟ್ಟಿದೆ. ಕೇಂದ್ರ ಸರ್ಕಾರ ನಿಮ್ಮದೇ ಆಗಿರುವಾಗ ಅವರ ಮೇಲೆ ಒತ್ತಾಯ ತಂದು ಸ್ಪೆಶಲ್ ಫಂಡ್ ತನ್ನಿ. ಆಗ ತಮ್ಮ ಬರ್ಡನ್ ಕಡಿಮೆಯಾಗುತ್ತದೆ. ಅಲ್ಲಿ ತಮ್ಮ ಸರ್ಕಾರ ಸಂಪೂರ್ಣ ವಿಫಲವಾಗಿದೆ. ಪಿ.ಎಂ. ರಿಲೀಫ್ ಫಂಡಿನಿಂದ 7–8 ಲಕ್ಷ ರೂಪಾಯಿಗಳನ್ನು ತಂದಿರಿ. ಅದು ಬಿಟ್ಟರೆ ಒಂದು ಪೈಸೆ ಹಣ ತರುವುದಕ್ಕೆ ಆಗಿಲ್ಲ. ಹಾಗಾದರೆ ನೀವು ವಿಫಲರಾಗಿದ್ದೀರಿ ಎಂದು ಹೇಳಬೇಕಾಗುತ್ತದೆ. ಇಂಥ ನೆರೆಹಾವಳಿ ಅನ್‌ಪ್ರಿಸಿಡೆಂಟೆಡ್. ರಾಜ್ಯದ ಇತಿಹಾಸದಲ್ಲೇ ಆಗಿಲ್ಲ. ಇಂಥ ಸಮಯದಲ್ಲಿ ಕೇಂದ್ರ ಸರ್ಕಾರಕ್ಕೆ ಪ್ರೆಜರ್ ತಂದು ಹಣ ತರಬೇಕಾಗಿತ್ತು. 50–100 ಕೋಟಿ ರೂಪಾಯಿ ಬಂದರೆ, 50–100 ಕೋಟಿ ರೂಪಾಯಿಗಳನ್ನು ರಿಲೀಸ್ ಮಾಡಬಹುದು. ಅಲ್ಲಿ ನೀವು ವಿಫಲರಾಗಿದ್ದೀರಿ. ಅದರ ಬಗ್ಗೆ ಏನು ಹೇಳುತ್ತೀರಿ? ಕ್ರಾಪ್ ಕಾಂಪನ್‌ಸೇಷನ್ ಆಗಲಿ, ಸಬ್ಸಿಡಿಯಾಗಲಿ ಏನೂ ಕೊಟ್ಟಿಲ್ಲ. ದಾವಣಗೆರೆಯಲ್ಲಿ ಬರುವಾಗ ಅಲ್ಲಿ ಶಾಸಕರು ನಮ್ಮ ಕ್ಷೇತ್ರದಲ್ಲಿ ಕ್ರಾಪ್ ಕಾಂಪನ್‌ಸೇಷನ್ ಕೊಟ್ಟಿಲ್ಲವೆಂದರು. ಡಿ.ಸಿ.ಯವರನ್ನು ಕಾಂಟ್ಯಾಕ್ಟ್ ಮಾಡಿದೆ; ಹೌದು, ಮನೆಗೆ ಮತ್ತು ಜಾನುವಾರುಗಳಿಗೆ ಹಣ ಕೊಡುವುದಕ್ಕೆ ಪ್ರೈಯಾರಿಟಿ ಕೊಟ್ಟಿದ್ದೇವೆಂದರು. ರೈತರು ಕಷ್ಟದಲ್ಲಿದ್ದಾರೆಂದು ಒಪ್ಪಿದ್ದೀರಿ. ನೆರೆಹಾವಳಿಯಿಂದ ಕಂಗಾಲಾಗಿದ್ದಾರೆಂದು ಒಪ್ಪಿದ್ದೀರಿ. ಏನು ಬೆಳೆ ಬೆಳೆಸಿದ್ದರು ಅದೆಲ್ಲ ಹಾಳಾಗಿ ಹೋಗಿದೆ. ಅವರ ಹತ್ತಿರ ಬೀಜ ಕೊಳ್ಳುವುದಕ್ಕೂ ರೊಕ್ಕ ಇಲ್ಲ. ಅವರಿಗೆ ಬೀಜ ಕೊಟ್ಟಿಲ್ಲ, ಗೊಬ್ಬರ ಕೊಟ್ಟಿಲ್ಲ. ಕ್ರಾಪ್ ಕಾಂಪನ್‌ಸೇಷನ್ ಕೊಡುವುದಕ್ಕೆ ಆಗಿಲ್ಲವೆಂದರೆ ತಮ್ಮ ಸರ್ಕಾರ ವಿಫಲವಾಗಿದೆ ಎಂದು ಹೇಳಬೇಕಾಗುತ್ತದೆ. ಹೀಗಾಗಿ ಇದರ ಬಗ್ಗೆ ತಾವು ಏನು ಹೇಳುತ್ತೀರೆಂದು ತಮಗೆ ಕೇಳುತ್ತಿದ್ದೇನೆ.

ಶ್ರೀ ಎಂ. ರಾಜಶೇಖರಮೂರ್ತಿ:– ಮೊದಲನೆಯದು ವಾರ್ನಿಂಗ್ ಬಗ್ಗೆ ರಾಯಚೂರು ಡಿ.ಸಿ.ಯವರಿಗೆ ಕೇಳಿದ್ದು ಅವರು ಇಲ್ಲ, ಎಂದು ಹೇಳಿದರು ಎಂದು ಹೇಳಿದಿರಿ. ನನ್ನ ಹತ್ತಿರ ಡಿ.ಸಿ.ಯವರಿಗೆ ಕೊಟ್ಟಿರತಕ್ಕ ಟೆಲಿಗ್ರಾಮ್ ಕಾಪಿ ಇದೆ. ತುಂಗಭದ್ರಾ ಬೋರ್ಡ್‌ನವರು

ಏನೇನು ಯಾರು ಯಾರಿಗೆ ಟೆಲಿಗ್ರಾಮ್ ಕೊಟ್ಟು ಮಾಡಿದ್ದಾರೆ. ಇಡೀ ಫೈಲ್ ತರಿಸಿಕೊಂಡಿದ್ದೇನೆ.

ಶ್ರೀ ಆರ್.ವಿ. ದೇಶಪಾಂಡೆ:- ಟೆಲಿಗ್ರಾಮ್ ಅವರಿಗೆ ಮುಟ್ಟಬೇಕಲ್ಲವೇ? ಡಿ.ಸಿ.ಯವರು ನಮಗೆ ಹೇಳಿದ್ದಾರೆ. ಜನ ಸಾಮಾನ್ಯರು ನಮಗೆ ಹೇಳಿದ್ದಾರೆ. ರಾಯಚೂರು, ಬಳ್ಳಾರಿಯಲ್ಲಿ ಪ್ರವಾಸ ಮಾಡಿದ್ದೇವೆ.

ಶ್ರೀ ಎಂ. ರಾಜಶೇಖರಮೂರ್ತಿ:- ಟೆಲಿಫೋನ್ ಸಿಸ್ಟಮ್ ಎಲ್ಲಾ ಕೆಟ್ಟಿತ್ತು. ಪೊಲೀಸ್ ವೈರ್‌ಲೆಸ್ ಮುಖಾಂತರ ಎಲ್ಲರಿಗೂ ಇನ್‌ಫರ್ಮೇಷನ್ ಕೊಟ್ಟಿದ್ದಾರೆ. ಮತ್ತೆ ಈ ಹಣದ ಬಗ್ಗೆ ಆಪರೇಟ್ ಮಾಡುವವರು ಯಾರು, ಯಾರು ಮಾಡಬೇಕೆಂದು ಕೇಳಿದ್ದೀರಿ. ಮುಖ್ಯ ಈ ಹಣವನ್ನು ರಾಜ್ಯ ಸರ್ಕಾರದವರೇ ಮಾಡಬೇಕು. 27 ಕೋಟಿ ರೂಪಾಯಿ ಏನಿದೆ ಈ ಫಂಡ್ ನ್ಯಾಷನಲೈಸ್ ಬ್ಯಾಂಕ್‌ನಲ್ಲಿ ಇಟ್ಟಿದ್ದೇವೆ. ಅದನ್ನು ಆಪರೇಟ್ ಮಾಡುವುದು ಸ್ಟೇಟ್ ಗೌರ್ನಮೆಂಟ್; ಸೆಂಟ್ರಲ್ ಗೌರ್ನಮೆಂಟ್ ಅಲ್ಲ. ಅದರಲ್ಲಿ ಬದಲಾವಣೆ ಆಗುವುದಿಲ್ಲ. ಮತ್ತೆ ಕ್ರಾಪ್ ಇನ್‌ಷೂರೆನ್ಸ್ ಬಗ್ಗೆ ಹೇಳಿದ್ದೀರಿ. ಇದರ ಬಗ್ಗೆ ಮೊದಲೇ ಹೇಳಿದೆ. ಈಗ ತಾಲ್ಲೂಕು ಒಂದು ಯೂನಿಟ್ ಆಗಿದೆ. ಮಂಡಲ್ ಒಂದು ಯೂನಿಟ್ ಆಗಬೇಕು. ಹಾಗೆ ಆದರೆ ಅವರಿಗೆ ಅನುಕೂಲವಾಗುತ್ತದೆ. ಇದರ ಬಗ್ಗೆ ವ್ಯಾಪಕವಾಗಿ ಚರ್ಚೆ ಮಾಡಿ ಕೆಲವು ಡಿಸಿಷನ್ಸ್ ತೆಗೆದುಕೊಳ್ಳಬೇಕಾಗಿದೆ. ಎಲ್ಲಿ ತೊಂದರೆ ಇದೆ, ಏಕೆ ಆಯಿತು ಎಂದು ಹೇಳಿ ಅದರ ಬಗ್ಗೆ ಇನ್‌ಫರ್ಮೇಷನ್ ತರಿಸಿಕೊಂಡಿದ್ದೇನೆ. ಆ ರೀತಿ ಮಾಡುವಾಗ ನಿಮಗೆಲ್ಲರನ್ನೂ ಕರೆಯಿಸಿ ಕನ್‌ಸಲ್ಟ್ ಮಾಡಿ ಡಿಸಿಷನ್ ತೆಗೆದುಕೊಳ್ಳುತ್ತೇವೆ. ಏಕೆಂದರೆ it is a very big question involving lakhs of people in the agricultural community. I will take all of you into confidence and discuss how best the scheme should be improved and the benefit should go to the agricultural community.

ಶ್ರೀ ಆರ್.ವಿ. ದೇಶಪಾಂಡೆ:- ಕೇಂದ್ರ ಸರ್ಕಾರದಿಂದ ಹಣ ಬಂದಿಲ್ಲ. ಪ್ರಧಾನಿಯವರು ರಾಜ್ಯಕ್ಕೆ ಬಂದಿಲ್ಲ. ಕೃಷಿ ಮಂತ್ರಿಗಳೂ ಬಂದಿಲ್ಲ. ಅನ್‌ಪ್ರೆಸಿಡೆಂಟ್ ನೆರೆಹಾವಳಿಯಾದರೆ ರಾಜ್ಯದ ರೈತರ ಬಗ್ಗೆ, ಬಡಜನರ ಬಗ್ಗೆ ಕೇಂದ್ರಕ್ಕಾಗಲೀ, ರಾಜ್ಯ ಸರ್ಕಾರಕ್ಕಾಗಲೀ ಯಾವ ಕಳಕಳಿ ಇಲ್ಲ ರೈತರಿಗೆ ಇದುವರೆವಿಗೂ ಪರಿಹಾರ ಕೊಡುವುದಕ್ಕೆ ಆಗಿಲ್ಲ. ಕ್ರಾಪ್ ಕಾಂಪನ್‌ಸೇಷನ್ ಇಲ್ಲ. ಇನ್‌ಪುಟ್ಸ್ ಇಲ್ಲ; ಮನೆ ಬಿದ್ದಿದೆ, ಕಟ್ಟಿಕೊಟ್ಟಿಲ್ಲ. ultimately ಅರೇಂಜ್‌ಮೆಂಟ್ಸ್ ಆಗಿಲ್ಲ. ಹೀಗಾಗಿ ನಾವು, in protest against this, we are walking out. We are walking out against the Government's failure.

(Hon. Members belonging to Janatha Dal withdraw from the House)

ಶ್ರೀ ಬಿ.ಎಸ್. ಯಡಿಯೂರಪ್ಪ:- ಸನ್ಮಾನ್ಯ ಅಧ್ಯಕ್ಷರೇ, ತಮ್ಮ ಮೂಲಕ ಕಂದಾಯ ಸಚಿವರನ್ನು ಕೇಳುತ್ತೇನೆ. ತಾವು ಕೊಟ್ಟಿರತಕ್ಕ ಉತ್ತರ ತಮಗೆ ಸಮಾಧಾನವಾಗಿದೆಯೇ? ಯಾವುದಾದರೂ ಪ್ರಶ್ನೆಗೆ ಪರಿಹಾರ ಹುಡುಕುವುದಕ್ಕೆ ಯೋಚನೆ ಮಾಡಿದ್ದೀರಾ? ಕಳೆದ ಶತಮಾನದಲ್ಲಿಯೇ ಕಾಣದ ನೆರೆಹಾವಳಿಯನ್ನು ಈಗ ಕಂಡಿದ್ದೇವೆಂದು ತಾವೇ ಹೇಳಿದ್ದೀರಿ. ತಾವು ಕೊಟ್ಟಿರತಕ್ಕ ಉತ್ತರದಲ್ಲಿ ''ರಾಜ್ಯದಲ್ಲಿ ಪ್ರಸಕ್ತ ನೆರೆಹಾವಳಿಯಿಂದ 51,92,000 ಜನರು ತೊಂದರೆಗೆ ಈಡಾಗಿದ್ದಾರೆ. 3,12,000 ಹೆಕ್ಟೇರ್ ಜಮೀನಿಗೆ ಅಫೆಕ್ಟ್ ಆಗಿದೆ'' ಎಂದಿದ್ದೀರಿ. ಹೀಗಿರಬೇಕಾದರೆ ನಾನು ನಿಮಗೆ ಸಲಹೆ ಏನು ಹೇಳಿದೆ? ರೈತರು ಈ ಸಮಸ್ಯೆಯಿಂದ ತೊಳಲಾಡುತ್ತಿದ್ದು, ಇವರಿಗೆ ನೆರವು ಕೊಡುವ ದೃಷ್ಟಿಯಿಂದ, ಪರಿಹಾರ ಕೊಡುವ ದೃಷ್ಟಿಯಿಂದ ಸದನದ ಒಂದು ಸಮಿತಿ ಮಾಡಿ, ನಾಳೆ ಮತ್ತು ಫೆಬ್ರವರಿಯಲ್ಲಿ ಕುಳಿತುಕೊಳ್ಳುವ ಮುಂಚೆ ವರದಿ ತರಿಸುವ ಪ್ರಯತ್ನ ಮಾಡೋಣ, ಪರಿಹಾರ ಕೊಡೋಣ ಎನ್ನುವ ಮಾತಿಗೆ ಉತ್ತರ ಇಲ್ಲ.

ನಾಶ ಆಗಿದೆ ಎಂದು ತಾವೇ ಒಪ್ಪಿಕೊಂಡಿದ್ದೀರಿ. ಹತ್ತಿ ಬೆಳೆಯಬೇಕಾದರೆ, ಭತ್ತ ಬೆಳೆಯಬೇಕಾದರೆ, ಜೋಳ ಬೆಳೆಯಬೇಕಾದರೆ ಇವತ್ತಿನ ಸ್ಥಿತಿಯಲ್ಲಿ ಎಕರೆಗೆ 4 ಸಾವಿರ ರೂಪಾಯಿಗಳವರೆಗೆ ಖರ್ಚು ಬರುತ್ತದೆಂದು ತಮ್ಮ ಕೃಷಿ ಇಲಾಖೆಯವರೇ ವೈಜ್ಞಾನಿಕವಾಗಿ ಹೇಳುತ್ತಾರೆ. ಹೀಗಿರಬೇಕಾದರೆ ಇವತ್ತು ಆ ರೈತನಿಗೆ ಬರುವ ಲಾಭ ಕೇಳುತ್ತಿಲ್ಲ.

(ಉಪಾಧ್ಯಕ್ಷರು ಸಭಾಪೀಠವನ್ನಲಂಕರಿಸಿದರು)

ಲಾಸ್ ಆದ ಈ ವ್ಯಕ್ತಿ ಖರ್ಚು ಮಾಡಿದ್ದಕ್ಕೆ ಪರಿಹಾರ ರೂಪದಲ್ಲಿ ಎಕರೆಗೆ 4 ಸಾವಿರ ರೂಪಾಯಿ ಕೊಡಿ. ಯಾವ ರೈತ ಸಹಕಾರ ಸಂಘಗಳ ಮೂಲಕ, ನ್ಯಾಷನಲೈಸ್ಡ್ ಬ್ಯಾಂಕ್ ಮೂಲಕ ಸಾಲ ಪಡೆದಿದ್ದಾನೆ ಅದನ್ನು ಮನ್ನಾ ಮಾಡಿ. ಇಲ್ಲದಿದ್ದರೆ ಆತ ಚೇತರಿಸಿಕೊಳ್ಳುವುದಕ್ಕೆ ಇನ್ನೂ 5 ವರ್ಷ ಬೇಕಾಗುತ್ತದೆ. ಇನ್ನು 6 ತಿಂಗಳು ಆತ ಜೀವನ ನಡೆಸುವುದು ಹೇಗೆ ಎನ್ನುವುದಕ್ಕೆ ಉತ್ತರ ಬಂದಿಲ್ಲ. ಎರಡನೆಯದಾಗಿ ನೆರೆಹಾವಳಿಗೆ ತುತ್ತಾದ ರೈತರ ಬಗ್ಗೆ ನೀರಾವರಿ ತೆರಿಗೆಯನ್ನು ಮನ್ನಾ ಮಾಡಬೇಕೆಂದು ಹೇಳಿದ್ದೆವು. ಅದಕ್ಕೆ ಉತ್ತರ ಕೊಟ್ಟಿಲ್ಲ. ಬೇಸಿಗೆ ಬೆಳೆ ಬೆಳೆಯುವುದಕ್ಕೆ ನೀರಾವರಿ ಅನುಕೂಲವಿದ್ದರೆ ರಾಸಾಯನಿಕ ಗೊಬ್ಬರ ಬೀಜ ಕೊಡಿಯೆಂದು ಹೇಳಿದ್ದೇವೆ ಕೊಡಲಿಲ್ಲ. ರೈತರ ಸಾಲ ಮನ್ನಾದ ವಿಚಾರ ದಿನಾಂಕ 2.10.90 ರಿಂದ ನೆನೆಗುದಿಗೆ ಬಿದ್ದಿರುವುದರಿಂದ ರೈತನ ಸಾಲ ಮನ್ನಾ ಮಾಡುವ ಬಗ್ಗೆ ಸರ್ಕಾರದಿಂದ ಉತ್ತರ ಇಲ್ಲ. ಮಾನ್ಯ ಮುಖ್ಯಮಂತ್ರಿಗಳು ಹೇಳಿದರು ಯಾರು ಮನೆಯನ್ನು ಸಂಪೂರ್ಣವಾಗಿ ಕಳೆದುಕೊಂಡಿದ್ದಾರೆ ಅಂತಹವರಿಗೆ ಆಶ್ರಯ ಸ್ಕೀಮ್‌ನಲ್ಲಿ ಮನೆಯನ್ನು ಸಂಪೂರ್ಣವಾಗಿ ಕಟ್ಟಿಕೊಡುತ್ತೇವೆಂದು. ಜಾನುವಾರು ಎತ್ತು, ಕುರಿ, ಕೋಳಿ, ಸತ್ತರೆ ಎಷ್ಟೆಷ್ಟೂ ಪರಿಹಾರ ಕೊಡುತ್ತೇವೆಂದು ಹೇಳಲಿಲ್ಲ. ಆಮೇಲೆ ಗಲಭೆಯಲ್ಲಿ ಸತ್ತವರಿಗೆ 1 ಲಕ್ಷ ರೂಪಾಯಿ ನಮ್ಮ ಸರ್ಕಾರದವರು ಕೊಡುತ್ತೇವೆಂದು ಹೇಳಿದ್ದಾರೆ. ಕೇಂದ್ರದವರು 2ಲಕ್ಷ ಕೊಡುತ್ತೇವೆಂದು ಹೇಳುತ್ತಾರೆ. ಆ ಬಡಪಾಯಿಗೆ ಪರಿಹಾರ ಕೂಡ ಸರಿಯಾಗಿ ಸಿಗುತ್ತಿಲ್ಲ. ಅದರ ಬಗ್ಗೆ ಸ್ಪಷ್ಟವಾಗಿ ಉತ್ತರ ಕೊಡಿ. ರೈತ ಉಳಿಯುವಂತಹ ರೀತಿಯಲ್ಲಿ ಏನಾದರೂ ಪರಿಹಾರ ಹುಡುಕುವ ಪ್ರಯತ್ನಮಾಡಿ. ಇಲ್ಲದಿದ್ದರೆ ಕೇಂದ್ರ ಸರ್ಕಾರಕ್ಕೆ ಮತ್ತು ರಾಜ್ಯ ಸರ್ಕಾರಕ್ಕೆ ರೈತನನ್ನು ಉಳಿಸುವಂತಹ ಯಾವುದೇ ಕಳಕಳಿ ನಿಮಗೆ ಇಲ್ಲವೆಂದು ಹೇಳಬೇಕಾಗುತ್ತದೆ. ಮಾನ್ಯ ಅಧ್ಯಕ್ಷಿಣಿಯವರೇ ನಿಮಗೆ ಕೈಮುಗಿಯುತ್ತೇನೆ, ರೈತನ ಪ್ರಶ್ನೆ ಬಂದಾಗ ಬೆಲ್ ಹೊಡೆಯಬೇಡಿ ನಾನು ಒಬ್ಬನೇ ಅಲ್ಲ, ಎಲ್ಲಾ ಸದಸ್ಯರು ಮಾತನಾಡುವವರು ಇದ್ದಾರೆ.

ಉಪಾಧ್ಯಕ್ಷರು:- ಎಲ್ಲಾ ವಿಷಯವನ್ನು ಹೇಳಿದ್ದಾರೆ.

ಶ್ರೀ ಬಿ.ಎಸ್. ಯಡಿಯೂರಪ್ಪ:- ವಿಷಯವನ್ನು ಚರ್ಚೆ ಮಾಡುವಂತಹ ಸಂದರ್ಭದಲ್ಲಿ ನಾನು ಪ್ರಾರ್ಥನೆ ಮಾಡಿದ್ದೇನೆ ಮುಖ್ಯಮಂತ್ರಿಗಳಿಗೆ, ಸ್ವಾಮಿ ನಾವು ಕಂದಾಯ ಸಚಿವರಿಂದ ಉತ್ತರ ನಿರೀಕ್ಷೆ ಮಾಡುತ್ತಿಲ್ಲ, ಮುಖ್ಯಮಂತ್ರಿಗಳು ಉತ್ತರ ಕೊಡಬೇಕು, ಹಿಂದೆ ಎಂದೂ ಕಾಣದಂಥ ಭೀಕರ ನೆರೆಹಾವಳಿ ಬಂದಿದೆ ನೀವು ಉತ್ತರ ಕೊಡಿ, ರೈತನಿಗೆ ಪರಿಹಾರ ಘೋಷಣೆ ಮಾಡಿಯೆಂದು ಹೇಳಿದರೆ ತಾವು ಉತ್ತರ ಕೊಡಲಿಲ್ಲ. ನಿಮ್ಮ ಬಾಯಿಂದ ಇಷ್ಟು ಕೊಡುತ್ತೇವೆ ಯಡಿಯೂರಪ್ಪನವರೇ ನಮ್ಮ ಕೆಲಸಕಾರ್ಯಗಳು ನಿಂತರೂ ಪರವಾಗಿಲ್ಲ ನಾವು 200 ಕೋಟಿ ರೂಪಾಯಿ ನೆರವು ಕೊಡುತ್ತೇವೆಂದು ನಿಮ್ಮ ಬಾಯಿಂದ ಬರುತ್ತಿಲ್ಲ. ಅಂದರೆ ರೈತನ ಬಗ್ಗೆ ಕಿಂಚಿತ್ತು ಕಳಕಳಿ ಇಲ್ಲದಿರುವಂತಹ ಕೇಂದ್ರ ಸರ್ಕಾರ ಮತ್ತು ರಾಜ್ಯ ಸರ್ಕಾರದ ನಿಮ್ಮ ನೀತಿ ಏನಿದೆ ಆದರಿಂದಾಗಿ ನಿಜಕ್ಕೂ ಸಹ ಜನ ನಿಮ್ಮನ್ನು ಕ್ಷಮಿಸುವುದಿಲ್ಲ. ನನ್ನ ಐದು ಪ್ರಶ್ನೆಗಳಿಗೆ ನೇರವಾದ ಉತ್ತರವನ್ನು ತಾವು ಕೊಡಬೇಕು. ಇಲ್ಲದಿದ್ದರೆ ಬಹುಶಃ ರೈತನ ಆಕ್ರೋಶಕ್ಕೆ ತಾವು ತುತ್ತಾಗುತ್ತೀರಿ. ಇಂತಹ ಸಂದರ್ಭದಲ್ಲಿ ನೀವು ಏತಕ್ಕೆ ಕಂದಾಯ ಮಂತ್ರಿಗಳಾದಿರೋ ನನಗೆ ಗೊತ್ತಿಲ್ಲ. ಮಾನ್ಯ ಮುಖ್ಯಮಂತ್ರಿಗಳು ಈ ಸಂದರ್ಭದಲ್ಲಿ ಉತ್ತರ ಕೊಡಬೇಕಾಗಿತ್ತು ಅದು

ಆಗಲಿಲ್ಲ. ಆದಕ್ಕಾಗಿ ನಾನು ವಿನಂತಿ ಮಾಡುತ್ತಿದ್ದೇನೆ ಪರಿಹಾರ ಏನಾದರೂ ಕೊಡುತ್ತೇವೆಂದು ತಾವು ಉತ್ತರ ಹೇಳಬೇಕು.

ಉಪಾಧ್ಯಕ್ಷರು:- ಮಾನ್ಯ ಮಂತ್ರಿಗಳು ತಾವು ಏನಾದರೂ ಹೇಳುತ್ತೀರಾ?

ಶ್ರೀ ಸಿ. ಬೈರೇಗೌಡ:- ಎಷ್ಟು ನಯವಾಗಿ ಮಾನ್ಯ ರಾಜಶೇಖರಮೂರ್ತಿಯವರು ಜಾಗ ಬಿಡಿಸಿಕೊಂಡು ಹೇಳುತ್ತಿದ್ದಾರೆ ನೋಡಿ.

ಶ್ರೀ ಎಂ. ರಾಜಶೇಖರಮೂರ್ತಿ:- ಮಾನ್ಯ ಸದಸ್ಯರಿಗೆ ರೈತರ ಬಗ್ಗೆ ಎಷ್ಟು ಆಸಕ್ತಿಯಿದೆ ಅಷ್ಟೇ ಆಸಕ್ತಿ ಸರ್ಕಾರಕ್ಕೂ ಇದೆ. ರೈತರು ಕೊಡಬೇಕಾದ ಸಾಲಕ್ಕೆ ಯಾವ ರೀತಿ ರಿಲೀಫ್ ಕೊಡುತ್ತೀರಿ ಎಂದು ಹೇಳಿದ್ದಾರೆ. ಈಗಾಗಲೇ ಕೋ-ಅಪರೇಟಿವ್ ಡಿಪಾರ್ಟ್‌ಮೆಂಟ್ has issued instructions to all the District Central Co-operative Banks to obtain required certificates from the Deputy Commissioners and initiated action to convert short term loan to medium term loan in consultation with the State Co-operative Apex Bank Ltd., and NABARD.

ಶ್ರೀ ಬಿ.ಎಸ್. ಯಡಿಯೂರಪ್ಪ:- ಅದರಲ್ಲಿ ಏನಿದೆ?

ಶ್ರೀ ಎಂ. ರಾಜಶೇಖರಮೂರ್ತಿ:- ಶಾರ್ಟ್‌ಟರ್ಮ್ ಲೋನ್ ಅನ್ನು ಮಿಡಿಯಂ ಟರ್ಮ್ ಲೋನ್ ಆಗಿ ಕನ್ವರ್ಟ್ ಮಾಡಲಾಗಿದೆ.

ಶ್ರೀ ಬಿ.ಎಸ್. ಯಡಿಯೂರಪ್ಪ:- ಶಾರ್ಟ್‌ಟರ್ಮ್ ಲೋನನ್ನು ಮಿಡಿಯಂಟರ್ಮ್ ಲೋನ್ ಆಗಿ ಕನ್ವರ್ಟ್ ಮಾಡಿದರೆ ರೈತನಿಗೆ ಬೆಳೆ ನಷ್ಟವಾಗಿರುವಾಗ ಅವನು ಎಲ್ಲಿಂದ ತಂದು ವಾಪಸ್ಸು ಕೊಡುತ್ತಾನೆ?

ಉಪಾಧ್ಯಕ್ಷರು:- ಮಾನ್ಯ ಸದಸ್ಯರು ಸಮಾಧಾನದಿಂದ ಇರಿ, ಮಂತ್ರಿಗಳು ಏನು ಹೇಳುತ್ತಾರೆ ಕೇಳಿ?

(ಈ ಸಂದರ್ಭದಲ್ಲಿ ಭಾರತೀಯ ಜನತಾ ಪಕ್ಷದ ಸದಸ್ಯರುಗಳು ಅಧ್ಯಕ್ಷರ ಪೀಠದ ಮುಂದೆ ಮಾತನಾಡುತ್ತಿದ್ದರು. ನಂತರ ಬಾವಿಯೊಳಗೆ ಬಂದರು)

ಉಪಾಧ್ಯಕ್ಷರು:- ಈಗ ಮಂತ್ರಿಗಳು ಈಲ್ಡ್ ಆಗಿಲ್ಲ. ಅವರು ಏನು ಹೇಳುತ್ತಾರೆ ಹೇಳಲಿ.

ಶ್ರೀ ಟಿ.ಎಂ. ಮಂಜುನಾಥ್:- ಮಾನ್ಯ ಭಾರತೀಯ ಜನತಾ ಪಕ್ಷದವರು ಪ್ರಚಾರಕ್ಕೋಸ್ಕರ ಸರ್ಕಾರದ ಮೇಲೆ ಅಪಾದನೆ ಮಾಡುತ್ತಿದ್ದಾರೆ.

(ಗೊಂದಲ)

ಉಪಾಧ್ಯಕ್ಷರು:- ಮಾನ್ಯ ಸದಸ್ಯರು ಬಾವಿಯೊಳಗಿನಿಂದ ಮಾತನಾಡಿದರೆ ಯಾವುದೂ ರೆಕಾರ್ಡ್‌ಗೆ ಹೋಗುವುದಿಲ್ಲ. ದಯವಿಟ್ಟು ಮಾತನಾಡುವವರು ನಿಮ್ಮ ನಿಮ್ಮ ಜಾಗಗಳಿಗೆ ಹೋಗಿ ಮಾತನಾಡಿ. ಮಂತ್ರಿಗಳು ಈಲ್ಡ್ ಆಗಿಲ್ಲ.

ಶ್ರೀ ವಾಟಾಳ್ ನಾಗರಾಜ್:- ಮಾನ್ಯ ಕಂದಾಯ ಸಚಿವರೇ ಒಂದು ನಿಮಿಷ.

ಶ್ರೀ ಟಿ.ಎಂ. ಮಂಜುನಾಥ್:- ರೋಷ, ಆವೇಶಗಳಿಂದ ರೈತರ ಸಮಸ್ಯೆಗಳನ್ನು ಬಗೆಹರಿಸುವುದಕ್ಕಾಗುವುದಿಲ್ಲ. ಸಮಸ್ಯೆಗಳನ್ನು ಯಾವರೀತಿ ಪರಿಹಾರ ಮಾಡಬೇಕೆಂದು ನಮ್ಮ ರೆವಿನ್ಯೂ ಮಂತ್ರಿಗಳು ಉತ್ತರ ಕೊಡುತ್ತಿದ್ದಾರೆ. ರೋಷ ಆವೇಶಗಳಿಗೆ ಆಸ್ಪದವಿಲ್ಲ. ರೋಷ

ಆವೇಶ ತಾಪಗಳು ಒಳಗಡೆ ಇರಲಿ. ರೈತರ ಬಗ್ಗೆ ಇವರೊಬ್ಬರಿಗೇ ಕಳಕಳಿಯಿಲ್ಲ ನಮಗೂ ಕಳಕಳಿಯಿದೆ. ಕರ್ನಾಟಕದ ರೈತರು ಇವರೊಬ್ಬರಿಗೆ ಮಾತನಾಡುವುದಕ್ಕೆ ಅವಕಾಶ ಕೊಟ್ಟಿದ್ದಾರೇನು? ಸರ್ಕಾರಕ್ಕೆ ಕಳಕಳಿಯಿಲ್ಲವೆ? ಶಾರ್ಟ್‌ಟರ್ಮ್ ಲೋನನ್ನು ಮಿಡಿಯಂಟರ್ಮ್ ಲೋನಾಗಿ ಕನ್ವರ್ಟ್ ಮಾಡಿದ್ದಾರೆ. ರೈತರ ಸಾಲವನ್ನು ಮನ್ನಾ ಮಾಡಿದ್ದೇವೆ. ಇಡೀ ರಾಷ್ಟ್ರದಲ್ಲೇ ಯಾರೂ ಸಹ ಇದನ್ನು ಮಾಡಲಿಲ್ಲ. ಇವರು ಇಲ್ಲಿ ಸುಮ್ಮನೆ ಪ್ರಚಾರಕ್ಕೋಸ್ಕರ ಕೂಗಾಡುತ್ತಿದ್ದಾರೆ.

ಶ್ರೀ ವಾಟಾಳ್ ನಾಗರಾಜ್:- ಸ್ವಾಮಿ ಮಂಜುನಾಥ್‌ರವರೇ ನಿಮಗೆ ಎರಡೂ ಕೈ ಎತ್ತಿ ಮುಗಿಯುತ್ತೇನೆ ದಯಮಾಡಿ ಕುಳಿತುಕೊಳ್ಳಿ.

(ಗೊಂದಲ)

ಶ್ರೀ ವಾಟಾಳ್ ನಾಗರಾಜ್:- ಉಪಾಧ್ಯಕ್ಷರೇ.......

ಉಪಾಧ್ಯಕ್ಷರು:- ಅವರು ಈಲ್ಡ್ ಆಗಿಲ್ಲ.

(ಗೊಂದಲ)

ಶ್ರೀ ಟಿ.ಎಂ. ಮಂಜುನಾಥ್:- ಈ ರೀತಿ ಆವೇಶದಿಂದ ಭಾಷಣ ಮಾಡುವುದರಿಂದ ಏನೂ ಆಗುವುದಿಲ್ಲ. ಯಾವ ರೀತಿ ಮಾಡಬೇಕು ಎಂದು ಮಾನ್ಯ ಕಂದಾಯ ಮಂತ್ರಿಗಳು ಹೇಳುತ್ತಿದ್ದಾರೆ. ಇವರ ರೋಷ ಹೊರಗಡೆ ಇರಲಿ, ಇಲ್ಲಿ ಅಲ್ಲ. ಇಲ್ಲಿ ಸುಮ್ಮನೆ ಕೂಗಾಡಿ ಪ್ರಚಾರ ಪಡೆಯುವುದು ಬೇಡ.

ಶ್ರೀ ವಾಟಾಳ್ ನಾಗರಾಜ್:- ಸ್ವಾಮಿ ಮಂಜುನಾಥರವರೇ, ನಿಮಗೆ ಎರಡೂ ಕೈಯೆತ್ತಿ ಮುಗಿಯುತ್ತೇನೆ.....

(ಗೊಂದಲ. ಧರಣಿ ಕುಳಿತಿದ್ದ ಶ್ರೀ ಬಿ.ಎಸ್. ಯಡಿಯೂರಪ್ಪನವರು ಮಾತನಾಡತೊಡಗಿದರು.)

ಉಪಾಧ್ಯಕ್ಷರು:- ವೆಲ್‌ನಿಂದ ಮಾತನಾಡಿದ್ದು ಯಾವುದೂ ರೆಕಾರ್ಡ್ ಆಗುವುದಿಲ್ಲ. ಈಗ ದಯವಿಟ್ಟು ಎಲ್ಲರೂ ಕುಳಿತುಕೊಳ್ಳಿ.

ಶ್ರೀ ಟಿ.ಎಂ. ಮಂಜುನಾಥ್:- ಶ್ರೀ ಯಡಿಯೂರಪ್ಪನವರು ಆಡಬಾರದ ಮಾತುಗಳನ್ನಾಡಿದ್ದಾರೆ. ಅದನ್ನು ತಾವು ತೆಗಿಸಿಹಾಕಬೇಕು.

ಉಪಾಧ್ಯಕ್ಷರು:- ಅವರು ಅಲ್ಲಿಂದ ಮಾತನಾಡಿದ್ದು ಯಾವುದೂ ರೆಕಾರ್ಡಿಗೆ ಹೋಗಿರುವುದಿಲ್ಲ.

(ಬಿ.ಜೆ.ಪಿ. ಸದಸ್ಯರು ವೆಲ್‌ನಿಂದ ಮಾತನಾಡುತ್ತಲೇ ಇದ್ದರು)

ಶ್ರೀ ಟಿ.ಎಂ. ಮಂಜುನಾಥ್:- ಜನತೆಯನ್ನು ಪ್ರಚೋದನೆ ಮಾಡುತ್ತಿದ್ದೀರಾ? ಯಾವರೀತಿ ಶಾಸನಸಭೆಯಲ್ಲಿ ವರ್ತನೆ ಮಾಡಬೇಕೆಂದು ನಿಮಗೆ ಗೊತ್ತಿಲ್ಲವೇನು?

ಉಪಾಧ್ಯಕ್ಷರು:- ಮಂಜುನಾಥ್‌ರವರೇ, ಸಾಕಷ್ಟು ಮಾತನಾಡಿದ್ದೀರಿ, ದಯವಿಟ್ಟು ಕುಳಿತುಕೊಳ್ಳಿ.

ಶ್ರೀ ವಾಟಾಳ್ ನಾಗರಾಜ್:- ನಾನು ಅಂದುಕೊಂಡಂತೆ ಚುನಾವಣೆಗೆ ಇನ್ನೂ ಎರಡು ವರ್ಷ ಇದೆ.

ಉಪಾಧ್ಯಕ್ಷರು:- ಚುನಾವಣೆ ಏಕೆ? ನೆರೆಹಾವಳಿ ಬಗ್ಗೆ ಮಾತನಾಡಿ.

ಶ್ರೀ ವಾಟಾಳ್ ನಾಗರಾಜ್:- ಏಕೊ ಏನೋ ಶ್ರೀ ಮಂಜುನಾಥ್ ಅವರು ಇತ್ತೀಚಿನ ದಿವಸಗಳಲ್ಲಿ ಈ ರೀತಿ ಕೋಪಿಸಿಕೊಳ್ಳುತ್ತಾರೆ. ಅವರ ಆರೋಗ್ಯ ಸರಿ ಇದೆಯೇ?

ಶ್ರೀ ಟಿ.ಎಂ. ಮಂಜುನಾಥ್:- ನನ್ನ ಆರೋಗ್ಯ ಚೆನ್ನಾಗಿಯೇ ಇದೆ.

ಉಪಾಧ್ಯಕ್ಷರು:- ಈಗ ವಿಷಯಕ್ಕೆ ಬಂದಿರಿ.

ಒಬ್ಬರು ಮಾನ್ಯ ಸದಸ್ಯರು:- ಸರಿಯಾಗಿ ತಾಳ ಹಾಕುತ್ತೀರಿ.

ಶ್ರೀ ವಾಟಾಳ್ ನಾಗರಾಜ್:- ತಾಳವನ್ನು ತಿಳಿದುಕೊಂಡು ಲಯಬದ್ಧವಾಗಿ ಹಾಕಿದರೇನೇ ಸಂಗೀತ ಆಗುವುದು. ಈ ತರಹ ಕೂಗಿಕೊಂಡರೆ ಅದು ಸಂಗೀತವಾಗುವುದಿಲ್ಲ.

ಉಪಾಧ್ಯಕ್ಷರು:- ನಾಗರಾಜ್‌ರವರೇ ಬೇಗ ಮುಗಿಸಿ. ಈಗ ನಾವು ಚರ್ಚೆಯನ್ನು ಮುಗಿಸಬೇಕಾಗಿದೆ.

(ಗೊಂದಲ)

ಶ್ರೀ ವಾಟಾಳ್ ನಾಗರಾಜ್:- ನನಗೆ ಅವಕಾಶವನ್ನೇ ಕೊಡುತ್ತಿಲ್ಲ.

ಉಪಾಧ್ಯಕ್ಷರು:- ನೀವು ಆ ಕಡೆ ತಿರುಗಿ ಏಕೆ ಮಾತನಾಡುತ್ತೀರಿ? ಛೇರ್‌ಗೆ ಅಡ್ರೆಸ್ ಮಾಡಿ ಮಾತನಾಡಿ. ಆ ಕಡೆಗೆ ನೋಡಬೇಡಿ.

(ಗೊಂದಲ)

ಶ್ರೀ ವಾಟಾಳ್ ನಾಗರಾಜ್:- ನನಗೆ ಇರುವುದು ಎರಡು ಕಿವಿಗಳು. ಒಂದು ಕಡೆ ಕಾಂಗ್ರೆಸ್‌ನವರ ಕಾಟ. ಇನ್ನೊಂದು ಕಡೆ ಜನತಾದಳದ ಕಾಟ. ಮಾನ್ಯ ಉಪಾಧ್ಯಕ್ಷರೇ, ಮಾನ್ಯ ಕಂದಾಯ ಸಚಿವರು ಇರುವುದನ್ನು ಪಾಪ, ಪ್ರಾಮಾಣಿಕವಾಗಿ ಹೇಳಿದ್ದಾರೆ. ನಾವೇನೂ ಅವರ ಮೇಲೆ ಯುದ್ಧ ಮಾಡುವುದಕ್ಕೆ ಹೊರಟಿಲ್ಲ.

ಶ್ರೀ ಎ.ಕೆ. ಅನಂತಕೃಷ್ಣ:- ಹೇಳಿ.

ಶ್ರೀ ವಾಟಾಳ್ ನಾಗರಾಜ್:- ಏನು ಕೇಳಿ, ಹೇಳಿ? ಅನಂತಕೃಷ್ಣರವರೇ, ನೀವು ಮೇಯರ್ ಆಗಿದ್ದವರು. ಹೀಗೆ ಹೇಳಿದರೆ ಹೇಗೆ? ಅವರು ಹೇಳಿದ ಪ್ರಕಾರ ರಾಜ್ಯದಲ್ಲಿ ಮೂನ್ನೂರು ಕೋಟಿಗಿಂತ ಹೆಚ್ಚು ನಷ್ಟವಾಗಿದೆ. ರೈತರಿಗೆ ಯೋಗ್ಯ ಪ್ರಮಾಣದಲ್ಲಿ ಪರಿಹಾರ ಸಿಕ್ಕಿಲ್ಲ ಎಂದು ಈ ಸದನದಲ್ಲಿ ನಾವು ಚರ್ಚೆ ಮಾಡಿದ್ದೇವೆ.

ಈಗ ಅವರು ಹೇಳಿದ ಪ್ರಕಾರ, ಪ್ರಧಾನ ಮಂತ್ರಿಯವರಿಂದಲೂ ನಮಗೆ ಏನೂ ತೊಂದರೆ ಆಗಿಲ್ಲ. ನಮ್ಮನ್ನೆಲ್ಲಾ ಅವರು ಕರೆದುಕೊಂಡು ಹೋದರು. ಅವರ ಕಾರಿನಲ್ಲಿ ಕೂರಿಸಿಕೊಂಡರು, ಅಂಕಿಅಂಶ ಕೇಳಿದರು, ನಮ್ಮ ಮನವಿ ತೆಗೆದುಕೊಂಡರು. ಇದಾದ ನಂತರ ಮನೆ ಕಳೆದುಕೊಂಡವರಿಗೆಲ್ಲಾ, ವಿಶ್ವಬ್ಯಾಂಕಿಗೆ ನಾವು ಈಗಾಗಲೇ ಹೇಳಿದ್ದೇವೆ, ರಸ್ತೆ ರಿಪೇರಿಗೆ ವಿಶ್ವಬ್ಯಾಂಕಿಗೆ ಹೇಳಿದ್ದೇವೆ, ಮಿಕ್ಕ ಕೆಲಸಗಳಿಗೆ ಹುಡ್ಕೋಗೆ ಹೋಗಿದ್ದೇವೆ, ಈ ತರಹ ಉತ್ತರ ಕೊಟ್ಟಿದ್ದಾರೆ. ಅವರಿಗೆ ಕಳಕಳಿ ಇಲ್ಲ ಎಂದು ನಾನು ಅಂದುಕೊಂಡಿಲ್ಲ. ಸರ್ಕಾರಕ್ಕೆ ಜವಾಬ್ದಾರಿ ಇಲ್ಲ ಎಂದು ಅಂದುಕೊಂಡಿಲ್ಲ. ಕೇಂದ್ರ ಸರ್ಕಾರ ಇವರ ಮಾತನ್ನು ಕೇಳುತ್ತಾ ಇಲ್ಲ. ನಮ್ಮ ನೇರವಾದ ಅಪಾದನೆ, ಕೇಂದ್ರ ಸರ್ಕಾರದ ಮೇಲೆ. ಕೇಂದ್ರ ಸರ್ಕಾರದವರು ಕರ್ನಾಟಕವನ್ನು ಕಡೆಗಾಣಿಸಿದ್ದಾರೆ. ಕರ್ನಾಟಕವನ್ನು ಗುಲಾಮಗಿರಿಯಂತೆ ಕಾಣುತ್ತಿದ್ದಾರೆ. ಕರ್ನಾಟಕ ರೈತ, ಕರ್ನಾಟಕದ ಬಡವರು, ಕರ್ನಾಟಕವನ್ನು ಮರೆತಿದ್ದಾರೆಂದು ಹೇಳಿ, ಈ ಸರ್ಕಾರ, ಕೇಂದ್ರದ ಮೇಲೆ ಪ್ರಭಾವ ಬೀರುವುದರಲ್ಲಿ ವಿಫಲವಾಗಿದೆಯೆಂದು ಹೇಳಿ, ನಾನೂ ಸಹ ಧರಣಿ

ಹೋಗುತ್ತಿದ್ದೇನೆ. ಪ್ರತಿಭಟನೆ ಮಾಡಿ, ನಾನೂ ಧರಣಿ ಮಾಡುತ್ತಿದ್ದೇನೆ. ಇದು ಅನ್ಯಾಯ, ಕೇಂದ್ರ ಸರ್ಕಾರಕ್ಕೆ ಧಿಕ್ಕಾರ.

ಶ್ರೀ ಸಿ. ಬೈರೇಗೌಡ:- ಮಾನ್ಯ ಉಪಾಧ್ಯಕ್ಷರೇ, ...

ಉಪಾಧ್ಯಕ್ಷರು:- ಹೇಳಿದ್ದೆಲ್ಲಾ ಆಗಿದೆ ಇನ್ನೆನಿದೆ.

(ಗೊಂದಲ)

ಕೆ.ಎಸ್. ಈಶ್ವರಪ್ಪ:- ನಾನು ಅಂದುಕೊಂಡಿದ್ದೆ, ಅಧಿಕೃತ ವಿರೋಧಪಕ್ಷ, ಈ ರಾಜ್ಯದ ರೈತನಿಗೋಸ್ಕರ ಪರಿಹಾರ ಕೇಳುತ್ತದೆ, ಆಗಿರತಕ್ಕ ನಷ್ಟವನ್ನು ಸರ್ಕಾರದವರು ತುಂಬಿಕೊಡುತ್ತಾರೆಂದು ನಾವು ಅಂದುಕೊಂಡಿದ್ದೆವು. ಆದರ ಬಗ್ಗೆ ಏನನ್ನೂ ಕೇಳದೇ ಸಭಾತ್ಯಾಗ ಮಾಡಿ ಹೊರಟು ಹೋದರು. ಇದಕ್ಕೆ ಅವರಿಗೆಲ್ಲಾ ತುಂಬಾ ಸಂತೋಷವಾಗಿರಬೇಕು. ನಾನು ನಿಮಗೆ ಪ್ರಶ್ನೆ ಕೇಳುತ್ತೇನೆ, ಇಷ್ಟೊಂದು ಕುಟುಂಬಗಳು ಬೀದಿಪಾಲಾಗಿರುವುದು ಸರಿ ಎಂದು ಸ್ಪಷ್ಟವಾಗಿ ನಮ್ಮ ಮಂತ್ರಿಗಳು ತಿಳಿಸುತ್ತಾರೆ. ಬೀದಿಪಾಲಿಗಿರುವಂಥ ಕುಟುಂಬಗಳಿಗೆ ಪರಿಹಾರ ಇಂಥಿಂಥ ರೂಪದಲ್ಲಿ ನಾಳೆ ಕೊಡುತ್ತೇವೆ, ನಾಡಿದ್ದು ಕೊಡುತ್ತೇವೆಂದು ಹೇಳಿದ್ದರೆ ಚೆನ್ನಾಗಿತ್ತು. ಅವರುಗಳು ಬದುಕಿರುವಾಗಲೇ ಪರಿಹಾರ ಕೊಡಬೇಕಾಗಿತ್ತು. ಮಾನ್ಯ ಮಂತ್ರಿಗಳು ವಿಶ್ವಬ್ಯಾಂಕ್ ಕಡೆ ತೋರಿಸುತ್ತಿದ್ದಾರೆ, ಕೇಂದ್ರ ಸರ್ಕಾರದವರು ಇವರ ತಿಥಿ ಮಾಡುವುದಕ್ಕೆ ಹಣ ಕೊಡುತ್ತಾರೆಯೇ? ಜೀವಂತವಾಗಿರುವಾಗಲೇ ಕೊಡಬೇಕೋ, ಸತ್ತ ಮೇಲೆ ಕೊಡಬೇಕೋ ನೀವೇ ಯೋಚನೆ ಮಾಡಿ. ಪರಿಹಾರವೂ ಅಷ್ಟೇ, ಅದನ್ನು ಸ್ಪಷ್ಟವಾಗಿ ಹೇಳಿಲ್ಲ. ಮನೆ ಕಟ್ಟಿಸಿಕೊಡುತ್ತೇವೆಂದು ಹೇಳಿದರು...

ಉಪಾಧ್ಯಕ್ಷರು:- ಇದೆಲ್ಲಾ ಮಾತನಾಡಿದ್ದೀರಿ, ಅದಕ್ಕೆ ಉತ್ತರವನ್ನೂ ಕೊಟ್ಟಿದ್ದಾರೆ. ಪುನಃ ಹೇಳಿದ್ದನ್ನೇ ಏಕೆ ಹೇಳುತ್ತೀರಿ?

ಶ್ರೀ ಕೆ.ಎಸ್. ಈಶ್ವರಪ್ಪ:- ಮಾನ್ಯ ಮಂತ್ರಿಗಳು ಸಾಲದ ಬಗ್ಗೆ ಹೇಳಿದರು. ಮುಂದೆ ಲಾಂಗ್‌ಟರ್ಮ್ ಲೋನ್ ಮಾಡಿದ್ದೇವೆ ಎಂದು. ಅವರು ಬದುಕಿದ್ದರೆ ತಾನೆ ಸಾಲ ಕಟ್ಟುವುದು, ಇವರು ಬದುಕುವುದಕ್ಕೆ ಅವಕಾಶ ಮಾಡಿಕೊಡಬೇಕು. ಅದು ಬಿಟ್ಟು, ಸಾಲ ಮನ್ನಾಮಾಡುವ ಬಗ್ಗೆ ಪ್ರಶ್ನೇನೆ ಮಾಡಲಿಲ್ಲ. ಅವಕಾಶ ಕೊಡುತ್ತಿದ್ದೇನೆ, ಏನಿದು. ಸ್ಪಷ್ಟವಾಗಿ ಹೇಳದೇ, ಈಗ ವಿಶ್ವಬ್ಯಾಂಕ್ ತೋರಿಸುತ್ತಿದ್ದಾರೆ. ಕೇಂದ್ರ ಸರ್ಕಾರ ಕಡೆ ತೋರಿಸುತ್ತಿದ್ದಾರೆ. ಏನು ಗತಿ. ಈ ಸರ್ಕಾರಕ್ಕೆ ರೈತರ ಬಗ್ಗೆ ಸ್ವಲ್ಪವೂ ಕಳಕಳಿ ಇಲ್ಲ. ಬಡವರ ಮನೆಗಳು ಬಿದ್ದು ಹೋಗಿವೆ, ಅವರಿಗೆ 100 ರೂ. ಕೊಡುತ್ತೇನೆ, 200 ರೂ. ಕೊಡುತ್ತೇನೆ ಎಂದು ಹೇಳುತ್ತಾರೆ. ಇದರಿಂದ ಬಿದ್ದು ಹೋಗಿರುವ ಮನೆಗಳನ್ನು ಕಟ್ಟುವುದಕ್ಕಾಗುತ್ತದೆಯೇ? ಇವರು ಯಾವಾಗ ಕಟ್ಟುತ್ತಾರೆ. ಜಿಲ್ಲಾಧಿಕಾರಿಗಳಿಗೆ ಕೇಳಿದರೆ ಹಣ ಬಂದಿಲ್ಲವೆಂದು ಹೇಳುತ್ತಾರೆ. ನಗರ ಪ್ರದೇಶದಲ್ಲೂ ಕೂಡ ಇದು ಇಲ್ಲ. ಬಡವರ ಮನೆಗಳು ಬಿದ್ದುಹೋಗಿವೆ; ರೈತರೆಲ್ಲಾ ನಿರ್ನಾಮ ಆಗುವ ಕಾಲ ಬಂದಿದೆ. ಇದರ ಬಗ್ಗೆ ಸ್ಪಷ್ಟವಾಗಿ ನಮಗೆ ಹೇಳಿ ಎಂದರೆ ನೀವೇನು ರೈತರನ್ನು ಗುತ್ತಿಗೆ ತೆಗೆದುಕೊಂಡಿದ್ದೀರಾ ಎಂದು ಕೇಳುತ್ತಾರೆ.

ಉಪಾಧ್ಯಕ್ಷರು:- ಈಶ್ವರಪ್ಪನವರೇ, ನೀವು ಹೇಳಿದ ಪ್ರಶ್ನೆಗಳಿಗೆಲ್ಲಾ ಅವರು ಉತ್ತರ ಕೊಟ್ಟಿದ್ದಾರೆ. ನೀವು ಮತ್ತೆ ಪದೇ ಪದೇ ಅದನ್ನೇ ಕೇಳುತ್ತಿದ್ದೀರಿ.

ಶ್ರೀ ಕೆ.ಎಸ್. ಈಶ್ವರಪ್ಪ:- ಮಧ್ಯಪ್ರದೇಶದಲ್ಲಿರತಕ್ಕ ನಮ್ಮ ಸರ್ಕಾರ ಸಾಲ ಮನ್ನಾ ಮಾಡಿರುವುದು ಇವರಿಗೆ ಗೊತ್ತಿದೆ. ಅದರ ಆರ್ಡರ್ ಕಾಪಿ ಕೂಡ ಕೊಟ್ಟೆವು. ಇದೇ ರೀತಿ ನೀವೂ ಕೂಡ ಸಾಲ ಮನ್ನಾ ಮಾಡಿ ಎಂದು ಮನವಿ ಮಾಡಿಕೊಂಡೆವು, ಬೇಡಿಕೊಂಡೆವು. ಅದರ ಬಗ್ಗೆ

ಗಮನ ಕೊಡಲಿಲ್ಲ. ಈಗಲಾದರೂ ರೈತರ ಸಾಲ ಮನ್ನಾ ಮಾಡುತ್ತೀರಾ, ಇದನ್ನು ಸ್ಪಷ್ಟವಾಗಿ ನಿಮಗೆ ಕೇಳುತ್ತೇವೆ. ಮನೆಗಳನ್ನು ನಾಳೆಯಿಂದಲೇ ಕಟ್ಟಿಕೊಡುತ್ತೀರಾ. ಇವರೆಡರ ಪರಿಹಾರದ ಬಗ್ಗೆ ನಿಮ್ಮ ಅಭಿಪ್ರಾಯವೇನು?

ಉಪಾಧ್ಯಕ್ಷರು:- ಈಶ್ವರಪ್ಪನವರೇ, ತಾವು ಹೇಳಿದ್ದಾಯಿತು. ಈಗ ಶ್ರೀಯುತ ಬೈರೇಗೌಡರು, ಅವರು ಎದ್ದುನಿಂತಿದ್ದಾರೆ. ಅವರು ಏನು ಹೇಳುತ್ತಾರೆ ಕೇಳೋಣ.

ಶ್ರೀ ಕೆ.ಎಸ್. ಈಶ್ವರಪ್ಪ:- ಸರ್ಕಾರದ ಧೋರಣೆಯನ್ನು ಪ್ರತಿಭಟನೆ ಮಾಡಿ, ನಮ್ಮ ಪಕ್ಷದವರು ಮತ್ತು ವಾಟಾಳ್ ನಾಗರಾಜರವರು ಏನು ಧರಣಿ ಮಾಡುತ್ತಿದ್ದಾರೆ, ಅದಕ್ಕೆ ನಾನೂ ಬೆಂಬಲ ಕೊಡುತ್ತೇನೆ. ಈ ರಾಜ್ಯದ ರೈತರ ಶಾಪಕ್ಕೆ ನೀವು ಬಲಿಯಾಗುತ್ತೀರಿ ಎಂಬ ಶಾಪವನ್ನೂ ಈ ಸಂದರ್ಭದಲ್ಲಿ ಕೊಡುತ್ತಾ, ನಾನೂ ಕೂಡ ಧರಣಿ ಮಾಡುತ್ತೇನೆ. (ಧರಣಿ ಮಾಡಲು ಧಾವಿಸಿದರು.)

ಶ್ರೀ ಸಿ. ಬೈರೇಗೌಡ (ವೇಮಗಲ್):- ನಾನು ಮಾತನಾಡಿದಂಥ ಸಂದರ್ಭದಲ್ಲಿ, ಹೋದವರ್ಷ ನಮ್ಮ ಜಿಲ್ಲೆಯಲ್ಲಿ ಸುಮಾರು 60 ಸಾವಿರ ಮನೆಗಳು ಬಿದ್ದುಹೋದವು. ಒಂದು ತಾಲ್ಲೂಕು ಬಿಟ್ಟರೆ, ಉಳಿದಂತೆ ನಮ್ಮಲ್ಲಿ ಏನೂ ಆಗಿಲ್ಲ. ಹಾಳಾದಂಥ ರಸ್ತೆಗಳನ್ನಾಗಲೀ, ಕೆರೆಗಳನ್ನಾಗಲೀ ಕಟ್ಟತಕ್ಕ ಕೆಲಸ ಕೂಡ ಆಗಿಲ್ಲ, ಮತ್ತೆ ಈ ವರ್ಷವೂ ಸಹ ಮಳೆ ಆಗಿ, ನಮ್ಮಲ್ಲಿರತಕ್ಕ ಅನೇಕ ತರಕಾರಿ ಬೆಳೆಗಳಾದ, ಆಲೂಗಡ್ಡೆ, ಟೊಮ್ಯಾಟೋ ಎಲ್ಲಾ ಬೆಳೆಗಳೂ ಕೂಡ ರೋಗ ಬಂದು ಸರ್ವನಾಶವಾಗಿವೆ. ಇದರ ಬಗ್ಗೆ ಮಾನ್ಯ ಮಂತ್ರಿಗಳ ಉತ್ತರದಲ್ಲಿ ಏನನ್ನೂ ಹೇಳಿಲ್ಲ. ಆ ವಿಚಾರವನ್ನೇ ಪ್ರಸ್ತಾಪ ಮಾಡಿಲ್ಲ. ನಮ್ಮ ಕೋಲಾರ ಜಿಲ್ಲೆಯಲ್ಲಿ ಆಗಿರತಕ್ಕ ಆಲೂಗಡ್ಡೆ ಬೆಳೆಯಾಗಲೀ, ಹೋದ ವರ್ಷ ಮನೆಗಳು ಬಿದ್ದುಹೋಗಿರತಕ್ಕಂಥಾದ್ದು; ರಸ್ತೆಗಳು ಹಾಳಾಗಿದೆ, ಕೆರೆಗಳು ಹಾಳಾಗಿದೆ, ಇದರ ಬಗ್ಗೆ ಏನೂ ಕೂಡ ಹೇಳಿಲ್ಲ. ಸರ್ಕಾರ ಈ ಸಮಸ್ಯೆಗಳ ಬಗ್ಗೆ ಏನು ಮಾಡುತ್ತದೆ ಎನ್ನುವುದನ್ನು ದಯವಿಟ್ಟು ತಿಳಿಸಬೇಕು. ಇಲ್ಲಿಂದ ಹೊರಗಡೆ ಹೋಗುವುದಾಗಲೀ ಮತ್ತು ಒಳಗಡೆ ಹೋಗುವುದಾಗಲೀ ನಾನಂತೂ ಮಾಡುವುದಿಲ್ಲ. ಇದರ ಬಗ್ಗೆ ಸರ್ಕಾರ ಏನು ತೀರ್ಮಾನ ಮಾಡುತ್ತದೆ ಎನ್ನುವುದನ್ನು ತಿಳಿಸಬೇಕೆಂದು ನಾನು ವಿನಂತಿಸುತ್ತೇನೆ.

ಉಪಾಧ್ಯಕ್ಷರು:- ಮಂತ್ರಿಗಳು ಹೇಳುತ್ತಾರೆ

ಶ್ರೀ ಎಂ. ರಾಜಶೇಖರಮೂರ್ತಿ:- ಮನೆ ಪೂರ್ತಿ ಕೊಲ್ಯಾಪ್ಸ್ ಆಗಿರುವವರಿಗೆ 5 ಸಾವಿರ ರೂಪಾಯಿ ಪರಿಹಾರ ಕೊಟ್ಟಿದ್ದೇವೆ, ಮೂರು ಸಾವಿರ ರೂಪಾಯಿ ಮೆಟೀರಿಯಲ್ಸ್, 2 ಸಾವಿರ ರೂಪಾಯಿ ಕ್ಯಾಷ್. ಪಾರ್ಷಿಯಲಿ ಕೊಲ್ಯಾಪ್ಸ್ಡ್ ಹೌಸಸ್‌ಗೆ 2950 ರೂಪಾಯಿ ಈ ರೀತಿ ಕೊಟ್ಟಿದ್ದೇವೆ. ಸಂಪೂರ್ಣವಾಗಿ ಮನೆ ಕಟ್ಟಿಸಿಕೊಡಬೇಕೆಂದರೆ, ಹುಡ್ಕೋಸ್ಕೀಮ್ ಪ್ರಕಾರ ಮನೆ ಕಟ್ಟಿಸಿ ಕೊಡಬೇಕೆಂದು ಕೇಂದ್ರ ಸರಕಾರಕ್ಕೆ ಒಂದು ಪ್ರಾಜೆಕ್ಟ್ ತಯಾರು ಮಾಡಿ ಕಳುಹಿಸಿದ್ದೇವೆ. ಅದು ಕೇಂದ್ರ ಸರಕಾರದ ಪರಿಶೀಲನೆಯಲ್ಲಿದೆ ಅದನ್ನು ಅವರು ಒಪ್ಪಿಕೊಳ್ಳುತ್ತಾರೆ. ಅದು ಆದಮೇಲೆ ಮನೆ ಕಟ್ಟಿಸಿಕೊಡಬೇಕಾಗುತ್ತದೆ. ಮಳೆ ಬಂದು ಒಂದೂವರೆ ತಿಂಗಳಾಯಿತು. 50 ಕೋಟಿ ರೂಪಾಯಿ ಖರ್ಚು ಮಾಡಲಾಗಿದೆ. 300 ಕೋಟಿ ಇದುವರೆಗೆ ಖರ್ಚು ಮಾಡಬೇಕೆಂದರೆ ಎಲ್ಲಿ ಆಗುತ್ತದೆ. ನಮ್ಮ ಸ್ನೇಹಿತರಿಗೆ ಬೇಕಾಗಿರುವುದು ಒಂದೇ ಒಂದು, ರೈತರ ಸಾಲ ಮನ್ನಾ ಮಾಡಬೇಕೆಂಬುದು, ರೈತರ ಸಾಲವನ್ನು ಮನ್ನಾ ಮಾಡುತ್ತೇವೆಂದು ಹೇಳಿ ಬಿಟ್ಟರೆ ಇವತ್ತಿನ ದಿವಸ ಇದರ ಬಗೆ ಚರ್ಚೆಯೇ ಬರುವುದಿಲ್ಲ. ಅದು ಒಂದೇ ಒಂದು ಇವರಿಗೆ ಬೇಕಾಗಿರುವುದು. ನಿಮಗೆ ರೈತರ ಬಗ್ಗೆ ಎಷ್ಟು ಕಳಕಳಿ ಇದೆ ನಮಗೂ ಅಷ್ಟೇ ಕಳಕಳಿ ಇದೆ. ನಾವು ಗಲಾಟೆ ಮಾಡಿಕೊಂಡು ಇದೇ ತರಹ ಹೋಗುವುದಾದರೆ ರೈತರಿಗೆ ಅನುಕೂಲವಾಗುವುದಿಲ್ಲ. ನಿಮಗೂ ಮನಸ್ಸಿಗೆ

ಸಮಾಧಾನ ಇರುವುದಿಲ್ಲ, ನಮಗೂ ಇರುವುದಿಲ್ಲ. ಆಕ್ಚ್ಯುಯಲ್ ಆಗಿ ಏನೇನು ಇಷ್ಯೂಸ್ ಹಾಕಿಕೊಳ್ಳಬೇಕು, ವಾಟರ್‌ರೇಟ್ ಮನ್ನಾ ಮಾಡಬೇಕೇ ಬೇಡವೇ, ಇಂಟರೆಸ್ಟ್ ವೇವ್ ಮಾಡಬೇಕೇ ಬೇಡವೇ, ಶಾರ್ಟ್‌ಟರ್ಮ್ ಲೋನ್‌ನ್ನು ಮೀಡಿಯಂ ಟರ್ಮ್‌ಗೆ ಕನ್‌ವರ್ಟ್ ಮಾಡಬೇಕೇ, ಇದಕ್ಕೆ ಸದನದ ಸಮಿತಿ ಬೇಕಾಗುವುದಿಲ್ಲ.

(ಶ್ರೀ ಯಡಿಯೂರಪ್ಪನವರು ವೆಲ್ ಒಳಗಿಂದ ಮಾತನಾಡತೊಡಗಿದರು)

ಉಪಾಧ್ಯಕ್ಷರು:- ಯಡಿಯೂರಪ್ಪನವರೇ ತಮ್ಮ ಸೀಟಿಗೆ ಹೋಗಿ ಮಾತನಾಡಿ.

ಶ್ರೀ ಎಂ. ರಾಜಶೇಖರಮೂರ್ತಿ:- ಕ್ರಾಪಿನದು ಈಗ ಶುರುಮಾಡುತ್ತೇವೆ, ಇನ್‌ಪುಟ್ ಸಬ್ಸಿಡಿ ಕಾಂಪನ್‌ಸೇಷನ್ ಏನು ಕೊಡಬೇಕು ಅದನ್ನು ಕೂಡ ಶುರುಮಾಡುತ್ತೇವೆ. ಇನ್ನೂ ಒಂದು ತಿಂಗಳಲ್ಲಿ ಬೇಕಾದಷ್ಟು ಸಮಸ್ಯೆಗಳು ಪರಿಹಾರವಾಗುತ್ತವೆ. ಒಂದೇ ಸಲ ಮಾಡಬೇಕೆಂದರೆ ಯಾರಿಗೂ ಸಾಧ್ಯವಾಗುವುದಿಲ್ಲ, ಅವರೇ ಈ ಜಾಗದಲ್ಲಿ ಕುಳಿತಿದ್ದರೂ ಇಷ್ಟು ಅಮೌಂಟ್ ಅವರು ಖರ್ಚು ಮಾಡುತ್ತಿರಲಿಲ್ಲ. ಸಮಸ್ಯೆ ಏನಿದೆ, ಅದರ ಮ್ಯಾಗ್ನಿಟ್ಯೂಡ್ ಏನಿದೆ ಅದನ್ನು ಅರ್ಥ ಮಾಡಿಕೊಂಡು ನೀವು ಹೇಳಬೇಕಾಗುತ್ತದೆ. ಸರಕಾರ ಇದರ ಬಗ್ಗೆ ಹಿಂದೆ ಮುಂದೆ ನೋಡುವುದಿಲ್ಲ. ಬೇಕಾದಷ್ಟು ಅಮೌಂಟ್ ಸರಕಾರದ ಟೇಜರಿಯಲ್ಲಿದ್ದರೆ ಎಲ್ಲಾ ಕೆಲಸ ಒಂದೇ ಸಾರಿ ತೆಗೆದುಕೊಳ್ಳಬಹುದಾಗಿತ್ತು. ಪರಿಸ್ಥಿತಿ ಹಾಗಿಲ್ಲ, ಇದಕ್ಕೆ ಖರ್ಚು ಮಾಡುವುದಕ್ಕೆ ಹೋದರೆ ಬಾಕಿ ವರ್ಕ್ಸ್ ಸಫರ್ ಆಗುತ್ತದೆ.

(ಗೊಂದಲ)

ಉಪಾಧ್ಯಕ್ಷರು:- ಈಗ ಇಲ್ಲಿಂದ (ವೆಲ್‌ನಿಂದ) ಏನು ಮಾತನಾಡಿದರೂ ಅದು ರೆಕಾರ್ಡ್‌ಗೆ ಹೋಗುವುದಿಲ್ಲ. ನಥಿಂಗ್ ವಿಲ್ ಗೋಆನ್ ರೆಕಾರ್ಡ್, ಯಾವುದೂ ರೆಕಾರ್ಡ್‌ಗೆ ಹೋಗುವುದಿಲ್ಲ.

(ಗೊಂದಲ)

ಉಪಾಧ್ಯಕ್ಷರು:- ದಯವಿಟ್ಟು ಕುಳಿತುಕೊಳ್ಳಿ, ನಾವು ಅವರನ್ನು ಕರೆದಿದ್ದೇನೆ. ಅವರು ಮಾತನಾಡುತ್ತಿದ್ದಾರೆ.

ಶ್ರೀ ಸಿ. ಬೈರೇಗೌಡ:- ಹೋದ ವರ್ಷ ನಮ್ಮ ಜಿಲ್ಲೆಯಲ್ಲಿ 60 ಸಾವಿರ ಮನೆಗಳು ಬಿದ್ದಿವೆ. ಒಂದೊಂದು ತಾಲ್ಲೂಕಿನಲ್ಲಿ ಬಿಟ್ಟರೆ,..... ಒಂದು ನಿಮಿಷ ತಾಳಿ ಸ್ವಾಮಿ

(ಗೊಂದಲ)

ಉಪಾಧ್ಯಕ್ಷರು:- ಇದೇನು ಇದು, ಇಲ್ಲಿಂದ ಒಬ್ಬರಿಗೊಬ್ಬರಿಗೆ ಈ ರೀತಿ ಮಾತನಾಡಿಕೊಂಡು, ಬೇರೆಯವರು ಮಾತನಾಡುವುದಕ್ಕೆ ಅಡ್ಡಿಪಡಿಸಬಾರದು.

ಶ್ರೀ ಸಿ. ಬೈರೇಗೌಡ:- ಒಂದು ತಾಲ್ಲೂಕಿನಲ್ಲಿ ಬಿಟ್ಟರೆ ಬೇರೆ ತಾಲ್ಲೂಕಿನಲ್ಲಿ ಒಂದು ಮನೆ ಕೂಡ ಆಗಿಲ್ಲ, ಈ ವರ್ಷವೂ ಸಹ ಮಳೆಯಿಂದ ನಮ್ಮ ಜಿಲ್ಲೆಯಲ್ಲಿ ತರಕಾರಿ ಇತ್ಯಾದಿಗಳು ಹಾಳಾಗಿ, ನೂರಾರು ಕೋಟಿ ರೂಪಾಯಿಗಳಷ್ಟು ಬೆಳೆ ಹಾಳಾಗಿದೆ. ಅಲ್ಲಿಗೆ ಯಾವೊಬ್ಬ ಅಧಿಕಾರಿ ಹೋಗಿ ಸರಕಾರಕ್ಕೆ ವರದಿ ಕಳುಹಿಸಿರತಕ್ಕಂಥಾದ್ದು ಆಗಿಲ್ಲ. ಏನೂ ಕೂಡ ಆಗಿಲ್ಲ. ನೂರಾರು ಕೋಟಿ ರೂಪಾಯಿ ಹಾಳಾಗಿದೆ. ಇದರ ಬಗ್ಗೆ ಪ್ರಶ್ನೆ ಕೇಳಿದೆ ಏನೂ ಉತ್ತರ ಹೇಳಲಿಲ್ಲ. ನಾನು ಒಂದು ಸಲಹೆ ಸರಕಾರಕ್ಕೆ ಕೊಡುತ್ತೇನೆ.

ಉಪಾಧ್ಯಕ್ಷರು:- ಏನು ಉತ್ತರ ಹೇಳಬೇಕು ಅದನ್ನು ಹೇಳಿದ್ದಾರೆ.

ಶ್ರೀ ಸಿ. ಬೈರೇಗೌಡ:- ಅವರು ನನಗೆ ಹೇಳಲಿಲ್ಲ. ಅವರು ಉತ್ತರ ಕೊಟ್ಟಿದ್ದುದು

ಮಾನ್ಯ ಯಡಿಯೂರಪ್ಪನವರಿಗೆ, ನನಗೆ ಕೊಡಲಿಲ್ಲ. ಇನ್ನೊಂದು ಸಲಹೆ ಕೊಟ್ಟಿದ್ದೆ, ಒನ್ ಟೈಮ್ ಆಪರೇಷನ್ ಆಗಿ ರೈತರು ಮಾಡಿರತಕ್ಕಂಥ ಸಾಲಕ್ಕೆ ಬಡ್ಡಿ, ಸುಸ್ತಿ ಬಡ್ಡಿ ವಜಾ ಮಾಡಿ, ಇಷ್ಟಾದರೂ ಭಾರ ಇಳಿಸತಕ್ಕ ಕೆಲಸ ಮಾಡಿ ಎಂಬ ಮಾತನ್ನು ಹೇಳಿದೆ. ಅದಕ್ಕೆ ಉತ್ತರ ಕೊಡಲಿಲ್ಲ. ಇಲ್ಲಿ ಜೋರಾಗಿ ಗಲಾಟೆ ಮಾಡಿದರೆ ಉತ್ತರ ಸಿಗುತ್ತದೆ ಎಂದು ಅನ್ನಿಸುತ್ತದೆ.

ಉಪಾಧ್ಯಕ್ಷರು:- ಸರಕಾರದ ಕಡೆಯಿಂದ ಏನಾದರೂ ಉತ್ತರ ಹೇಳುವುದು ಇದೆಯೇ?

ಶ್ರೀ ಟಿ.ಎಂ. ಮಂಜುನಾಥ್:- ನನ್ನದೊಂದು ಮಾತಿದೆ, ನಮ್ಮ ರಾಷ್ಟ್ರದಲ್ಲಿ ದುರ್ದೈವದಿಂದ....... ಸ್ವಲ್ಪ ಇರಿ, ನಮ್ಮ ಮಾತಿಗೆ ಏತಕ್ಕೆ ಅಡ್ಡಿ ಬರುತ್ತೀರಿ?

(ಗೊಂದಲ)

(ವೆಲ್‌ನಿಂದ ಭಾರತೀಯ ಜನತಾ ಪಕ್ಷದ ಸದಸ್ಯರು, ರೈತವಿರೋಧಿ ಸರಕಾರಕ್ಕೆ ಧಿಕ್ಕಾರ ಎಂದು ಘೋಷಣೆಗಳನ್ನು ಕೂಗಲು ಪ್ರಾರಂಭಿಸಿದರು)

6.15 ಪಿಎಂ

ಉಪಾಧ್ಯಕ್ಷರು:- ತಾವು ಅಲ್ಲಿಂದ ಹಾಗೆ ಕೂಗಬಾರದು. ಶ್ರೀ ಯಡಿಯೂರಪ್ಪನವರೇ ತಾವು ಮಾತನಾಡುವುದು ಏನಾದರೂ ಇದ್ದರೆ ತಮ್ಮ ಜಾಗಕ್ಕೆ ಹೋಗಿ ಮಾತನಾಡಬಹುದು.

(ಗೊಂದಲ)

ಶ್ರೀ ಎಂ. ವೀರಪ್ಪಮೊಯಿಲಿ:- ಮಾನ್ಯ ಉಪಾಧ್ಯಕ್ಷರೇ....

(ಗೊಂದಲ)

ಉಪಾಧ್ಯಕ್ಷರು:- ತಾವು ಅಲ್ಲಿಂದ ಮಾತನಾಡಬಾರದು. ತಮ್ಮ ಜಾಗಕ್ಕೆ ಹೋಗಿ ಮಾತನಾಡಿ ನಾನು ಬೇಡವೆಂದು ಹೇಳುವುದಿಲ್ಲ ತಾವು ಕುಳಿತುಕೊಳ್ಳಿ. ತಮ್ಮ ಲೀಡರ್ ಎದ್ದು ನಿಂತಿದ್ದಾರೆ. ಮಾನ್ಯ ಮುಖ್ಯಮಂತ್ರಿಗಳು ಏನೋ ಹೇಳುತ್ತಾರೆ....

ಶ್ರೀ ಸಿ. ಬೈರೇಗೌಡ:- ದಯಮಾಡಿ ನಾನು ಕೇಳಿರತಕ್ಕಂಥ ಪ್ರಶ್ನೆಗಳಿಗೆ ಉತ್ತರ ಕೊಡಿಸಿ....

ಶ್ರೀ ಎಂ. ವೀರಪ್ಪಮೊಯಿಲಿ:- ಮಾನ್ಯ ಉಪಾಧ್ಯಕ್ಷರೇ ಮಾನ್ಯ ಕಂದಾಯ ಸಚಿವರು ವಿರೋಧಪಕ್ಷದ ನಾಯಕರು ಹಾಗೂ ಮತ್ತಿತರರು ಎತ್ತಿದಂತಹ ಪ್ರಶ್ನೆಗಳಿಗೆ ಉತ್ತರ ಕೊಟ್ಟಿದ್ದಾರೆ. ಆ ಉತ್ತರದಿಂದ ಅವರಿಗೆ ಸಮಾಧಾನವಾಗದೇ ಇರಬಹುದು ಆದರೆ ಸರ್ಕಾರದ ನೀತಿ ಏನು ಇದೆ ಯಾವ ರೀತಿಯಲ್ಲಿ ಬಹುಶಃ ಇದನ್ನು ಪರಿಹಾರ ಮಾಡಬಹುದು ಎನ್ನುವುದನ್ನು ಪರಾಂಬರಿಸಿ ನೋಡಬೇಕು. ರೈತರಿಗೆ ಇಷ್ಟು ಅವರ ಕಷ್ಟಕ್ಕೆ ಸ್ಪಂದಿಸಿ ಇಷ್ಟು ಗಾತ್ರದಲ್ಲಿ ಸಹಾಯ ಮಾಡಿದ್ದುದು ಇತಿಹಾಸದಲ್ಲೇ ಇಲ್ಲ. ಎಷ್ಟು ಕೊಟ್ಟಿದ್ದೇವೆ. ಎಲ್ಲಾದರಲ್ಲೂ ಕೂಡ. 8 ಸಾವಿರ ಪರಿಹಾರ ಇದ್ದದ್ದು 40 ಸಾವಿರಕ್ಕೆ ಒಮ್ಮೆಲೆ ಏರಿಸಿದ್ದೇವೆ. ಸ್ವಲ್ಪ ಆಲೋಚನೆ ಮಾಡಿ. ಹೌದು ರೈತರಿಗೆ ಎಷ್ಟು ಸಹಾಯ ಮಾಡಿದರೂ ಅದು ಕಡಿಮೆ. ನಾನು ಒಪ್ಪುತ್ತೇನೆ, ಇಲ್ಲ ಎಂದು ಹೇಳುವುದಿಲ್ಲ. ಏಕೆಂದರೆ ನಮ್ಮ ರೈತ ಜನಾಂಗ ಆ ಪರಿಸ್ಥಿತಿಯಲ್ಲಿ ಇದೆ. ಎಷ್ಟು ಸಹಾಯ ಮಾಡಿದರೂ ಇನ್ನು ಸಹಾಯ ಮಾಡಬೇಕು ಎನ್ನುವುದನ್ನು ನಾನು ಒಪ್ಪುತ್ತೇನೆ. ಆದರೆ ನಮ್ಮ ಸರ್ಕಾರ ಬಂದ ಮೇಲೆ ನಾವು ಇಷ್ಟು ಜಾಗ್ರತೆ ತಕ್ಷಣ ಅಲ್ಲಿಗೆ ಹೋಗಿ ಸಹಾಯ ಮಾಡಿ ಎಷ್ಟು ಪ್ರಮಾಣದಲ್ಲಿ ಮಾಡಿದ್ದೇವೆ ಅಂತ ಹೇಳಿದರೆ ನೋಡಿ ಎಷ್ಟು ಗಾತ್ರದಲ್ಲಿ ಮಾಡಿದ್ದೇವೆ ನೋಡಿ. ಎಷ್ಟು ಮಾಡಿದರೂ ಸಾಕಾಗುವುದಿಲ್ಲ. ಏಕೆಂದರೆ ಇನ್ನು ಕೆಲವು ವಿಚಾರಗಳು ಉಳಿದಿವೆ. ನಾವು ಮಾಡತಕ್ಕಂಥ ಕಾರ್ಯಕ್ರಮ ಇಲ್ಲಿಗೆ ಮುಗಿದಿಲ್ಲ. ನಾನು ಇದರ ಬಗ್ಗೆ ಪರ್ಯಾಲೋಚನೆ ಮಾಡಿದ್ದೇನೆ. ಆ ಭಾಗದ ರೈತರಿಗೆ ಕಷ್ಟ ಇದೆ. ಅವನು ಬೆಳೆ ತೆಗೆಯುವುದಕ್ಕೆ ಬೇಕಾದಂತಹ

ಮಾನ್ಯ ಯಡಿಯೂರಪ್ಪನವರಿಗೆ, ನನಗೆ ಕೊಡಲಿಲ್ಲ. ಇನ್ನೊಂದು ಸಲಹೆ ಕೊಟ್ಟಿದ್ದೆ, ಒನ್ ಟೈಮ್ ಅಪರೇಷನ್ ಆಗಿ ರೈತರು ಮಾಡಿರತಕ್ಕಂಥ ಸಾಲಕ್ಕೆ ಬಡ್ಡಿ, ಸುಸ್ತಿ ಬಡ್ಡಿ ವಜಾ ಮಾಡಿ, ಇಷ್ಟಾದರೂ ಭಾರ ಇಳಿಸತಕ್ಕ ಕೆಲಸ ಮಾಡಿ ಎಂಬ ಮಾತನ್ನು ಹೇಳಿದೆ. ಅದಕ್ಕೆ ಉತ್ತರ ಕೊಡಲಿಲ್ಲ. ಇಲ್ಲಿ ಜೋರಾಗಿ ಗಲಾಟೆ ಮಾಡಿದರೆ ಉತ್ತರ ಸಿಗುತ್ತದೆ ಎಂದು ಅನ್ನಿಸುತ್ತದೆ.

ಉಪಾಧ್ಯಕ್ಷರು:- ಸರಕಾರದ ಕಡೆಯಿಂದ ಏನಾದರೂ ಉತ್ತರ ಹೇಳುವುದು ಇದೆಯೇ?

ಶ್ರೀ ಟಿ.ಎಂ. ಮಂಜುನಾಥ್:- ನನ್ನದೊಂದು ಮಾತಿದೆ, ನಮ್ಮ ರಾಷ್ಟ್ರದಲ್ಲಿ ದುರ್ದೈವದಿಂದ....... ಸ್ವಲ್ಪ ಇರಿ, ನಮ್ಮ ಮಾತಿಗೆ ಏತಕ್ಕೆ ಅಡ್ಡಿ ಬರುತ್ತೀರಿ?

(ಗೊಂದಲ)

(ವೆಲ್‌ನಿಂದ ಭಾರತೀಯ ಜನತಾ ಪಕ್ಷದ ಸದಸ್ಯರು, ರೈತವಿರೋಧಿ ಸರಕಾರಕ್ಕೆ ಧಿಕ್ಕಾರ ಎಂದು ಘೋಷಣೆಗಳನ್ನು ಕೂಗಲು ಪ್ರಾರಂಭಿಸಿದರು)

6.15 ಪಿಎಂ

ಉಪಾಧ್ಯಕ್ಷರು:- ತಾವು ಅಲ್ಲಿಂದ ಹಾಗೆ ಕೂಗಬಾರದು. ಶ್ರೀ ಯಡಿಯೂರಪ್ಪನವರೇ ತಾವು ಮಾತನಾಡುವುದು ಏನಾದರೂ ಇದ್ದರೆ ತಮ್ಮ ಜಾಗಕ್ಕೆ ಹೋಗಿ ಮಾತನಾಡಬಹುದು.

(ಗೊಂದಲ)

ಶ್ರೀ ಎಂ. ವೀರಪ್ಪಮೊಯಿಲಿ:- ಮಾನ್ಯ ಉಪಾಧ್ಯಕ್ಷರೇ....

(ಗೊಂದಲ)

ಉಪಾಧ್ಯಕ್ಷರು:- ತಾವು ಅಲ್ಲಿಂದ ಮಾತನಾಡಬಾರದು. ತಮ್ಮ ಜಾಗಕ್ಕೆ ಹೋಗಿ ಮಾತನಾಡಿ ನಾನು ಬೇಡವೆಂದು ಹೇಳುವುದಿಲ್ಲ ತಾವು ಕುಳಿತುಕೊಳ್ಳಿ. ತಮ್ಮ ಲೀಡರ್ ಎದ್ದು ನಿಂತಿದ್ದಾರೆ. ಮಾನ್ಯ ಮುಖ್ಯಮಂತ್ರಿಗಳು ಏನೋ ಹೇಳುತ್ತಾರೆ....

ಶ್ರೀ ಸಿ. ಬೈರೇಗೌಡ:- ದಯಮಾಡಿ ನಾನು ಕೇಳಿರತಕ್ಕಂಥ ಪ್ರಶ್ನೆಗಳಿಗೆ ಉತ್ತರ ಕೊಡಿಸಿ....

ಶ್ರೀ ಎಂ. ವೀರಪ್ಪಮೊಯಿಲಿ:- ಮಾನ್ಯ ಉಪಾಧ್ಯಕ್ಷರೇ ಮಾನ್ಯ ಕಂದಾಯ ಸಚಿವರು ವಿರೋಧಪಕ್ಷದ ನಾಯಕರು ಹಾಗೂ ಮತ್ತಿತರರು ಎತ್ತಿದಂತಹ ಪ್ರಶ್ನೆಗಳಿಗೆ ಉತ್ತರ ಕೊಟ್ಟಿದ್ದಾರೆ. ಆ ಉತ್ತರದಿಂದ ಅವರಿಗೆ ಸಮಾಧಾನವಾಗದೇ ಇರಬಹುದು ಆದರೆ ಸರ್ಕಾರದ ನೀತಿ ಏನು ಇದೆ ಯಾವ ರೀತಿಯಲ್ಲಿ ಬಹುಶಃ ಇದನ್ನು ಪರಿಹಾರ ಮಾಡಬಹುದು ಎನ್ನುವುದನ್ನು ಪರಾಂಬರಿಸಿ ನೋಡಬೇಕು. ರೈತರಿಗೆ ಇಷ್ಟು ಅವರ ಕಷ್ಟಕ್ಕೆ ಸ್ಪಂದಿಸಿ ಇಷ್ಟು ಗಾತ್ರದಲ್ಲಿ ಸಹಾಯ ಮಾಡಿದ್ದುದು ಇತಿಹಾಸದಲ್ಲೇ ಇಲ್ಲ. ಎಷ್ಟು ಕೊಟ್ಟಿದ್ದೇವೆ. ಎಲ್ಲಾದರಲ್ಲೂ ಕೂಡ. 8 ಸಾವಿರ ಪರಿಹಾರ ಇದ್ದದ್ದು 40 ಸಾವಿರಕ್ಕೆ ಒಮ್ಮೆಲೆ ಏರಿಸಿದ್ದೇವೆ. ಸ್ವಲ್ಪ ಆಲೋಚನೆ ಮಾಡಿ. ಹೌದು ರೈತರಿಗೆ ಎಷ್ಟು ಸಹಾಯ ಮಾಡಿದರೂ ಅದು ಕಡಿಮೆ. ನಾನು ಒಪ್ಪುತ್ತೇನೆ, ಇಲ್ಲ ಎಂದು ಹೇಳುವುದಿಲ್ಲ. ಏಕೆಂದರೆ ನಮ್ಮ ರೈತ ಜನಾಂಗ ಆ ಪರಿಸ್ಥಿತಿಯಲ್ಲಿ ಇದೆ. ಎಷ್ಟು ಸಹಾಯ ಮಾಡಿದರೂ ಇನ್ನು ಸಹಾಯ ಮಾಡಬೇಕು ಎನ್ನುವುದನ್ನು ನಾನು ಒಪ್ಪುತ್ತೇನೆ. ಆದರೆ ನಮ್ಮ ಸರ್ಕಾರ ಬಂದ ಮೇಲೆ ನಾವು ಇಷ್ಟು ಜಾಗ್ರತೆ ತಕ್ಷಣ ಅಲ್ಲಿಗೆ ಹೋಗಿ ಸಹಾಯ ಮಾಡಿ ಎಷ್ಟು ಪ್ರಮಾಣದಲ್ಲಿ ಮಾಡಿದ್ದೇವೆ ಅಂತ ಹೇಳಿದರೆ ನೋಡಿ ಎಷ್ಟು ಗಾತ್ರದಲ್ಲಿ ಮಾಡಿದ್ದೇವೆ ನೋಡಿ. ಎಷ್ಟು ಮಾಡಿದರೂ ಸಾಕಾಗುವುದಿಲ್ಲ. ಏಕೆಂದರೆ ಇನ್ನು ಕೆಲವು ವಿಚಾರಗಳು ಉಳಿದಿವೆ. ನಾವು ಮಾಡತಕ್ಕಂಥ ಕಾರ್ಯಕ್ರಮ ಇಲ್ಲಿಗೆ ಮುಗಿದಿಲ್ಲ. ನಾನು ಇದರ ಬಗ್ಗೆ ಪರ್ಯಾಲೋಚನೆ ಮಾಡಿದ್ದೇನೆ. ಆ ಭಾಗದ ರೈತರಿಗೆ ಕಷ್ಟ ಇದೆ. ಅವನು ಬೆಳೆ ತೆಗೆಯುವುದಕ್ಕೆ ಬೇಕಾದಂತಹ

ಮಾಡಲಿಕ್ಕೆ ಹೋಗುತ್ತೀರೆಂದು ಸ್ವಲ್ಪ ತಮ್ಮ ಮೇಲೆ ಅನುಕಂಪ ಅಷ್ಟೇ. ಈಗ ನಮ್ಮ ರೋಲ್ ನಿಮ್ಮ ರೋಲ್ ಸ್ವಲ್ಪ ತಿರುಗುಮುರುಗು ಆಗಿದೆ. ನಾವು ಪ್ರಾಮಾಣಿಕವಾಗಿ ಏನಾದರೂ ಮಾಡೋಣವೆಂದು ಹೋದರೆ ತಾವು ಘೋಷಣೆಯಲ್ಲಿ ಹೊರಟ್ಟಿದ್ದೀರಿ. ಇದು ನಿಮ್ಮ ಪ್ರಾಥಮಿಕ ಹಂತ. ಫಸ್ಟ್ ಫೇಸ್. ಅದು ಕೆಲವು ಸಾರಿ ಹೊಸ ಕ್ಷೇತ್ರಕ್ಕೆ ಪ್ರವೇಶ ಮಾಡಿದಾಗ ಆಗುತ್ತವೆ.

ಶ್ರೀ ವಾಟಾಳ್ ನಾಗರಾಜ್:– ಉತ್ತರ ಕೊಡುವುದರಲ್ಲಿ ನೀವು ಬಹಳ ಪರಿಣಿತರು.

ಶ್ರೀ ಎಂ. ವೀರಪ್ಪಮೊಯಿಲಿ:– ಅದರಲ್ಲಿ ನಮ್ಮ ನಿಮ್ಮ ಅಭಿಪ್ರಾಯ ಒಂದೇ ಇದೆ. ಅದರಲ್ಲಿ ಏನೂ ವ್ಯತ್ಯಾಸವಿಲ್ಲ. ನಮ್ಮ ಯಕ್ಷಗಾನದಲ್ಲಿ ಹೊಸ ವೇಶ ಬರುವುದೆಂದು ಇದೆ. ನಾವೆಲ್ಲಾ ನೋಡಿದ್ದೇವೆ. ಬೇಕಾದರೆ ಒಮ್ಮೆ ಕರೆದುಕೊಂಡು ಹೋಗುತ್ತೇನೆ. ಅದು ರುಕ್ಮಯ್ಯ ಪೂಜಾರಿಯವರಿಗೆ ಗೊತ್ತಿದೆ. ಹೊಸ ವೇಶ ಬರುವುದೆಂದರೆ, ಅವನು ಹೊಸ ವೇಶ ಹಾಕುತ್ತಾನೆ. ಅವ ಮತ್ತೆ 10 ದಿವಸ ಏಳುವುದೇ ಇಲ್ಲ. ಆ ಪರಿಸ್ಥಿತಿ ಮಾಡಲಿಕ್ಕೆ ಹೋಗಬೇಡಿ ನೀವು. ಹೊಸ ವೇಶ, ಹೊಸ ಹುರುಪು, ಎಲ್ಲಾ ಒಟ್ಟಾರೆ ಮಾಡಿ ಅವನು ಏಳುವುದೇ ಇಲ್ಲ. ನಿಮ್ಮ ಗತಿ ಅದು ಆಗಬಾರದು. ನಮ್ಮ ಇಚ್ಚೆ ಎಂದರೆ ಇದರ ಬಗ್ಗೆ ನಾವೆಲ್ಲಾ ಕುಳಿತು ಮಾತನಾಡೋಣ. We had a discussion in the morning. ಇಂಥ ಕ್ಷೇತ್ರದಲ್ಲಿ ರೈತರಿಗೆ ಸಹಾಯ ಮಾಡಬೇಕೆಂದು ನಾವು ಪಟ್ಟಿ ಹಾಕ್ಕಿದ್ದೇವೆ. ಅದನ್ನು ನಾವೂ ನೋಡಿದ್ದೇವೆ. ನೀವು ನೋಡಿದ್ದೀರಿ. ಸಚಿವರುಗಳು ಗದ್ದೆ ಗದ್ದೆಗೆ ಹೋಗಿ ನೋಡಿದ್ದಾರೆ. ನಮ್ಮ ಎಲ್ಲಾ ಸಚಿವರೂ ಕೂಡ ಆಯಾ ಜಿಲ್ಲೆಗೆ ಹೋಗಿ ನೋಡಿದ್ದಾರೆ. ನಾವು ಸಾಕಷ್ಟು ಅದರ ಬಗ್ಗೆ ಕೆಲಸ ಮಾಡಬೇಕು. ಇದು ಬರೀ ತೋರಿಕೆಗೆ ಆಗಬಾರದು. ನೆರೆ ಬಂತು, ನೆರೆ ಬಂದ ಹಾಗೆ ಮಂತ್ರಿಗಳು ಘೋಷಣೆ ಮಾಡಿಕೊಂಡು ಹೋಗುತಕ್ಕಂಥ ಪರಿಸ್ಥಿತಿ ಆಗಬಾರದು. ಎರಡು ವಿಚಾರವನ್ನು ಅವರು ಹೇಳಿದರು. ವಿಶ್ವಬ್ಯಾಂಕಿಗೆ ಪ್ರಾಜೆಕ್ಟ್ ಕಳುಹಿಸಿದರೆ ನಾವು ಅದನ್ನು ಅಲ್ಲಿಗೆ ಕಳುಹಿಸುತ್ತೇವೆಂದು ಪ್ರಧಾನ ಮಂತ್ರಿಯವರು ಹೇಳಿದ್ದಾರೆ. ಈಗ ಅದನ್ನು ತಯಾರು ಮಾಡಲಾಗುತ್ತಿದೆ. ಮತ್ತೊಂದು ಶಾಶ್ವತವಾದ ಮನೆಗಳನ್ನು ಕಟ್ಟಿಸಿಕೊಡಬೇಕು. ಅದಕ್ಕೆ ಕೇಂದ್ರ ಸರ್ಕಾರ ಹುಡ್ಕೋ ಮುಖಾಂತರ ಹಣ ಕೊಡಿಸುತ್ತೇವೆಂದು ಹೇಳಿದೆ. ಏಕೆಂದರೆ, ಯಾವ ನೆರೆ, ಗಾಳಿ ಬಂದರೂ ಕೂಡ ಅಲುಗಾಡಬಾರದು. ಆ ರೀತಿ ಭದ್ರವಾಗಿರತಕ್ಕಂಥ ಮನೆಗಳನ್ನು ಕಟ್ಟಿಸುತ್ತೇವೆ.

ಶ್ರೀ ವಾಟಾಳ್ ನಾಗರಾಜ್:– 15 ಸಾವಿರಕ್ಕೆ ಇನ್ನೆಂಥ ಮನೆ ಕಟ್ಟುವುದಕ್ಕೆ ಸಾಧ್ಯವಾಗುತ್ತದೆ?

ಶ್ರೀ ಎಂ. ವೀರಪ್ಪಮೊಯಿಲಿ:– 15 ಸಾವಿರವಲ್ಲ. ನಿಜವಾಗಿ ಗಟ್ಟಿಮುಟ್ಟಾದ ಮನೆ. ಅದು 20 ಆಗಬಹುದು, 25 ಆಗಬಹುದು. We don't mind. ಅದಕ್ಕೆ ಇವತ್ತು ನಾವು ಪ್ರಾಜೆಕ್ಟ್ ರಿಪೋರ್ಟ್ ತಯಾರು ಮಾಡುತ್ತಿದ್ದೇವೆ. ಇನ್ನು ಕೆಲವೇ ದಿವಸಗಳಲ್ಲಿ ಅದು ಆಗಿ ಅದನ್ನು ಕೇಂದ್ರ ಸರ್ಕಾರಕ್ಕೆ ಕಳುಹಿಸುತ್ತೇವೆ. ಶಾಶ್ವತವಾದಂಥ ಮನೆ ಆಗುತ್ತದೆ. ಇನ್ನು ಉಳಿಯುವಂಥದ್ದು, ಬೆಳೆ ತೆಗೆಯುವಂಥಾದ್ದು. ಈಗ ಸುಮ್ಮನೆ ನಾನು ಎದ್ದು ಎಲ್ಲಾ ಮಾಡುತ್ತೇನೆಂದು ಹೇಳಿ ಏನೂ ಮಾಡದೇ ಇದ್ದರೆ ಏನು ಸಾರ್ಥಕವಾಯಿತು ಯಡಿಯೂರಪ್ಪನವರೆ? ಏನು ಮಾಡುತ್ತೇವೆಂದು ನಿಷ್ಕರ್ಷೆಯಾಗಿ ನಿರ್ಧಿಷ್ಟವಾಗಿ ಹೇಳಬೇಕು ಮಾತ್ರ ಅಲ್ಲ, ನಾಳೆಯಿಂದ ಮಾಡಿ ತೋರಿಸುತ್ತೇನೆ. We believe in that. ಇವತ್ತು ಮಾಡಿ, ಎರಡು ವರ್ಷ ಆದ ಮೇಲೆ ಏನೂ ಮಾಡದಿದ್ದರೆ, ಒಮ್ಮೆ ಸಂತೋಷವಾಗುತ್ತದೆ. ಎಲ್ಲಾ ಗಲಭೆಯಾದ ಮೇಲೆ ಜುಡಿಷಿಯಲ್ ಎನ್‌ಕ್ವೈಯರಿ ಮಾಡುತ್ತೇವೆಂದರೆ ಅದಕ್ಕೆ ನೀವೂ ಚಪ್ಪಾಳೆ ಹೊಡೆಯುತ್ತೀರಿ, ನಾವು ಚಪ್ಪಾಳೆ ಹೊಡೆಯುತ್ತೇವೆ. ನಿಜವಾಗಿ ಅದರಿಂದ ಆಗುವುದೇನೂ ಇಲ್ಲ. ಈ ತರಹ ಆಗಬಾರದು. ನಿಜವಾದಂಥ, ವಾಸ್ತವಿಕವಾದಂಥ, ಪರಿಣಾಮಕಾರಿಯಾದಂಥ ಪರಿಹಾರ ನಾವು ಕೊಡುತ್ತೇವೆ, ಅದರ ಬಗ್ಗೆ ಚರ್ಚೆ ಮಾಡುವಾಗ ತಮ್ಮನ್ನೂ ಕರೆದು ಮಾತನಾಡುತ್ತೇವೆ. ಆಗ ಮನೆಗಳನ್ನು ಕಟ್ಟಿಕೊಡುತ್ತೇವೆ ಎಂದು ನಾವು ಹೇಳಿದ್ದೇವೆ. ಆದರೆ ಕಟ್ಟಿಕೊಡಲಿಲ್ಲ. ಹೌಸಿಂಗ್ ಬೋರ್ಡ್‌ನವರಿಗೆ ಆ

ಜವಾಬ್ದಾರಿಯನ್ನು ನಾವು ಕೊಟ್ಟಿದ್ದೆವು. ಆಶ್ರಯ ಯೋಜನೆಯಲ್ಲಿ ಮಾಡಿ ಎಂದು ಹೇಳಿದ್ದರೂ ಅದು ಆಗಲಿಲ್ಲ. ಅದರ ವಿಫಲತೆಯನ್ನು ನಾವು ಒಪ್ಪುತ್ತೇವೆ. ನಾವು ಮೊನ್ನೆ ಅದರ ಬಗ್ಗೆ ಸಂಪೂರ್ಣವಾಗಿ ರಿವ್ಯೂಮಾಡಿದ್ದೇವೆ. ಎಲ್ಲಿ ಮನೆ ಕಟ್ಟಿ ಆಗಲಿಲ್ಲ, ಅಲ್ಲಿ ಹಣವನ್ನು ಬಿಡುಗಡೆ ಮಾಡಿ, 1991ನೇ ಇಸವಿಯಲ್ಲಿ ಆದಂಥ ಮನೆಗಳನ್ನು ಕಟ್ಟಿ ಕೊಡತಕ್ಕಂಥ ವ್ಯವಸ್ಥೆಯನ್ನು ಡೆಪ್ಯೂಟಿ ಕಮೀಶನರ್ ಅವರ ಜವಾಬ್ದಾರಿಗೆ ವಹಿಸಿ ಅದನ್ನು ನಾವು ಮಾಡುತ್ತಾ ಇದ್ದೇವೆ. ಹೇಳಿದ್ದು ಮಾತ್ರ ಮಾಡಲಿಕ್ಕೆ ಆಗ ಆಗಲಿಲ್ಲ ಎನ್ನುವ ಮಾತನ್ನು ನಾನು ಒಪ್ಪುತ್ತೇನೆ. ನಾನಾ ಕಾರಣಗಳಿಗಾಗಿ ಮನೆ ಕಟ್ಟಿ ಕೊಡುವ ಕೆಲಸ, ಕೋಲಾರ, ತುಮಕೂರು ಬೆಂಗಳೂರು ಗ್ರಾಮಾಂತರ ಜಿಲ್ಲೆಯಲ್ಲಿಯೂ ಆಗಲಿಲ್ಲ. ಹಾಗೆಯೇ ನಾವೇನು ವಿಶ್ವಬ್ಯಾಂಕ್‌ನ ಯೋಜನೆಗಳು ಎಂದು ಹೇಳಿದ್ದೇವೆ, ಕೆರೆ ಕಟ್ಟಿ ಕೊಡತಕ್ಕಂಥಾದ್ದು, ಇಂಥ ಕೆಲಸಗಳನ್ನು ಈಗ ತಾತ್ಕಾಲಿಕವಾಗಿ ಮಾಡಿದರೂ ಕೂಡ ಅದನ್ನು ಜವಾಬ್ದಾರಿಯಿಂದ ಮಾಡುತ್ತೇವೆ. ಅದಕ್ಕೆ ಹಣವನ್ನು ರಿಲೀಸ್ ಮಾಡುತ್ತೇವೆ. ಆದರೆ ಅದು ಶಾಶ್ವತವಾಗಿ ಇರಬೇಕು. ನಮ್ಮ ಆಲೋಚನೆ ಇರುವುದು ಕೇವಲ ಮೊನ್ನೆ ಬಂದಂಥ ಪ್ರವಾಹದ ಬಗ್ಗೆ ಅಲ್ಲ. ಎಲ್ಲಿ ಪ್ರವಾಹ ಬಂದಿದೆ, ಎಲ್ಲಿ ಪ್ರವಾಹದಿಂದ ಬಾಧಿತವಾಗಿ ತೊಂದರೆಯಾಗುತ್ತದೆ, ಇಂಥ ಎಲ್ಲಾ ಜಾಗಗಳಲ್ಲಿಯೂ ಕೂಡ ಈ ವಿಶ್ವಬ್ಯಾಂಕ್‌ನ ಪ್ರಾಜೆಕ್ಟ್‌ನ್ನು ನಾವು ಕೊಡುತ್ತಾ ಇದ್ದೇವೆ. ಇದು ನಮ್ಮ ಉದ್ದೇಶವಾಗಿದೆ. ಇದನ್ನು ನಾವು ಮಾಡುತ್ತೇವೆ. ಈ ಸಮಸ್ಯೆಗಳನ್ನು ಪರಿಹಾರ ಮಾಡತಕ್ಕಂಥ ದೃಷ್ಟಿಯಲ್ಲಿ ನಾವು ಕೆಲಸ ಮಾಡುತ್ತೇವೆ. ಹುಡ್ಕೋ ಕೇಂದ್ರದಿಂದ ಬರತಕ್ಕಂಥ ಒಂದು ಪ್ರಾಜೆಕ್ಟ್. ನೆರೆಹಾವಳಿಯಿಂದ ಆದಂಥ ಹಾನಿ ಅಥವಾ ನೆರೆಹಾವಳಿಗೆ ತುತ್ತಾದಂಥ ಪ್ರದೇಶಗಳು ಏನಿವೆ, ಅದರ ಬಗ್ಗೆ ಯೋಜನೆಗಳು, ಅದು ಕೆರೆ ಕಟ್ಟುವುದಕ್ಕೆ ಇರಬಹುದು, ಶಾಶ್ವತವಾದಂಥ ಕಾಮಗಾರಿಗಳಿಗೆ ಇನ್‌ಫ್ರಾಸ್ಟ್ರಕ್ಚರ್ ಮಾಡತಕ್ಕಂಥ ವಿಚಾರ ಇರಬಹುದು, ಅದು ರಿಪೋರ್ಟ್ ಆದಮೇಲೆ ಬೇಕಾದರೆ ಆ ಪ್ರದೇಶದ ಶಾಸಕರನ್ನು ಕರೆದು ತಮ್ಮನ್ನೂ ಕೂಡ ಕರೆದು ಮಾತುಕತೆ ಮಾಡುತ್ತೇನೆ. ಇನ್ನು ನೆರೆ ಪ್ರದೇಶದಲ್ಲಿ ಬಂದಂಥ ಬಡ್ಡಿ ವಿಚಾರ ಏನಿದೆ, ಸಾಲದ ವಿಚಾರ ಏನಿದೆ, ಗೊಬ್ಬರದ ವಿಚಾರ ಏನಿದೆ, ಬೆಳೆ ತೆಗೆಯಲಿಕ್ಕೆ ಅನುಕೂಲವಾದಂಥ ಬೀಜದ ವಿಚಾರ ಏನಿದೆ, ಅವುಗಳಿಗಾಗಿ ವಿಶೇಷವಾದಂಥ ಯೋಜನೆಗಳನ್ನು ಮಾಡುತ್ತಾ ಇದ್ದೇವೆ. ತಮ್ಮ ಜೊತೆಗೆ ಮಾತನಾಡುತ್ತೇವೆ, ಅದು ಆಗತಕ್ಕಂಥ ಸಮಯದ ಒಳಗಡೆ ಈ ಬಗ್ಗೆ ನಾವು ಕಾರ್ಯಕ್ರಮವನ್ನು ಘೋಷಣೆ ಮಾಡುತ್ತೇವೆ.

ಉಪಾಧ್ಯಕ್ಷಿಣಿಯವರು:- ಈಗ ಈ ವಿಷಯವನ್ನು ಮುಗಿಸಬೇಕಾಗುತ್ತದೆ. ಈ ದಿನದ ಅಜೆಂಡಾದಲ್ಲಿ

ಶ್ರೀ ಸಿ. ಬೈರೇಗೌಡ:- ನಮ್ಮಲ್ಲಿ ಆಲೂಗಡ್ಡೆ ಹೋಗಿದೆ, ತರಕಾರಿ ಹೋಗಿದೆ, ತೊಂದರೆಯಾಗಿದೆ ಎಂಬ ಬಗ್ಗೆ ಸರಕಾರದವರು ಏನೂ ಹೇಳಲಿಲ್ಲ. ಆ ಬಗ್ಗೆ ಕಂದಾಯ ಮಂತ್ರಿಗಳೂ ಹೇಳಲಿಲ್ಲ, ಮುಖ್ಯಮಂತ್ರಿಗಳೂ ಹೇಳಲಿಲ್ಲ. ಇದರ ಬಗ್ಗೆ ದಯಮಾಡಿ ಏನು ಮಾಡುತ್ತೀರಿ ಎಂಬುದನ್ನು ಹೇಳಬೇಕು.

ಉಪಾಧ್ಯಕ್ಷಿಣಿಯವರು:- ಉತ್ತರವನ್ನು ಕಂದಾಯ ಮಂತ್ರಿಗಳೂ ಹೇಳಿದ್ದಾರೆ. ಮುಖ್ಯಮಂತ್ರಿಯವರೂ ಹೇಳಿದ್ದಾರೆ. ಎಲ್ಲಾ ವಿಷಯಗಳ ಬಗ್ಗೆ ಹೇಳಿದ್ದಾರೆ.

ಶ್ರೀ ಸಿ. ಬೈರೇಗೌಡ:- ಅವರುಗಳು ನಮ್ಮ ಸುದ್ದಿ ಮಾತನಾಡಲೇ ಇಲ್ಲ. ಹೇಳಲೇ ಇಲ್ಲ. ಸಾವಿರಾರು ಎಕರೆಯಲ್ಲಿ ನಮ್ಮಲ್ಲಿ ಈ ವರ್ಷವೂ ಬೆಳೆಗಳು ಹಾಳಾಯಿತು. ಆಲೂಗಡ್ಡೆ, ಟೊಮ್ಯಾಟೋ ಮುಂತಾಗಿ ಎಲ್ಲಾ ಬೆಳೆಗಳೂ ಹಾಳಾಗಿ ಹೋಗಿವೆ. ಒಂದು ಪೈಸೆ ಪರಿಹಾರವೂ ಸಿಗಲಿಲ್ಲ. ಕೋಲಾರ ಜಿಲ್ಲೆಗೆ ಏನು? ಎಲ್ಲಿ ಕೊಟ್ಟಿದ್ದೀರಿ ಎಂಬುದನ್ನು ಹೇಳಬೇಕು. ನಿಮ್ಮಲ್ಲಿ ಅಂಕಿಅಂಶಗಳು ಇದ್ದರೆ ತೆಗೆಯಿರಿ. ಮಳೆಯಿಂದ ಹಾಳಾಗಿರತಕ್ಕಂಥ ಬೆಳೆಯ ಬಗ್ಗೆ ನಾನು

ಹೇಳುತ್ತಾ ಇರುವುದು. ಬಹುಶಃ ಅಲ್ಲಿರತಕ್ಕಂಥ ಪರಿಸ್ಥಿತಿಯ ಬಗ್ಗೆ ಮುಖ್ಯಮಂತ್ರಿಗಳಿಗೂ ಕೂಡ ತಿಳಿಸಿಲ್ಲ ಎಂದು ಕಾಣುತ್ತದೆ.

ಶ್ರೀ ಎಂ. ರಾಜಶೇಖರಮೂರ್ತಿ:- ಕ್ರಾಪ್ ಕಾಂಪನ್‌ಸೇಶನ್ ಎನ್ನುವ ಸ್ಕೀಮ್ ಕೇಂದ್ರದಲ್ಲಿಯೂ ಇಲ್ಲ, ನಮ್ಮಲ್ಲಿಯೂ ಇಲ್ಲ. ನಮಗೆ ಕೊಡತಕ್ಕಂಥಾದ್ದು ಇನ್‌ಪುಟ್ ಸಬ್ಸಿಡಿ ಮಾತ್ರ. ಇದು ಒಂದು ಹೆಕ್ಟೇರ್‌ಗೆ 500 ರೂ.ಗಳು ಎಂದು ಮಾಡಿದ್ದೇವೆ. ಅದನ್ನು ಕೊಡುತ್ತೇವೆ.

ಉಪಾಧ್ಯಕ್ಷಿಣಿಯವರು:- ಈಗ ಚರ್ಚೆ ಮುಗಿದಿದೆ, ಒಂದು ಪ್ರಕಟಣೆ ಇದೆ.

ಪ್ರಕಟಣೆ (1)

ಉಪಾಧ್ಯಕ್ಷರು:- ಒಂದು ಪ್ರಕಟಣೆ ಇದೆ. ವಿಧಾನ ಪರಿಷತ್ತಿನ ಸಭಾಪತಿಯವರಿಂದ ಈ ಕೆಳಕಂಡ ಸಂದೇಶವು ಬಂದಿದೆ:

> ಕರ್ನಾಟಕ ವಿಧಾನ ಪರಿಷತ್ತಿನ ಕಾರ್ಯವಿಧಾನ ಹಾಗೂ ನಡವಳಿಕೆಯ ನಿಯಮ 114ರ ಮೇರೆಗೆ ವಿಧಾನ ಸಭೆಯಿಂದ ಅಂಗೀಕಾರವಾದ ಈ ಕೆಳಕಂಡ ವಿಧೇಯಕಗಳು ಕರ್ನಾಟಕ ವಿಧಾನ ಪರಿಷತ್ತಿನಲ್ಲಿ ದಿನಾಂಕ 11.01.1993ರಂದು ಅನುಮೋದಿಸಲಾಯಿತೆಂದು ತಿಳಿಸುತ್ತೇನೆ

1. ಕರ್ನಾಟಕ ಸಾರ್ವಜನಿಕ ಆವರಣಗಳ (ಅನಧಿಕೃತ ಅಧಿ ಬೋಗದಾರರನ್ನು ಒಕ್ಕಲೆಬ್ಬಿಸುವ) (ತಿದ್ದುಪಡಿ) ವಿಧೇಯಕ, 1992.
2. ಕರ್ನಾಟಕ ಧನ ವಿನಿಯೋಗ ವಿಧೇಯಕ, 1993.

(2) ಉಪಾಧ್ಯಕ್ಷರು:- ವಿಧಾನ ಪರಿಷತ್ತಿನ ಸಭಾಪತಿಯವರಿಂದ ಈ ಕೆಳಕಂಡ ಸಂದೇಶವು ಬಂದಿದೆ:

> 'ಕರ್ನಾಟಕ ವಿಧಾನ ಪರಿಷತ್ತಿನ ಕಾರ್ಯ ವಿಧಾನ ಹಾಗೂ ನಡವಳಿಕೆಯ ನಿಯಮ 11ರ ಮೇರೆಗೆ ವಿಧಾನ ಸಭೆಯಿಂದ ಅಂಗೀಕಾರವಾದ ಈ ಕೆಳಕಂಡ ವಿಧೇಯಕಗಳು ಕರ್ನಾಟಕ ವಿಧಾನ ಪರಿಷತ್ತಿನಲ್ಲಿ ದಿನಾಂಕ 7.1.1993ರಂದು ಅನುಮೋದಿಸಲಾಯಿತೆಂದು ತಿಳಿಸುತ್ತೇನೆ.'

1. ಕರ್ನಾಟಕ ತೆರಿಗೆ ಕಾನೂನುಗಳ (ತಿದ್ದುಪಡಿ) ವಿಧೇಯಕ 1992.
2. ಕರ್ನಾಟಕ ನ್ಯಾಯಾಲಯ ಫೀಜುಗಳ ಮತ್ತು ದಾವೆಗಳ ಮೌಲ್ಯ ನಿಗದಿ (ತಿದ್ದುಪಡಿ) ವಿಧೇಯಕ, 1992.

(3) ಉಪಾಧ್ಯಕ್ಷರು:- ವಿಧಾನ ಸಭಾ ಸದಸ್ಯರು ಶ್ರೀ ಕೆ.ಎಸ್. ಈಶ್ವರಪ್ಪ ಅವರನ್ನು ದಿನಾಂಕ 21.12.92ರಂದು ಮಧ್ಯಾಹ್ನ 4.30 ಗಂಟೆಗೆ ಶಿವಮೊಗ್ಗ ಜಿಲ್ಲೆಯ ಸಾಗರದಲ್ಲಿ ಬಂಧಿಸಿ ಅದೇ ದಿನ ಸಾಯಂಕಾಲ 5.30ಕ್ಕೆ ಬಿಡುಗಡೆ ಮಾಡಲಾಯಿತೆಂದು ಪೋಲೀಸ್ ಸಬ್ ಇನ್ಸ್‌ಪೆಕ್ಟರ್, ಸಾಗರ ಪೇಟೆ ಠಾಣೆ, ಸಾಗರ ಹಾಗೂ ಶ್ರೀ ಸುಭಾಷ್ ಶ್ರೀಧರ್ ಜೋಷಿಯವರನ್ನು ದಿನಾಂಕ 2.1.1993ರಂದು ಮಧ್ಯಾಹ್ನ 1.00 ಗಂಟೆಗೆ ಬಂಧಿಸಿ ಅದೇ ದಿನ ಸಾಯಂಕಾಲ 3.45 ಗಂಟೆಗೆ ಬಿಡುಗಡೆ ಮಾಡಲಾಯಿತೆಂದು ಡೆಪ್ಯೂಟಿ ಇನ್ಸ್‌ಪೆಕ್ಟರ್ ಜನರಲ್ ಆಫ್ ಪೋಲೀಸ್, ಕೊಲ್ಲಾಪುರ ಇವರುಗಳಿಂದ ಸಂದೇಶಬಂದಿರುತ್ತದೆ. ಇವತ್ತಿನ ಅಜೆಂಡಾ ಪ್ರಕಾರ ಇನ್ನೂ ಮೂರು ವಿಷಯಗಳನ್ನು ನಾವು ಚರ್ಚಿಸಬೇಕಾಗಿದೆ. ಕೇಂದ್ರ ಸರ್ಕಾರದ ಗೊಬ್ಬರದ ನೀತಿ ಬಗ್ಗೆ ನಾವು ವಿಚಾರ ಮಾಡಬೇಕಾಗಿದೆ. ಟ್ರಾನ್ಸ್‌ಫಾರ್ಮರ್‌ಗಳು ವಿಫಲವಾದ ಒಂದು ವಿಷಯ. ಹಾಗೂ